# ವಿಕಾಸಾತ್ಮಕ ಮನೋವಿಜ್ಞಾನ

# ಬಾಲ್ಯ ಮತ್ತು ಹದಿ ಹರೆಯ

## Developmental Psychology

## Childhood and Adolescence

9ನೇ ಆವೃತ್ತಿ ಅಧ್ಯಾಯ 12:

## ಲಿಂಗ ವ್ಯತ್ಯಾಸಗಳು ಮತ್ತು ಲಿಂಗತ್ವ ಪಾತ್ರಗಳ ವಿಕಾಸ

ಲಿಂಗ ಮತ್ತು ಲಿಂಗತ್ವವನ್ನು ವ್ಯಾಖ್ಯಾನಿಸುವುದು

ಪುರುಷ-ಸ್ತ್ರೀ ವರ್ಗೀಕರಣ: ಲಿಂಗತ್ವ ಪಾತ್ರಗಳ ಮಾನಕಗಳು

ಲಿಂಗ ವ್ಯತ್ಯಾಸಗಳ ಬಗೆಗಿನ ಕೆಲವು ವಾಸ್ತವಗಳು ಮತ್ತು ಕಲ್ಪನೆಗಳು

ಲಿಂಗತ್ವ ಪ್ರರೂಪಣದಲ್ಲಿನ ವಿಕಾಸಾತ್ಮಕ ಪ್ರವೃತ್ತಿಗಳು

ಲಿಂಗತ್ವ ಪ್ರರೂಪಣ ಮತ್ತು ಲಿಂಗತ್ವ ಸಿದ್ಧಾಂತಗಳು.

**ಸಂಶೋಧನೆಯ ಲಕ್ಷ್ಯ**: ಜೈವಿಕತೆಯೇ ನಿಯತಿಯೇ? ಲಿಂಗ ಮರುನಿಯೋಜನೆಯ ಪ್ರಮಾದಗಳು

ವಿಕಾಸಾತ್ಮಕ ಒಳವಿಷಯವನ್ನು ಲಿಂಗ ವ್ಯತ್ಯಾಸಗಳು ಮತ್ತು ಲಿಂಗತ್ವ- ಪಾತ್ರ ಅನ್ವಯಿಸುವುದು

ಪೀಠಿಕೆ

ನಮಗೆಲ್ಲಾ ಸ್ತ್ರೀ ಮತ್ತು ಪುರುಷರ ನಡುವೆ, ಹಾಗೂ ಹೆಣ್ಣು ಮತ್ತು ಗಂಡು ಮಕ್ಕಳ ನಡುವೆ ದೈಹಿಕ ವ್ಯತ್ಯಾಸಗಳಿವೆ ಎನ್ನುವುದು ಗೊತ್ತಿದೆ. ಆದರೆ ಮಾನಸಿಕ ವ್ಯತ್ಯಾಸಗಳ ಬಗೆಗೆ ಏನು? ಅಂತಹ ವ್ಯತ್ಯಾಸಗಳಿವೆಯೆ? ಇದ್ದರೆ, ಈ ವ್ಯತ್ಯಾಸಗಳು ಎಲ್ಲಿಂದ ಬರುತ್ತವೆ? ನಮ್ಮ ಜೈವಿಕತೆಯೇ? ಅಥವಾ ನಮ್ಮ ಪಾಲನೆಯೇ?

ನಾನು ನನ್ನ ಹರೆಯದ ವಯಸ್ಸಿನ ಮತ್ತು ಪದವಿಪೂರ್ವ ಪ್ರಶಿಕ್ಷಣದ ವರ್ಷಗಳಲ್ಲಿ ಸ್ತ್ರೀ ಮತ್ತು ಪುರುಷರ ನಡುವಿನ ಮಾನಸಿಕ ವ್ಯತ್ಯಾಸಗಳು ಅಪ್ಪಟವಾಗಿ ನಮ್ಮ ಪಾಲನೆ ಅಥವಾ ಸಾಮಾಜಿಕೀಕರಣದ ಕಾರಣದಿಂದ ಆಗುತ್ತವೆ ಎಂದೇ ನಂಬಿದ್ದೆ. ಪಿಯಾಶ್ವೆಯವರ ಭಾಷೆಯಲ್ಲಿ ಹೇಳುವುದಾದರೆ (ಆರನೆಯ ಅಧ್ಯಾಯದಲ್ಲಿ ನಾವು ಕಲಿತ ಹಾಗೆ) ಲಿಂಗ ವ್ಯತ್ಯಾಸಗಳ ಮನೋನಕ್ಷೆ (schema) ನನ್ನಲ್ಲಿತ್ತು, ಮತ್ತು ಆ ಸಂರಚನೆಯು ಜೈವಿಕ ವ್ಯತ್ಯಾಸಗಳು ಮಾನಸಿಕ ವ್ಯತ್ಯಾಸಗಳಿಗೆ

ಕಾರಣವಾಗಬಹುದೆಂಬ ನಂಬಿಕೆಯನ್ನು ಹೊರಗಿಟ್ಟಿತ್ತು. ಇದಕ್ಕೆ ವ್ಯತಿರಿಕ್ತವಾದ ಯಾವುದೇ ಪುರಾವೆಗಳನ್ನು ಬದಲಿಸುತ್ತಾ ಅಥವಾ ಪಿಯಾಜೆ ಹೇಳುವ ಹಾಗೆ ಸ್ವಾಂಗೀಕರಣ (assimilation) ಮಾಡಿಕೊಳ್ಳುತ್ತ ನಾನು ಈ ನಂಬಿಕೆಯನ್ನು ಬಲವಾಗಿ ಹಿಡಿದುಕೊಂಡಿದ್ದೆ.

ನಂತರ ನನಗೆ ಮಕ್ಕಳಾದರು, ನನ್ನ ಮನೋನಕ್ಷೆ ಶಾಶ್ವತವಾಗಿ ಬದಲಾಯಿತು. ನನ್ನ ಇಬ್ಬರೂ ಹೆಣ್ಣುಮಕ್ಕಳ ಚಟುವಟಿಕೆಯ ಮಟ್ಟಗಳು ಬೇರೆ ಬೇರೆಯಾಗಿವೆ, ಸಾಮಾನ್ಯವಾಗಿ ಗಂಡು ಮಕ್ಕಳು ಮತ್ತು ಹೆಣ್ಣುಮಕ್ಕಳ ನಡುವೆ ಇರುವ ಮೂಲಭೂತ ವ್ಯತ್ಯಾಸವನ್ನು (ಗಂಡು ಮಕ್ಕಳ ಚಟುವಟಿಕೆಯ ಮಟ್ಟವು ಹೆಣ್ಣುಮಕ್ಕಳಿಗಿಂತ ಸರಾಸರಿ ಹೆಚ್ಚಿರುತ್ತದೆ) ಚಿತ್ರಿಸುವ ಒಂದು ಜೈವಿಕ ಭಿನ್ನತೆಯು ಗರ್ಭದಲ್ಲಿಯೇ ಸ್ಪಷ್ಟವಾಗಿ ತೋರಿತ್ತು. ಆರಂಭದಿಂದಲೇ ಈ ವ್ಯತ್ಯಾಸವು ನನ್ನ ಹೆಣ್ಣುಮಕ್ಕಳ ಬೆಳವಣಿಗೆಯ ಮೇಲೆ ಪರಿಣಾಮ ಬೀರಿತ್ತು. ನಾನು ಮೊದಲ ಬಾರಿಗೆ ತಾಯಿಯಾಗಿದ್ದರೂ (ಅವರೆಡೆಗಿನ ನನ್ನ ಸ್ಪಂದನೆಯು ಒಂದೇ ಬಗೆಯಲ್ಲಿರುತ್ತದೆ ಎಂದು ನಾನು ಯೋಚಿಸುತ್ತಿದ್ದೆ) ಅವರೆಡೆಗಿನ ನನ್ನ ಸ್ಪಂದನೆಯು ಭಿನ್ನವಾಗಿರುತ್ತಿದ್ದುದು ನನಗೆ ಕಂಡು ಬರುತ್ತಿತ್ತು. ಡೆಬಿಯ ಚಟುವಟಿಕೆಯ ಮಟ್ಟವು ಕಡಿಮೆ ಇತ್ತು ಮತ್ತು ಅವಳಿಗೆ ಮುದ್ದು ಮಾಡಿದರೆ ಬಹಳ ಖುಶಿಯಾಗುತ್ತಿತ್ತು; ರೇಚೆಲ್‌ಳ ಚಟುವಟಿಕೆಯ ಮಟ್ಟ ಹೆಚ್ಚಿತ್ತು ಮತ್ತು ಅವಳಿಗೆ ಗಾಳಿಯಲ್ಲಿ ಹಾರಿಸಿ ಹಿಡಿದರೆ ಬಹಳ ಖುಶಿಯಾಗುತ್ತಿತ್ತು. ಇವರ ಈ ವ್ಯತ್ಯಾಸಗಳು ಅವರ ವ್ಯಕ್ತಿತ್ವಗಳನ್ನು ಮತ್ತು ಆಸಕ್ತಿಗಳನ್ನು ಪ್ರಭಾವಿಸಿದವು. ನಾನು ಅವರಿಬ್ಬರನ್ನೂ ಲಿಂಗತ್ವ-ತಟಸ್ಥ ವಾತಾವರಣದಲ್ಲಿ ಬೆಳೆಸಲು ಯತ್ನಿಸಿದ್ದು, ವಿಶೇಷ ಸಂದರ್ಭಗಳಲ್ಲಿ ಇಬ್ಬರಿಗೂ ಗೊಂಬೆಗಳು ಮತ್ತು ಟ್ರಕ್ಕುಗಳು ಎರಡನ್ನೂ ನೀಡಿದ್ದು ನೆನಪಿದೆ. ಆಶ್ಚರ್ಯವೆಂದರೆ, ಕೆಲವೇ ಗಂಟೆಗಳಲ್ಲಿ “ಗಂಡು ಮಕ್ಕಳ” ಗೊಂಬೆಗಳು ರೇಚೆಲ್‌ಳ ಕೋಣೆಯನ್ನೂ ಮತ್ತು “ಹೆಣ್ಣು ಮಕ್ಕಳ” ಗೊಂಬೆಗಳು ಡೆಬಿಯ ಕೋಣೆಯನ್ನೂ ಸೇರಿದವು.

ನನ್ನ ಹೆಣ್ಣುಮಕ್ಕಳ ನಡುವಿನ ವ್ಯತ್ಯಾಸಗಳು ಜೈವಿಕ ಲಿಂಗ ವ್ಯತ್ಯಾಸಗಳಲ್ಲದಿದ್ದರೂ ಲಿಂಗಗಳ ನಡುವಿನ ಕೆಲವು ವ್ಯತ್ಯಾಸಗಳು ಖಂಡಿತವಾಗಿಯೂ ಜೈವಿಕವೇ ಎಂಬುದನ್ನು ಅರಿತುಕೊಳ್ಳಲು ಅವು ನನಗೆ ಸಹಾಯ ಮಾಡಿದವು.

ಲಿಂಗಗಳ ನಡುವಿನ ಮಾನಸಿಕ ವ್ಯತ್ಯಾಸಗಳ ಬಗ್ಗೆ ನಿಮ್ಮ ಅಭಿಪ್ರಾಯವೇನು? ನಾವು ಮುಂದಿಡುವ ಸಂಶೋಧನಾ ಪುರಾವೆಗಳನ್ನು ಆಧರಿಸಿ ನೀವು ನಿಮ್ಮ ಮನೋನಕ್ಷೆಯನ್ನು ಸಮಾಯೋಜಿಸಲು (accommodate)ಸಿದ್ಧರಿದ್ದೀರಾ? ಮೊದಲು ಲಿಂಗಗಳ ನಡುವೆ ನಿಜಕ್ಕೂ ಯಾವ ವ್ಯತ್ಯಾಸಗಳು ಅಸ್ತಿತ್ವದಲ್ಲಿವೆ ಎನ್ನುವುದನ್ನು ಪರಿಶೀಲಿಸೋಣ. ನಂತರ, ಆ ವ್ಯತ್ಯಾಸಗಳನ್ನು ವಿವರಿಸುವ ಸೈದ್ಧಾಂತಿಕ ವಿವರಣೆಗಳನ್ನು ಪರೀಕ್ಷಿಸೋಣ. ಮುಂದೆ ಸಾಗಿದಂತೆ ನಿಮ್ಮ ಮನೋನಕ್ಷೆ ಬದಲಾಗುತ್ತವೆಯೇ ನೋಡೋಣ.

ಲಿಂಗ ಮತ್ತು ಲಿಂಗತ್ವಗಳ ವ್ಯಾಖ್ಯಾನ:**ಲಿಂಗ :ಇದು ಒಬ್ಬ ವ್ಯಕ್ತಿಯ ಜೈವಿಕ ಅನನ್ಯತೆ: ಅವನ ಅಥವಾ ಅವಳ ವರ್ಣ ತಂತುಗಳು, ಅನನ್ಯತೆಯ ದೈಹಿಕ ಅಭಿವ್ಯಕ್ತಿ ಮತ್ತು**

ಹಾರ್ಮೋನುಗಳ ( ಅಂತರ್ ದ್ರವ) ಪ್ರಭಾವಗಳು.

**ಲಿಂಗತ್ವ. ವ್ಯಕ್ತಿಗೆ ಪುರುಷ ಅಥವಾ ಸ್ತ್ರೀ ಎಂದು ಇರುವ ಸಾಮಾಜಿಕ ಮತ್ತು ಸಾಂಸ್ಕೃತಿಕ ಅನನ್ಯತೆ**

ಆರಂಭಿಸುವುದಕ್ಕೂ ಮೊದಲು ಈ ವಿಷಯಕ್ಕೆ ಸಂಬಂಧಿಸಿದ ಪರಿಭಾಷೆಗಳನ್ನು, ಅದರಲ್ಲೂ ವಿಶೇಷವಾಗಿ ಲಿಂಗ ಮತ್ತು ಲಿಂಗತ್ವದ ನಡುವಿನ ಪಾರಿಭಾಷಿಕ ವ್ಯತ್ಯಾಸಗಳನ್ನು ನಾವು ಅರ್ಥ ಮಾಡಿಕೊಳ್ಳೋಣ. ಈ ಎರಡು ಪರಿಭಾಷೆಗಳ ನಡುವಿನ ವ್ಯತ್ಯಾಸಗಳನ್ನು ವಿಂಗಡಿಸುವುದು ಮನೋವಿಜ್ಞಾನ ಕ್ಷೇತ್ರದಲ್ಲಿ ಬಹಳ ಚರ್ಚೆಗೆ ಒಳಗಾದ ವಿಷಯವಾಗಿದೆ, ಅದು ಇನ್ನೂವರೆಗೂ ಕೊನೆಗೊಂಡಿಲ್ಲ (ಡವ್ 1993; ರೂಬಲ್ ಮತ್ತು ಮಾರ್ಟಿನ್ 1998). *ಲಿಂಗ*ವನ್ನು ಒಬ್ಬ ವ್ಯಕ್ತಿಯ ಜೈವಿಕ ಅನನ್ಯತೆಗೆ ಸಂಬಂಧಿಸಿ ಬಳಸುತ್ತೇವೆ: ವ್ಯಕ್ತಿಯ ವರ್ಣತಂತುಗಳು, ದೈಹಿಕವಾಗಿ ಪ್ರಕಟಗೊಳ್ಳುವ ಅನನ್ಯತೆಯ ಲಕ್ಷಣಗಳು, ಮತ್ತು ಹಾರ್ಮೋನುಗಳ ಪ್ರಭಾವಗಳು – ಈ ಎಲ್ಲವನ್ನೂ ಒಳಗೊಂಡ ಜೈವಿಕ ಅನನ್ಯತೆಯನ್ನು ಇದು ಸೂಚಿಸುತ್ತದೆ. *ಲಿಂಗತ್ವ*ವು, ವ್ಯಕ್ತಿಗಳು ಸ್ತ್ರೀ ಅಥವಾ ಪುರುಷರಾಗಿ ಹೊಂದಿರುವ ಸಾಮಾಜಿಕ ಮತ್ತು ಸಾಂಸ್ಕೃತಿಕ ಅನನ್ಯತೆಯನ್ನು ಸೂಚಿಸುತ್ತದೆ. ಈ ವ್ಯತ್ಯಾಸಗಳನ್ನು ಮನಸ್ಸಿನಲ್ಲಿ ಇಟ್ಟುಕೊಂಡು, ನಾವು ಲಿಂಗ ವ್ಯತ್ಯಾಸಗಳು ಮತ್ತು ಲಿಂಗತ್ವ-ಪಾತ್ರಗಳ ವಿಕಾಸದ ಚರ್ಚೆಯನ್ನು ಆರಂಭಿಸೋಣ.

ಒಂದು ಮಗುವಿನ ಬೆಳವಣಿಗೆಗೆ ಅದರ ಲಿಂಗತ್ವವು ಎಷ್ಟು ಮುಖ್ಯವಾಗುತ್ತದೆ? “ಬಹಳ ಮುಖ್ಯ” ಎಂದು ಬಹಳ ಜನ ಹೇಳುತ್ತಾರೆ. ಪಾಲಕರು ತಮ್ಮ ಶಿಶುವನ್ನು ಕುರಿತು ಅರಿಯುವ ಮೊದಲ ಸಂಗತಿ ಆ ಶಿಶುವಿನ ಲಿಂಗವಾಗಿದೆ ಹಾಗೂ, ತಂದೆ-ತಾಯಿಯರು ತಮ್ಮ ಮಗುವಿನ ಜನನದ ವಿಷಯವನ್ನು ಹೆಮ್ಮೆಯಿಂದ ಅರುಹಿದಾಗ ಅವರ ಸ್ನೇಹಿತರು ಮತ್ತು ಬಂಧುಗಳು ಕೇಳುವ ಮೊದಲ ಪ್ರಶ್ನೆ “ಅದು ಹೆಣ್ಣೋ, ಗಂಡೋ?” ಎನ್ನುವುದು (ಇಂಟನ್ಸ್-ಪೀಟರ್ಸನ್ ಮತ್ತು ರೆಡೆಲ್, 1984). ಈ ರೀತಿ ಲಿಂಗತ್ವದ ಹಣೆಪಟ್ಟಿಯನ್ನು ಹಚ್ಚುವುದರ ಸಂಕೀರ್ಣ ಪರಿಣಾಮಗಳು ಸಾಮಾನ್ಯವಾಗಿ ಶೀಘ್ರಗತಿಯಲ್ಲಿರುತ್ತವೆ ಮತ್ತು ನೇರವಾಗಿರುತ್ತವೆ. ಬಹಳಷ್ಟು ಬಾರಿ ಆಸ್ಪತ್ರೆಯ ಶಿಶುವಿನ ಕೋಣೆಯಲ್ಲಿ ಅಥವಾ ಹೆರಿಗೆ ಕೋಣೆಯಲ್ಲಿ ತಮ್ಮ ಗಂಡು ಶಿಶುವನ್ನು ಪಾಲಕರು “ಭಾರಿ ಆಸಾಮಿ’ (big guy) ಎಂದೋ ಅಥವಾ “ಹುಲಿ”ಯೆಂದೋ (tiger) ಸಂಬೋಧಿಸುತ್ತಿರುತ್ತಾರೆ ಮತ್ತು ಮಗನ ಅಳು, ಕಾಲೊದೆತ, ಹಿಡಿತ ಮುಂತಾದ ಚಟುವಟಿಕೆಗಳ ಕಸುವಿನ ಬಗೆಗೆ ಮಾತನಾಡುತ್ತಾರೆ. ಅದು ಹೆಣ್ಣು ಶಿಶುವಾದರೆ, ಅವಳನ್ನು “ಸಿಹಿ ಮುದ್ದು” (sugar) ಎಂದೋ ಅಥವಾ “ಸ್ವೀಟೀ” ಎಂದೋ ಕರೆಯುತ್ತಿರುತ್ತಾರೆ ಮತ್ತು ಅವಳು ಎಷ್ಟು ಮೃದು, ಮುದ್ದಾಡುವ ಹಾಗಿದ್ದಾಳೆ, ತುಂಬ ಸುಂದರ ಎಂದು ವರ್ಣಿಸುತ್ತಾರೆ (ಮ್ಯಾಕಬಿ, 1980; ಮ್ಯಾಕ್ ಫರ್ಲೇನ್, 1077). ನವಜಾತ ಶಿಶುವಿನ ಲಿಂಗಕ್ಕೆ ಹೊಂದುವ ರೀತಿಯ ಹೆಸರುಗಳನ್ನು ಇಡಲಾಗುತ್ತದೆ ಹಾಗೂ ಪಾಶ್ಚಾತ್ಯ ಸಮಾಜಗಳಲ್ಲಿ ಗಂಡು ಶಿಶುವಿಗೆ ನೀಲಿ ಮತ್ತು ಹೆಣ್ಣು ಶಿಶುವಿಗೆ ಗುಲಾಬಿ ಬಣ್ಣದ ಉಡುಗೆ, ವಸ್ತ್ರ, ಮತ್ತು ಇತರ ಅಲಂಕರಣಗಳು ಇರುತ್ತವೆ. “ತಾವು

ವೀಕ್ಷಿಸುತ್ತಿರುವುದು ಬಾಲಕರನ್ನೋ ಅಥವಾ ಬಾಲಕಿಯರನ್ನೋ ಎಂಬುದು ತಮ್ಮ ಪರಿವೀಕ್ಷಕರಿಗೆ (observers) ತಿಳಿಯಬಾರದು" ಎಂದು ಬಯಸಿದ್ದ ವಿಕಾಸವಾದಿ ಮನೋವಿಜ್ಞಾನಿಯೊಬ್ಬರ ಇಕ್ಕಟ್ಟನ್ನು ಮಾವಿಸ್ ಹೆದರಿಂಗ್ಟನ್ ಮತ್ತು ರೋಸ್ ಪಾರ್ಕ್ (1975, ಪು. 354-355) ವರ್ಣಿಸುತ್ತಾರೆ:

> "ಹುಟ್ಟಿ ಕೆಲವೇ ದಿನಗಳಾದ ಶಿಶುಗಳನ್ನು ಪ್ರಯೋಗಾಲಯಕ್ಕೆ ಕರೆತರುವಾಗ ಕೆಲವು ಹೆಣ್ಣುಶಿಶುಗಳ ಪುಡಿ ಕೂದಲಿಗೆ ಅಥವಾ ಕೂದಲೇ ಇಲ್ಲದ ತಲೆಗೆ ಗುಲಾಬಿ ಟೇಪುಗಳನ್ನು ಕಟ್ಟಿರಲಾಗುತ್ತಿತ್ತು. . . ಮಕ್ಕಳ ಲಿಂಗ ಗೊತ್ತಾಗದಂತೆ ಅವರ ಉಡುಪುಗಳನ್ನು ಮುಚ್ಚುವ ಮತ್ತೊಂದು ಮೇಲು-ದಿರಿಸನ್ನು (overalls) ಹಾಕಿಕೊಂಡು ಕರೆತನ್ನಿ ಎಂದು ಹೇಳಿದರೆ, ಹೆಣ್ಣು ಮಕ್ಕಳನ್ನು ಗುಲಾಬಿ ಬಣ್ಣದ ಮೇಲು-ದಿರಿಸಿನೊಂದಿಗೆ ಮತ್ತು ಗಂಡುಮಕ್ಕಳನ್ನು ನೀಲಿ ಮೇಲು-ದಿರಿಸಿನೊಂದಿಗೆ ಕರೆತಂದಿದ್ದರು, ಮೇಲು-ದಿರಿಸಿಗೂ ಕುಚ್ಚುಗಳು ಇದ್ದವು, ನಂಬುತ್ತೀರಾ?"

ಈ ಲಿಂಗತ್ವ ಸಾಮಾಜಿಕೀಕರಣವು ಶೈಶವದಿಂದ ಪಾಲಕರು ತಮ್ಮ ಮಕ್ಕಳಿಗೆ " ಲಿಂಗತ್ವ -ಸಮರ್ಪಕ ' ಉಡುಪು, ಆಟಿಗೆ, ಕೇಶವಿನ್ಯಾಸ ಒದಗಿಸುವುದರಿಂದ ಮುಂದುವರಿಯುತ್ತದೆ (ಪೊಮೇರ್ಲೂ ಮತ್ತಿತರರು., 1990). ಅವರು ತಮ್ಮ ಪುಟ್ಟ ಮಗ ಮತ್ತು ಮಗಳ ಜೊತೆ ಭಿನ್ನವಾಗಿ ಆಡುತ್ತಾರೆ ಮತ್ತು ವಿಭಿನ್ನ ಪ್ರತಿಕ್ರಿಯೆಗಳನ್ನು ನಿರೀಕ್ಷಿಸುತ್ತಾರೆ. (ಬೋರ್ನ್‌ಸ್ಟೀನ್ ಮತ್ತಿತರರು., 1999; ಕಾಲ್ಡೇರಾ, ಹೂಸ್ಟನ್, ಮತ್ತು ಓ' ಬ್ರಿಯಾನ್, 1989). ಉದಾಹರಣೆಗೆ, ಪಾಲಕರು ತಮ್ಮ ಹೆಣ್ಣು ಮಕ್ಕಳು ಮತ್ತು ಗಂಡುಮಕ್ಕಳಿಗೆ ಅವರ ಲಿಂಗಕ್ಕೆ ಸೂಕ್ತವಾದ ಆಟಿಕೆಗಳೊಂದಿಗೆ ಆಡುವಂತೆ ಸೂಕ್ಷ್ಮವಾಗಿ ಉತ್ತೇಜಿಸುತ್ತಾರೆ. ಅಲ್ಲದೇ, ತಮ್ಮ ಹೆಣ್ಣು ಮಕ್ಕಳು ಸ್ತ್ರೀ-ಲಿಂಗ ಪ್ರಕಾರದ ಆಟಿಕೆಗಳೊಂದಿಗೆ ಆಡುವಾಗ ನಿಕಟವಾಗಿದ್ದು ಹೆಚ್ಚಿನ ಮಾತು-ಸಂಭಾಷಣೆಗಳ ಮೂಲಕ ಆಡುತ್ತಾರೆ, ಅದೇ ಅಷ್ಟು ಪ್ರಮಾಣದ ಸ್ಪಂದನೆಯು ಅವರ ಗಂಡು ಮಕ್ಕಳು ಪುರುಷ-ಲಿಂಗ ಪ್ರಕಾರದ ಆಟಿಕೆಗಳೊಂದಿಗೆ ಆಡುವಾಗ ಇರುವುದಿಲ್ಲ. ಇದರಿಂದಾಗಿ ಮಗುವಿನ ಪೋಷಕರು ಗಂಡು ಅಥವಾ ಹೆಣ್ಣುಮಗುವಿಗೆ ಅವರು ನೀಡುವ ಸ್ಪಂದನೆ ಮತ್ತು ಕಾಳಜಿಗಳ ಮೇಲೆ ಪ್ರಭಾವ ಬೀರುವ ರೀತಿಯಲ್ಲಿ ಲಿಂಗತ್ವವನ್ನು ಬಹಳ ಮುಖ್ಯವಾದ ಗುಣಲಕ್ಷಣವೆಂದು ಭಾವಿಸುತ್ತಾರೆ ಎನ್ನುವುದು ಸ್ಪಷ್ಟವಾಗುತ್ತದೆ.

ಚಿತ್ರ:,ಪಾಲಕರು ಶಿಶುವಿಗೆ 'ಲಿಂಗತ್ವ-ಸೂಕ್ತ' ಉಡುಪು, ಆಟಿಕೆ ಮತ್ತು ಕೇಶಶೈಲಿ ನೀಡುವುದರಿಂದ ಲಿಂಗತ್ವ-ಪಾತ್ರ ಸಮಾಜಿಕರಣ ಬಹು ಬೇಗ ಪ್ರಾರಂಭವಾಗುತ್ತದೆ

ಜನರು ಪುರುಷ ಮತ್ತು ಸ್ತ್ರೀಯರಿಗೆ ಏಕೆ ವಿಭಿನ್ನವಾಗಿ ಪ್ರತಿಕ್ರಿಯಿಸುತ್ತಾರೆ? ಇದಕ್ಕಿರುವ ಒಂದು ವಿವರಣೆಯು ಲಿಂಗಗಳ ನಡುವಿನ ಜೈವಿಕ ವ್ಯತ್ಯಾಸಗಳಿಗೆ ಸಂಬಂಧ ಪಟ್ಟುದಾಗಿದೆ. ಮಕ್ಕಳ ಲಿಂಗವನ್ನು ತಂದೆಯು ನಿರ್ಧರಿಸುತ್ತಾನೆ ಎಂಬುದನ್ನು ನೆನಪಿಡಿ. ತಂದೆ-ತಾಯಿ ಇಬ್ಬರಿಂದಲೂ X ವರ್ಣತಂತುವನ್ನು ಪಡೆಯುವ ಯುಗ್ಮಕೋಶ ಆನುವಂಶಿಕ ಹೆಣ್ಣಾಗಿರುತ್ತದೆ (XX) ಮತ್ತು ಮುಂದೆ ಅದು ಹೆಣ್ಣು ಶಿಶುವಾಗಿ ರೂಪುಗೊಳ್ಳುತ್ತದೆ. ತಂದೆಯಿಂದ Y ವರ್ಣತಂತುವನ್ನು ಪಡೆಯುವ ಯುಗ್ಮಕೋಶ ಆನುವಂಶಿಕ ಗಂಡಾಗಿರುತ್ತದೆ (XY) ಮತ್ತು ನಂತರ ಅದು ಗಂಡು ಶಿಶುವಾಗಿ ರೂಪುಗೊಳ್ಳುತ್ತದೆ. ಲಿಂಗಗಳ ನಡುವಿನ ಈ ಮೂಲಭೂತ ಆನುವಂಶಿಕ ವ್ಯತ್ಯಾಸವೇ ಅಂತಿಮವಾಗಿ *ವರ್ತನೆಯಲ್ಲಿನ ಲಿಂಗ ವ್ಯತ್ಯಾಸಗಳಿಗೆ* ಕಾರಣವಾಗುತ್ತದೆಯೆ? ತಮ್ಮ ಗಂಡು ಮತ್ತು ಹೆಣ್ಣು ಮಕ್ಕಳನ್ನು ಪಾಲಕರು ಏಕೆ

ಒಂದೇ ತೆರನಾಗಿ ನೋಡುವುದಿಲ್ಲ ಎನ್ನುವುದನ್ನು ಇದು ವಿವರಿಸುತ್ತದೆಯೆ? ಈ ಸ್ವಾರಸ್ಯದಾಯಕ ಕಲ್ಪನೆಯನ್ನು ಈ ಅಧ್ಯಾಯದಲ್ಲಿ ಮುಂದೆ ಇನ್ನೂ ವಿಸ್ತೃತವಾಗಿ ಶೋಧಿಸಲಾಗುವುದು.

ಲಿಂಗ ವ್ಯತ್ಯಾಸಗಳಿಗೆ ಜೈವಿಕ ಕಾರಣಗಳಿಗಿಂತ ಹೆಚ್ಚಿನದು ಇವೆ. ಪುರುಷ ಮತ್ತು ಸ್ತ್ರೀಯರು ಭಿನ್ನವಾಗಿ ವರ್ತಿಸುತ್ತಾರೆ ಮತ್ತು ವಿಭಿನ್ನ ಪಾತ್ರಗಳನ್ನು ಹೊಂದಿರುತ್ತಾರೆ ಎಂದು ಹೆಚ್ಚುಕಡಿಮೆ ಎಲ್ಲಾ ಸಮಾಜಗಳೂ ನಿರೀಕ್ಷಿಸುತ್ತವೆ.. ಈ ನಿರೀಕ್ಷೆಗಳಿಗೆ ಹೊಂದಿಕೊಳ್ಳಲು, ತಾನು ಒಬ್ಬ ಹುಡುಗ, ಅಥವಾ ತಾನು ಒಬ್ಬಳು ಹುಡುಗಿ ಎಂದು ಮಗುವು ಅರ್ಥ ಮಾಡಿಕೊಳ್ಳಬೇಕು ಮತ್ತು ತನ್ನಲ್ಲಿ ತಾನು ಈ ಮಾಹಿತಿಯನ್ನು ಅಳವಡಿಸಿಕೊಳ್ಳಬೇಕು. ಈ ಅಧ್ಯಾಯದಲ್ಲಿ ನಾವು **ಲಿಂಗತ್ವ ಪುರೂಪಣ (Gender typing)** ಎಂಬ ಒಂದು ಆಸಕ್ತಿಕರ ವಿಷಯದ ಮೇಲೆ ನಮ್ಮ ಗಮನವನ್ನು ಕೇಂದ್ರೀಕರಿಸೋಣ. ಮಕ್ಕಳು ಕೇವಲ ತಮ್ಮ ಲಿಂಗತ್ವ ಅನನ್ಯತೆಯನ್ನಷ್ಟೇ ಅಲ್ಲದೆ, ತಮ್ಮ ಸಂಸ್ಕೃತಿಯೊಳಗೆ ತಮ್ಮ ಜೈವಿಕ ಲಿಂಗದ ಸದಸ್ಯರಿಗೆ ಸೂಕ್ತ ಎನಿಸಿದ ಅಭಿಪ್ರೇರಕಗಳು, ಮೌಲ್ಯಗಳು ಮತ್ತು ವರ್ತನೆಗಳನ್ನು ಕೂಡಾ ದಕ್ಕಿಸಿಕೊಳ್ಳುವ ಒಂದು ಪ್ರಕ್ರಿಯೆಯನ್ನು ಲಿಂಗತ್ವ ಪುರೂಪಣವೆನ್ನುವರು.

**ಲಿಂಗತ್ವ ಪುರೂಪಣ**: ಮಗುವು ತನ್ನ ಲಿಂಗತ್ವವನ್ನು ಅರಿಯುವ ಮತ್ತು ತನ್ನ ಸಂಸ್ಕೃತಿಯೊಳಗೆ

ತನ್ನ ಲಿಂಗದ ಸದಸ್ಯರಿಗೆ ಸೂಕ್ತ ಎನಿಸಿರುವ ಅಭಿಪ್ರೇರಕಗಳು, ಮೌಲ್ಯಗಳು ಮತ್ತು ವರ್ತನೆಗಳನ್ನು

ಅರ್ಜಿಸಿಕೊಳ್ಳುವ ಪ್ರಕ್ರಿಯೆ.

ಈ ಅಧ್ಯಾಯವನ್ನು ಸಾಮಾನ್ಯವಾಗಿ ಜನರು ಲಿಂಗ ವ್ಯತ್ಯಾಸಗಳಿಗೆ ಸಂಬಂಧಿಸಿದಂತೆ ಸಂಜ್ಞಾನ, ವ್ಯಕ್ತಿತ್ವ ಮತ್ತು ಸಾಮಾಜಿಕ ವರ್ತನೆಯಲ್ಲಿ ಯಾವುದನ್ನು ಸತ್ಯ ಎಂದು ನಂಬುತ್ತಾರೋ ಅಂತಹವುಗಳನ್ನು ಸಾರಾಂಶೀಕರಿಸುವ ಮೂಲಕ ನಾವು ಆರಂಭಿಸುತ್ತೇವೆ. ಈ ನಂಬಿಕೆಗಳಲ್ಲಿ ಕೆಲವು ಸತ್ಯಾಂಶಗಳನ್ನು ಹೊಂದಿರುತ್ತವೆಯಾದರೂ ಇತರ ನಂಬಿಕೆಗಳನ್ನು ವಾಸ್ತವದ ಆಧಾರವಿಲ್ಲದ ಕಲ್ಪಿತ ಸಂಗತಿಗಳು ಅಥವಾ ಕಟ್ಟುಕತೆಗಳು ಎಂದೇ ವರ್ಣಿಸಬೇಕಾಗುತ್ತದೆ. ನಂತರ ಲಿಂಗತ್ವ ಪುರೂಪಣದಲ್ಲಿನ ವಿಕಾಸಾತ್ಮಕ ಪ್ರವೃತ್ತಿಗಳತ್ತ ಗಮನ ಹರಿಸಿ, ಚಿಕ್ಕಮಕ್ಕಳು ತಾವು ಶಿಶುವಿಹಾರಗಳಿಗೆ ಹೋಗುವ ವಯಸ್ಸಿಗೂ ಮೊದಲೇ ಲಿಂಗತ್ವ ಪಾತ್ರ ರೂಢ ಮಾದರಿರೂಢಮಾದರಿಗಳನ್ನು ಚೆನ್ನಾಗಿ ಅರಿತಿರುತ್ತಾರೆ ಮತ್ತು ವರ್ತನೆಗಳ ಲಿಂಗತ್ವ ಪುರೂಪಿತ ಮಾದರಿಗಳನ್ನು ಪ್ರದರ್ಶಿಸುತ್ತಿರುತ್ತಾರೆ ಎನ್ನುವುದನ್ನು ನೋಡೋಣ. ಅಷ್ಟು ಚಿಕ್ಕ ವಯಸ್ಸಿನಲ್ಲಿಯೇ ಮಕ್ಕಳು ಹೇಗೆ ಲಿಂಗ ಮತ್ತು ಲಿಂಗತ್ವ ಪಾತ್ರಗಳ ಬಗೆಗೆ ಕಲಿಯುತ್ತಾರೆ? ಹೇಗೆ ಜೈವಿಕ ಒತ್ತಾಯಗಳು, ಸಾಮಾಜಿಕ ಅನುಭವಗಳು ಮತ್ತು ಸಂಜ್ಞಾನಾತ್ಮಕ ವಿಕಾಸವು ಒಟ್ಟಾಗಿ ಅಂತರಕ್ರಿಯೆಯಿಂದ ಲಿಂಗತ್ವ ಪುರೂಪಣದ ಪ್ರಕ್ರಿಯೆಯನ್ನು ಪ್ರಭಾವಿಸುತ್ತವೆ ಎಂದು ಸ್ಪಷ್ಟಪಡಿಸುವ ಹಲವು ಪ್ರಭಾವಶಾಲೀ ಸಿದ್ಧಾಂತಗಳನ್ನು ಪರಿಶೀಲಿಸುವ ಮೂಲಕ ಈ ವಿಷಯಕ್ಕೆ ಉತ್ತರಿಸುತ್ತೇವೆ. ನಂತರ ಇಂದಿನ ಆಧುನಿಕ ಸಮಾಜದಲ್ಲಿ ಸಾಂಪ್ರದಾಯಿಕ ಲಿಂಗತ್ವ ಪಾತ್ರಗಳು ತಮ್ಮ ಉಪಯುಕ್ತತೆ ಕಳೆದುಕೊಂಡಿವೆ ಎಂದು ಸಾಧಿಸುವ ಒಂದು ದೃಷ್ಟಿಕೋನವನ್ನು

ಪರೀಕ್ಷಿಸಲಾಗುವುದು. ನಿರ್ಬಂಧಗೊಳಿಸುವ ಮತ್ತು ಸಂಭಾವ್ಯವಾಗಿ ಹಾನಿಕಾರಕವಾದ ಲಿಂಗತ್ವ ರೂಢ ಮಾದರಿಗಳ ಪರಿಣಾಮಗಳನ್ನು ಹೇಗೆ ದುರ್ಬಲಗೊಳಿಸುವುದು ಎಂಬುದನ್ನು ಪರಿಗಣಿಸುವ ಮೂಲಕ ಈ ಅಧ್ಯಾಯವು ಕೊನೆಗೊಳ್ಳುತ್ತದೆ.

## ಪುರುಷರು ಮತ್ತು ಸ್ತ್ರೀಯರು ಎಂಬ ವರ್ಗೀಕರಣ: ಲಿಂಗತ್ವ- ಪಾತ್ರ ಮಾನಕಗಳು

ನಮ್ಮಲ್ಲಿ ಬಹುತೇಕ ಜನ ಕಾಲೇಜಿಗೆ ಬರುವ ವೇಳೆಗೆ ಪುರುಷರು ಮತ್ತು ಸ್ತ್ರೀಯರನ್ನು ಕುರಿತು ಬಹಳಷ್ಟನ್ನು ಕಲಿತಿರುತ್ತೇವೆ. ನಿಮಗೆ ಅಥವಾ ನಿಮ್ಮ ಸಹಪಾಠಿಗಳಿಗೆ ಪುರುಷರು ಮತ್ತು ಸ್ತ್ರೀಯರು ವಿಭಿನ್ನವಾಗಿರುವ 10 ಮಾನಸಿಕ ಆಯಾಮಗಳನ್ನು ಪಟ್ಟಿ ಮಾಡಿ ಎಂದು ಹೇಳಿದರೆ ತರಗತಿಯ ಪ್ರತಿಯೊಬ್ಬರೂ ಸುಲಭವಾಗಿ ಅಂತಹ ಪಟ್ಟಿಯೊಂದನ್ನು ತಯಾರು ಮಾಡಬಹುದು. ಇಲ್ಲಿದೆ ಒಂದು ಪ್ರಾರಂಭಾನುಕೂಲ: ಸಂವೇಗಗಳನ್ನು ಬಹಳವಾಗಿ ಪ್ರಕಟಪಡಿಸುವ ಸಂಭಾವ್ಯ ಲಿಂಗ ಯಾವುದು? ಒಪ್ಪ-ಓರಣವಾಗಿರುವುದು? ಸ್ಪರ್ಧಾತ್ಮಕವಾಗಿರುವುದು? ಒರಟು ಭಾಷೆ ಉಪಯೋಗಿಸುವುದು?

ಲಿಂಗತ್ವ ಪಾತ್ರ ಮಾನಕ: ಸಮಾಜದ ಸದಸ್ಯರು ಒಂದು ಲಿಂಗದ ಸದಸ್ಯರಿಗೆ ವಿಶಿಷ್ಟವಾದ

ಅಥವಾ ಸೂಕ್ತವಾದ ವರ್ತನೆ, ಮೌಲ್ಯ ಅಥವಾ ಅಭಿಪ್ರೇರಣೆ ಎಂದು ಪರಿಗಣಿಸಿರುವುದು.

**ಲಿಂಗತ್ವ-ಪಾತ್ರ ಮಾನಕವನ್ನು** ಒಂದು ಮೌಲ್ಯ, ಒಂದು ಅಭಿಪ್ರೇರಣೆ, ಅಥವಾ ಒಂದು ವರ್ಗದ ವರ್ತನೆಯು ಒಂದು ಲಿಂಗದವರಿಗೆ ಇನ್ನೊಂದು ಲಿಂಗದವರಿಗಿಂತ ಹೆಚ್ಚು ಯುಕ್ತವೆಂದು ಪರಿಗಣಿಸಲಾಗಿದೆ . ಒಟ್ಟಾರೆ, ಸಮಾಜದ ಲಿಂಗತ್ವ-ಪಾತ್ರ ಮಾನಕಗಳು ಪುರುಷರು ಮತ್ತು ಸ್ತ್ರೀಯರು ಹೇಗೆ ವರ್ತಿಸಬೇಕು ಎನ್ನುವ ನಿರೀಕ್ಷೆಗಳನ್ನು ವರ್ಣಿಸುತ್ತವೆ ಮತ್ತು ನಾವು ಪ್ರತಿ ಲಿಂಗದ ಸದಸ್ಯರನ್ನು ವರ್ಗೀಕರಿಸುವ ಹಾಗೂ ಅವರಿಗೆ ಸ್ಪಂದಿಸಲು ಬಳಸುವ ರೂಢ ಮಾದರಿಪ್ರತಿಫಲಿಸುತ್ತವೆ.

ಹೆಣ್ಣಿನ ಮಗು ಹೆರುವ ಪಾತ್ರ ನಮ್ಮ ಸಮಾಜವೂ ಸೇರಿದಂತೆ ಅನೇಕ ಸಮಾಜಗಳಲ್ಲಿ ಪ್ರಚಲಿತವಿರುವ ಲಿಂಗತ್ವ-ಪಾತ್ರ ಮಾನಕ ರೂಢಮಾದರಿಗಳಿಗೆ ಕಾರಣವಾಗಿದೆ. ಹುಡುಗಿಯರಿಗೆ ಸಾಧಾರಣವಾಗಿ ಕಾರುಣ್ಯ, ಪೋಷಕತೆ, ಸಹಕಾರಿತ್ವ ಮತ್ತು ಇತರರ ಅಗತ್ಯಗಳಿಗೆ ಸಂವೇದನಾಶೀಲತೆಯನ್ನು ಒಳಗೊಂಡ ಅಭಿವ್ಯಕ್ತ / **ಅಭಿವ್ಯಂಜಕ ಪಾತ್ರ**ವನ್ನು ವಹಿಸಿಕೊಳ್ಳುವಂತೆ ಪ್ರೋತ್ಸಾಹಿಸಲಾಗುತ್ತದೆ (ಕಾನ್‌ವೇ ಮತ್ತು ವರ್ತಾನಿಯನ್, 2000; ಕಿಂಗ್, 2012; ಮಾಟ್ಲಿನ್, 2012). ಈ ಮಾನಸಿಕ ಗುಣವಿಶೇಷಗಳು (traits,) ಬಾಲಕಿಯರನ್ನು ಪತ್ನಿ ಮತ್ತು ತಾಯಿಯ ಪಾತ್ರ ನಿರ್ವಹಿಸಲು, ಕುಟುಂಬವನ್ನು ನಡೆಸಲು ಮತ್ತು ಮಕ್ಕಳನ್ನು ಯಶಸ್ವಿಯಾಗಿ

ಬೆಳೆಸಲು ತಯಾರು ಮಾಡುತ್ತವೆ ಎಂದು ಭಾವಿಸಲಾಗಿತ್ತು. ಬಾಲಕರಿಗೆ ಪ್ರಭಾವೀ, ಸ್ವ-ಸಮರ್ಥನೀಯ, ಸ್ವತಂತ್ರ ಮತ್ತು ಸ್ಪರ್ಧಾತ್ಮಕವಾದ **ಕಾರಣಭೂತ ಪಾತ್ರ**ಗಳನ್ನು ವಹಿಸಿಕೊಳ್ಳಲು ಪ್ರೋತ್ಸಾಹಿಸಲಾಗುತ್ತದೆ. ಈ ಮಾನಸಿಕ ಗುಣವಿಶೇಷಗಳು ಬಾಲಕರನ್ನು ಒಂದು ಸಾಂಪ್ರದಾಯಿಕ ಪತಿ ಮತ್ತು ತಂದೆಯ ಪಾತ್ರವನ್ನು ನಿರ್ವಹಿಸಲು, ಕುಟುಂಬದ ಅಗತ್ಯಗಳನ್ನು ಪೂರೈಸಲು ಮತ್ತು ಕುಟುಂಬವನ್ನು ಆಪತ್ತಿನಿಂದ ರಕ್ಷಿಸಲು ತಯಾರು ಮಾಡುತ್ತದೆ ಎಂದು ಭಾವಿಸಲಾಗುತ್ತಿತ್ತು. ಇದೇ ರೀತಿಯ  ನಿಯಮಗಳು ಮತ್ತು ಪಾತ್ರಗಳಿಗೆ ಸಂಬಂಧಿಸಿದ ವಿಧಾಯಕಗಳು ಎಲ್ಲಾ ಸಮಾಜಗಳಲ್ಲಿ ಅಲ್ಲದಿದ್ದರೂ ಹೆಚ್ಚಿನ ಸಮಾಜಗಳಲ್ಲಿ ಕಂಡುಬರುತ್ತವೆ (ವೇಡ್ ಮತ್ತು ಟಾವ್ರಿಸ್, 1999; ವಿಲಿಯಮ್ಸ್ ಮತ್ತು ಬೆಸ್ಟ್, 1990). ಹರ್ಬರ್ಟ್ ಬ್ಯಾರಿ, ಮಾರ್ಗರೆಟ್ ಬೇಕನ್ ಮತ್ತು ಇರ್ವಿಂಗ್ ಚೈಲ್ಡ್ ರವರು (1957) ಸೇರಿ ನಡೆಸಿದ ಒಂದು ಮಹತ್ವಾಕಾಂಕ್ಷಿ ಅಧ್ಯಯನದಲ್ಲಿ ಕೈಗಾರಿಕೀಕರಣಗೊಳ್ಳದ 110 ಸಮಾಜಗಳಲ್ಲಿ ಲಿಂಗತ್ವ ಪ್ರರೂಪಣದ ಆಚರಣೆಗಳಲ್ಲಿ ಪೋಷಕತೆ, ವಿಧೇಯತೆ, ಬಾಧ್ಯತೆ, ಸಾಧನೆ, ಮತ್ತು ಸ್ವ-ನಿರ್ಭರತೆ ಎಂಬ  ಐದು ವಿಶೇಷ ಲಕ್ಷಣಗಳ ಸಾಮಾಜಿಕೀಕರಣದಲ್ಲಿ ಲಿಂಗ ವ್ಯತ್ಯಾಸಗಳನ್ನು ಪರೀಕ್ಷಿಸಲಾಯಿತು. ಕೋಷ್ಟಕ 12.1ರಲ್ಲಿ ತೋರಿಸಿದ ಹಾಗೆ ಬಾಲಕರಿಗೆ ಸಾಧನೆ ಮತ್ತು ಸ್ವ-ಅವಲಂಬನೆಯತ್ತ ಗುರಿಯಿಡಲು ಹೆಚ್ಚು ಪ್ರೋತ್ಸಾಹಿಸಲಾಯಿತು. ಅದೇ ಬಾಲಕಿಯರಿಗಾದರೆ ಪಾಲನೆ-ಪೋಷಣೆ ಮಾಡುತ್ತ, ಜವಾಬ್ದಾರಿಯುತರಾಗಿ ಮತ್ತು ವಿಧೇಯರಾಗಿ ಬೆಳೆಯಲು ಪ್ರೋತ್ಸಾಹ ಸಿಕ್ಕಿತ್ತು (ಬೆಸ್ಟ್ ಮತ್ತು ವಿಲಿಯಮ್ಸ್, 1997 ಅನ್ನೂ ನೋಡಿ)

**ಲಿಂಗತ್ವ-ಪಾತ್ರ ಮಾನಕ**: ಒಂದು ಲಿಂಗಕ್ಕೆ ಸೇರಿದ ಸದಸ್ಯರಿಗೆ ಮಾತ್ರ ವಿಶಿಷ್ಟವಾದ ಅಥವಾ ಸೂಕ್ತ ಎಂದು ಒಂದು ಸಮಾಜದ ಸದಸ್ಯರು ಪರಿಗಣಿಸುವ ಒಂದು ವರ್ತನೆ, ಮೌಲ್ಯ ಅಥವಾ ಅಭಿಪ್ರೇರಣೆ.

**ಅಭಿವ್ಯಂಜಕ / ಅಭಿವ್ಯಕ್ತ ಪಾತ್ರ**: ಒಂದು ಸಾಮಾಜಿಕ ವಿಧಾಯಕ. ಸ್ತ್ರೀಯರು ಸಹಕಾರಿಗಳು, ಕರುಣರು, ಪೋಷಕರು, ಮತ್ತು ಇತರರ ಅಗತ್ಯಗಳಿಗೆ ಸಂವೇದನಾಶೀಲರಾಗಿರಬೇಕು ಎಂದು ಸಾಮಾನ್ಯವಾಗಿ ಸ್ತ್ರೀಯರನ್ನೇ ಉದ್ದೇಶಿಸಿರುತ್ತದೆ;

**ಕಾರಣಭೂತ ಪಾತ್ರ**:  ಒಂದು ಸಾಮಾಜಿಕ ವಿಧಾಯಕ. ಪುರುಷರು ಪ್ರಭಾವೀ, ಸ್ವ-ಸಮರ್ಥನೀಯ, ಸ್ವತಂತ್ರ ಮತ್ತು ಸ್ಪರ್ಧಾತ್ಮಕ ಮತ್ತು ಗುರಿಯನ್ನುಲಕ್ಷ್ಯದಲ್ಲಿಟ್ಟುಕೊಂಡವರು ಎಂದು ಸಾಮಾನ್ಯವಾಗಿ ಪುರುಷರನ್ನು ಉದ್ದೇಶಿರುತ್ತದೆ. ಔದ್ಯೋಗೀಕೃತ ಆಧುನಿಕ ಸಮಾಜಗಳಲ್ಲಿ ಬೆಳೆದ ಮಕ್ಕಳೂ ಸಹ ಔದ್ಯೋಗೀಕರಣಗೊಳ್ಳದ  ಸಮಾಜದ ಮಕ್ಕಳಷ್ಟು ಪ್ರಮಾಣ ಮತ್ತು ವಿಧವಾಗಿ ಅಲ್ಲದಿದ್ದರೂ, ಬಲವಾದ ಲಿಂಗತ್ವ ಪ್ರರೂಪಣದ ಒತ್ತಡಗಳನ್ನು ಅನುಭವಿಸುತ್ತಾರೆ. ಸಂಸ್ಕೃತಿಗಳ ನಡುವೆ ಲಿಂಗತ್ವ ಪ್ರರೂಪಣದಲ್ಲಿರುವ ವ್ಯತ್ಯಾಸಕ್ಕೆ ಒಂದು ಉದಾಹರಣೆಯೆಂದರೆ, ಪಾಶ್ಚಾತ್ಯ ಸಮಾಜಗಳ ಅನೇಕ ಪಾಲಕರು ಮಗ ಮತ್ತು ಮಗಳು ಇಬ್ಬರ ಸಾಧನೆಯ ಮೇಲೆ ಸಮಾನವಾದ ಒತ್ತು ನೀಡುವ ಮೂಲಕ ಸಾಧನಾ ಅಭಿಪ್ರೇರಣೆಯ ಲಿಂಗತ್ವ-ಪ್ರರೂಪಣೆ ಮಾಡುವುದಿಲ್ಲ (ಲಿಟನ್ ಮತ್ತು ರೋಮ್ನಿ, 1991). ಅದಲ್ಲದೇ, 12.1 ನೇ ಕೋಷ್ಟಕದಲ್ಲಿನ ವಿವರಗಳಲ್ಲಿ ಬಾಲಕಿಯರ ಸ್ವ-ಅವಲಂಬನೆಗೆ ಅಸಹನೆ ಅಥವಾ  ಬಾಲಕರ ಅವಿಧೇಯತೆಗೆ ಒಪ್ಪಿಗೆ ಇದೆ ಎಂಬ ಇಂಗಿತವಿಲ್ಲ. ವಾಸ್ತವದಲ್ಲಿ ಬ್ಯಾರಿ ಮತ್ತು ಅವರ ಸಹೋದ್ಯೋಗಿಗಳು ಅಧ್ಯಯನ ಮಾಡಿದ ಐದೂ ಗುಣಲಕ್ಷಣಗಳನ್ನು ಬಾಲಕರು ಮತ್ತು ಬಾಲಕಿಯರು ಇಬ್ಬರಲ್ಲಿಯೂ

ಉತ್ತೇಜಿಸಲಾಗುತ್ತದೆ, ಆದರೆ ಮಗುವಿನ ಜೈವಿಕ ಲಿಂಗವನ್ನು ಅವಲಂಬಿಸಿ ವಿಭಿನ್ನ ಗುಣಲಕ್ಷಣಗಳ ಮೇಲೆ ನೀಡುವ ಪ್ರಾಧಾನ್ಯತೆಯು ವಿಭಿನ್ನವಾಗಿರುತ್ತದೆ (ಪೋಮೆರಾಂಜ್ ಮತ್ತು ರೂಬಲ್, 1998; ಝುರ್ನ್, 1984). ಸಾಮಾಜಿಕೀಕರಣದ ಮೊದಲ ಗುರಿ ಮಕ್ಕಳು ಸದ್ವರ್ತನೆಹೊಂದಿ ಸಮಾಜಕ್ಕೆ ಕೊಡುಗೆ ನೀಡಲು ಸಾಧ್ಯವಾಗಲು ಬೇಕಾದ ಗುಣವಿಶೇಷಗಳನ್ನು ದಕ್ಕಿಸಿಕೊಳ್ಳುವಂತೆ ಪ್ರೋತ್ಸಾಹಿಸುವುದು ಎಂದು ತೋರುತ್ತದೆ. ಎರಡನೆಯ ಗುರಿ (ವಯಸ್ಕರು ಮುಖ್ಯವಾದ್ದದ್ದು ಎಂದು ಗಣಿಸುವುದು) ಹುಡುಗಿಯರ ಸಂಬಂಧ-ಅಭಿಮುಖಿ (ಅಭಿವ್ಯಕ್ತೀಯ) ಗುಣಗಳಿಗೆ, ಹುಡುಗರ ವೈಯುಕ್ತಿಕ (ಅಥವಾ ಕಾರ್ಯಭೂತ) ಗುಣಗಳಿಗೆ ಒತ್ತುನೀಡಿ ಮಗುವನ್ನು ಲಿಂಗತ್ವ-ಪ್ರರೂಪಗೊಳಿಸುವುದು.

**ಕೋಷ್ಟಕ 12.1 ಐದು ಗುಣಲಕ್ಷಣಗಳ ಸಾಮಾಜಿಕೀಕರಣದಲ್ಲಿನ ಲಿಂಗ ವ್ಯತ್ಯಾಸಗಳು**

**(110 ಸಮಾಜಗಳ ಒಂದು ಅಧ್ಯಯನ**)

ಸಾಮಾಜಿಕೀಕರಣದ ಒತ್ತಡಗಳು ಹೆಚ್ಚಿದ್ದ ಸಮಾಜಗಳ ಶೇಕಡಾವಾರು ಪ್ರಮಾಣ

| ಗುಣಲಕ್ಷಣಗಳು | ಬಾಲಕರು | ಬಾಲಕಿಯರು |
|---|---|---|
| ಪೋಷಕತೆ | 0 | 82 |
| ವಿಧೇಯತೆ | 3 | 35 |
| ಬಾಧ್ಯತೆ | 11 | 61 |
| ಸಾಧನೆ | 87 | 3 |
| ಸ್ವ-ಅವಲಂಬನೆ | 85 | 0 |

ಸೂಚನೆ: ಇಲ್ಲಿ ಕೊಟ್ಟಿರುವ ಪ್ರತಿ ಗುಣಕ್ಷಣದ ಶೇಕಡಾವಾರು ಪ್ರಮಾಣದ ಮೊತ್ತ ೧೦೦ ಆಗುವುದಿಲ್ಲ. ಏಕೆಂದರೆ ಕೆಲವು ಸಮಾಜಗಳು ಆ ಗುಣಲಕ್ಷಣಕ್ಕೆ ಸಂಬಂಧಿಸಿದಂತೆ ಬಾಲಕರು ಮತ್ತು ಬಾಲಕಿಯರ ಮೇಲೆ ಭಿನ್ನ ಒತ್ತಡಗಳನ್ನು ಹಾಕಿರಲಿಲ್ಲ. ಉದಾಹರಣೆಗೆ, ಸಂಬಂಧಪಟ್ಟ ದತ್ತಾಂಶಗಳು ಲಭ್ಯವಿದ್ದ 18 ಪ್ರತಿಶತ ಸಮಾಜಗಳು ಪಾಲನೆ-ಪೋಷಣೆಯ ಸಾಮಾಜಿಕೀಕರಣಕ್ಕೆ ಸಂಬಂಧಿಸಿದಂತೆ ಲಿಂಗತ್ವ ಭೇದಗಳನ್ನು ಮಾಡಿರಲಿಲ್ಲ.

*Source:* Adapted from "A Cross-Cultural Survey of Some Sex Differences in Socialization," by H. Barry III, M. K. Bacon, & I. L. Child, 1957, *Journal of Abnormal and Social Psychology, 55,* 327–332.

ಹೆಣ್ಣುಮಕ್ಕಳು ಅಭಿವ್ಯಂಜಕ ಪಾತ್ರವನ್ನು ಮತ್ತು ಗಂಡುಮಕ್ಕಳು ಕಾರಣಭೂತ ಪಾತ್ರವನ್ನು ವಹಿಸಿಕೊಳ್ಳಬೇಕು ಎಂದು ಸಾಂಸ್ಕೃತಿಕ ನಿಯಮಗಳು ನಿರ್ದಿಷ್ಟಪಡಿಸುವುದರಿಂದ ವಾಸ್ತವ ಬದುಕಿನಲ್ಲಿ ಬಾಲಕಿಯರು ಮತ್ತು ಸ್ತ್ರೀಯರು ಅಭಿವ್ಯಂಜಕ ಗುಣಗಳನ್ನೇ ಪ್ರದರ್ಶಿಸುತ್ತಾರೆ ಎಂದೂ, ಬಾಲಕರು ಮತ್ತು ಪುರುಷರು ಕಾರಣಭೂತ ಗುಣಗಳನ್ನೇ ಹೊಂದಿರುತ್ತಾರೆ ಎಂದೂ ನಾವು ಯೋಚಿಸಲು ತೊಡಗುತ್ತೇವೆ (ಬ್ರೋವರ್‌ಮ್ಯಾನ್ ಮತ್ತಿತರರು., 1972; ವಿಲಿಯಮ್ಸ್ ಮತ್ತು ಬೆಸ್ಟ್,

1990). ನೀವು ಮಹಿಳಾ ಹಕ್ಕುಗಳಿಗೆ ಗಮನ ಹೆಚ್ಚಾಗಿದ್ದು, ಹೆಚ್ಚು ಮಹಿಳೆಯರು ಕಾರ್ಯಕ್ಷೇತ್ರ ಪ್ರವೇಶಿಸಿದ್ದರಿಂದ ಇಂತಹ ರೂಢಮಾದರಿಗಳು ಮಾಯವಾದವು ಎಂದು ಅಂದುಕೊಂಡರೆ, ಮತ್ತೆ ಆಲೋಚಿಸಿ. ಇಪ್ಪತ್ತನೆಯ ಶತಮಾನದ ಕೊನೆಯರ್ಧದಲ್ಲಿ ಹೆಚ್ಚು ಸಮಾನತೆಯ ದಿಕ್ಕಿನಲ್ಲಿ ಲಿಂಗತ್ವ- ಪಾತ್ರ ಮತ್ತು ನಿಯಮಗಳಲ್ಲಿ ಕೆಲವು ಬದಲಾವಣೆಗಳು ಆದರೂ (ಬಾಕಿನ್, ವೀಕ್ಸ್ ಮತ್ತು ಮೊರಿಸ್, 2000; ಈಗ್ಲಿ, ವುಡ್, ಮತ್ತು ಡೀಕ್‌ಮನ್, 2000) ಹದಿಹರೆಯದವರು ಮತ್ತು ಪ್ರೌಢಾವಸ್ಥೆಯನ್ನು ತಲುಪಿದ ಅನೇಕರು ಸ್ತ್ರೀ ಮತ್ತು ಪುರುಷರ ಬಗೆಗೆ ಇನ್ನೂ ಹಳೆಯ ಸಾಂಪ್ರದಾಯಿಕ ರೂಢಮಾದರಿಗಳನ್ನೇ ಸಾರ್ವಜನಿಕವಾಗಿ ಬೆಂಬಲಿಸುತ್ತಿರುತ್ತಾರೆ (ಬರ್ಜನ್ ಮತ್ತು ವಿಲಿಯಮ್ಸ್, 1991); ಲುಯೆಪ್ಟ್ಯಾವ್, ಗರೋವಿಕ್-ಸ್ಯಾಬೋ, ಮತ್ತು ಲುಯೆಪ್ಟ್ಯಾವ್, 2001; ಟ್ವೆನ್ಜಿ, 1997). ಉದಾಹರಣೆಗೆ ಒಂದು ಅಧ್ಯಯನದಲ್ಲಿ (ಪ್ರೆಂಟಿಸ್ ಮತ್ತು ಕರಾಂರ್ಝೂ, 2002) ಮಹಿಳೆಯರು ಸ್ನೇಹಪರರೂ, ಉಲ್ಲಾಸಕರವಾಗಿಯೂ, ಕರುಣಾಮಯಿಗಳಾಗಿಯೂ, ಭಾವನಾತ್ಮಕವಾಗಿ ಅಭಿವ್ಯಕ್ತಿಸುವವರೂ ಮತ್ತು ಸಹನಶೀಲರೂ ಆಗಿರಬೇಕು ಎಂದು ಕಾಲೇಜು ವಿದ್ಯಾರ್ಥಿಗಳು ಒತ್ತಿ ಹೇಳಿದ್ದರು. ಮಹಿಳೆಯರು ಹಠಮಾರಿಗಳಾಗಿರಬಾರದು, ದುರಹಂಕಾರಿಗಳಾಗಿರಬಾರದು, ಭಯಹುಟ್ಟಿಸುವಂಥವರೂ ಮತ್ತು ಯಜಮಾನಿಕೆ ನಡೆಸುವವರೂ ಆಗಿರಬಾರದು ಎಂಬುದು ಅವರ ಆಲೋಚನೆಯಾಗಿತ್ತು. ಪುರುಷರು ತರ್ಕಬದ್ಧವಾಗಿಯೂ, ಮಹತ್ವಾಕಾಂಕ್ಷಿಗಳಾಗಿಯೂ, ತಮ್ಮ ಅಭಿಪ್ರಾಯಗಳನ್ನು ದೃಢವಾಗಿ ಹೇಳುವವರೂ, ದೈಹಿಕವಾಗಿ ಗಟ್ಟಿಯಾಗಿರುವವರೂ ಮತ್ತು ಬಲಶಾಲಿ ವ್ಯಕ್ತಿತ್ವಗಳನ್ನು ಹೊಂದಿದ ನಾಯಕರೂ ಆಗಿರತಕ್ಕದ್ದು, ಹಾಗೂ ಪುರುಷರು ಭಾವುಕರೂ, ಸುಲಭವಾಗಿ ಮೋಸಹೋಗುವವರೂ, ದುರ್ಬಲರೂ ಅಥವಾ ಇನ್ನೊಬ್ಬರ ಒಪ್ಪಿಗೆಗಾಗಿ ಕಾಯುವವರೂ ಆಗಿರಬಾರದು ಎಂಬುದು ಆ ವಿದ್ಯಾರ್ಥಿಗಳ ಅಭಿಮತವಾಗಿತ್ತು. ಲಿಂಗ ವ್ಯತ್ಯಾಸಗಳ ಬಗೆಗಿನ ಈ ನಂಬಿಕೆಗಳಿಗೆ ವಾಸ್ತವದಲ್ಲಿ ಆಧಾರಗಳಿವೆಯೆ? ಇದೆಯೊ ಇಲ್ಲವೋ ನೋಡೋಣ.

## ಲಿಂಗ ವ್ಯತ್ಯಾಸಗಳ ಬಗೆಗಿನ ಕೆಲವು ವಾಸ್ತವಗಳು ಮತ್ತು ಕಲ್ಪನೆಗಳು

'ವ್ಯತ್ಯಾಸಗಳು ಬಹು ಕಾಲ ಬಾಳಲಿ" (Vive la difference) ಎಂಬ ಹಳೆಯ ಫ್ರೆಂಚ್ ಹೇಳಿಕೆಯು ನಮಗೆಲ್ಲರಿಗೂ ಸತ್ಯವೆಂದು ಗೊತ್ತಿರುವ ಒಂದು ಸಂಗತಿಯನ್ನು ಬಿಂಬಿಸುತ್ತದೆ: ಅದೇನೆಂದರೆ, ಶಾರೀರಕವಾಗಿ ಗಂಡು ಮತ್ತು ಹೆಣ್ಣುಗಳು ಭಿನ್ನವಾಗಿರುತ್ತಾರೆ ಎಂಬುದು. ಪ್ರೌಢಾವಸ್ಥೆಯನ್ನು ತಲುಪಿದ ಪುರುಷರು ಸಾಮಾನ್ಯವಾಗಿ ಪ್ರೌಢ ಮಹಿಳೆಯರಿಗಿಂತ ಹೆಚ್ಚು ಎತ್ತರವಾಗಿರುತ್ತಾರೆ, ಹೆಚ್ಚು ತೂಕವುಳ್ಳವರೂ ಮತ್ತು ಹೆಚ್ಚು ಸ್ನಾಯುಬಲ ಉಳ್ಳವರೂ ಆಗಿರುತ್ತಾರೆ, ಅದೇ ಮಹಿಳೆಯರು ಹೆಚ್ಚುಕಾಲ ಬದುಕುತ್ತಾರೆ ಎಂಬ ಕಾರಣಕ್ಕೆ ಅವರು ಪುರುಷರಿಗಿಂತ ಹೆಚ್ಚು ದಾರ್ಢ್ಯರಾಗಿರುತ್ತಾರೆ ಎನ್ನಬಹುದು (ಜಂಪೌಲಿ, 2000). ಈ ಬಗೆಯ ದೈಹಿಕ ಭಿನ್ನತೆಗಳು ಸುಲಭ ಗೋಚರವಾಗಿದ್ದರೂ ಮಾನಸಿಕ ಕಾರ್ಯನಿರ್ವಹಣೆಯ ಮಟ್ಟಿಗೆ ಲಿಂಗ ವ್ಯತ್ಯಾಸಗಳಿಗೆ ಇರುವ ಪುರಾವೆಗಳು ಎಲ್ಲರೂ ಅಂದುಕೊಳ್ಳುವಷ್ಟು ಸ್ಪಷ್ಟವಿಲ್ಲ.

## ಲಿಂಗಗಳ ನಡುವಿನ ವಾಸ್ತವ ಮಾನಸಿಕ ವ್ಯತ್ಯಾಸಗಳು

ಲಿಂಗತ್ವ ರೂಢಮಾದರಿಗಳ ಬಗ್ಗೆ ನಮ್ಮ ಅನೇಕ ಇಂದಿನ ಅರಿವನ್ನು ಹೆಚ್ಚಿಸಿರುವ ಮಹತ್ವದ ಅಧ್ಯಯನವೊಂದರಲ್ಲಿ, ಎಲಿಯನೇರ್ ಮ್ಯಾಕಬಿ ಮತ್ತು ಕ್ಯಾರೊಲ್ ಜ್ಯಾಕ್ಲಿನ್‌ರವರು (1974) 1,500 ಕ್ಕಿಂತಲೂ ಹೆಚ್ಚಿನ ಸ್ತ್ರೀ ಮತ್ತು ಪುರುಷರ ನಡುವಿನ ತುಲನಾತ್ಮಕ ಅಧ್ಯಯನಗಳನ್ನು ಪರಿಶೀಲಿಸಿದರು. ಕೆಲವೇ ಕೆಲವು ಸಾಂಪ್ರದಾಯಿಕ ಲಿಂಗತ್ವ ರೂಢಮಾದರಿಗಳಿಗೆ ವಾಸ್ತವದ ಆಧಾರವಿದೆ ಎಂದು ಅವರು ತೀರ್ಮಾನಿಸಿದರು. ಅವರ ಪುನರ್ವಿಮರ್ಶೆ, ಲಿಂಗಗಳ ನಡುವೆ ಕೇವಲ ನಾಲ್ಕು ಸಣ್ಣ ಪ್ರಮಾಣದ ಆದರೆ ವಿಶ್ವಾಸಾರ್ಹ ವ್ಯತ್ಯಾಸಗಳು ಸಂಶೋಧನೆಗಳಿಂದ ಸತತವಾಗಿ ಬೆಂಬಲಿಸಲ್ಪಟ್ಟಿದೆ ಎಂದು ತೋರಿಸಿಕೊಟ್ಟಿತು. ಕೆಲವು ಪರಿಷ್ಕರಣೆ ಮತ್ತು ತಿದ್ದುಪಡಿಗಳೊಡನೆ ಅವರ ತೀರ್ಮಾನಗಳು ಇಲ್ಲಿವೆ..

### ಶಾಬ್ದಿಕ ಸಾಮರ್ಥ್ಯ

ಒಂದು ವ್ಯತ್ಯಾಸವೆಂದರೆ ಹುಡುಗಿಯರು ಅನೇಕ ಮಾಪನಗಳಲ್ಲಿ ಹುಡುಗರಿಗಿಂತ ಹೆಚ್ಚು ಶಾಬ್ದಿಕ ಸಾಮರ್ಥ್ಯವನ್ನು ತೋರುತ್ತಾರೆ. ಹುಡುಗಿಯರು ಹುಡುಗರಿಗಿಂತ ಕಡಿಮೆ ವಯಸ್ಸಿನಲ್ಲಿಯೇ ಭಾಷೆ ಮತ್ತು ಶಾಬ್ದಿಕ ಕೌಶಲ್ಯ ಪಡೆಯುವುದಲ್ಲದೆ, (ಬಾರ್ನಸ್ಟೇನ್ ಮತ್ತು ಹೇಯ್ನ್ಸ್, 1998). ಬಾಲ್ಯ ಮತ್ತು ಹರೆಯದ ಉದ್ದಕ್ಕೂ ಓದಿನ ಗ್ರಹಣ ಮತ್ತು ಮಾತಿನ ನಿರರ್ಗಳತೆಯ ಪರೀಕ್ಷೆಗಳಲ್ಲಿ ಸಣ್ಣ ಪ್ರಮಾಣದ ಆದರೆ ಸ್ಥಿರ ಸ್ವರೂಪದ ಶಾಬ್ದಿಕ ಸೌಕರ್ಯವನ್ನು ಪ್ರದರ್ಶಿಸುತ್ತಾರೆ (ಹಾಲ್ಪರ್ನ್, 2004; ವಿಕ್ಸ್-ನೆಲ್ಸನ್ ಮತ್ತು ಇಸ್ರೇಲ್, 2006). ಶಾಬ್ದಿಕ ತಂತ್ರಗಳು (ಗ್ಯಾಲಗರ್, ಲೆವಿನ್, ಮತ್ತು ಕಾಹಲನ್, 2002) ಅಥವಾ ಅದನ್ನು ಹೋಲುವ ತಂತ್ರಗಳ (ಹಾಲ್ಪರ್ನ್, 2004) ಅವಶ್ಯಕತೆ ಇರುವ ಗಣಿತದ ಪರೀಕ್ಷೆಗಳಲ್ಲಿಯೂ ಹೆಣ್ಣುಮಕ್ಕಳು ಗಂಡುಮಕ್ಕಳನ್ನು ಹಿಂದಿಕ್ಕುತ್ತಾರೆ. ಆದರೆ ಶಾಬ್ದಿಕ ಸಾಮ್ಯಗಳ ಪರೀಕ್ಷೆಗಳಲ್ಲಿ ಗಂಡುಮಕ್ಕಳು ಹೆಣ್ಣುಮಕ್ಕಳಿಗಿಂತ ಸ್ವಲ್ಪ ಮಟ್ಟಿಗೆ ಉತ್ತಮ ಸಾಧನೆ ತೋರುತ್ತಾರೆ (ಲಿಪ್ಸ್, 2006).

### ದೃಶ್ಯ ಮತ್ತು ದೇಶಿಕ ಸಾಮರ್ಥ್ಯ(Spatial ability)

ದೃಶ್ಯ ಮತ್ತು **ದೇಶಿಕ** ಸಾಮರ್ಥ್ಯಗಳ ಪರೀಕ್ಷೆಯಲ್ಲಿ –ಅಂದರೆ ಸಚಿತ್ರ ಮಾಹಿತಿಯ ಬಗ್ಗೆ ತರ್ಕಿಸುವುದು ಅಥವಾ ಮಾನಸಿಕವಾಗಿ ಅದನ್ನು ಬದಲುಮಾಡುವ ಸಾಮರ್ಥ್ಯದ ಪರೀಕ್ಷೆಯಲ್ಲಿ ಹೆಣ್ಣುಮಕ್ಕಳಿಗಿಂತ ಗಂಡುಮಕ್ಕಳು ಉತ್ತಮ ಫಲಿತಾಂಶ ನೀಡುತ್ತಾರೆ (ಲಿಂಗ ವ್ಯತ್ಯಾಸ ಕಂಡುಬಂದ ದೃಶ್ಯ ಮತ್ತು ದೇಶಿಕ ಕಾರ್ಯಗಳಿಗೆ ಆಕೃತಿ 12.1 ನ್ನು ನೋಡಿ). ದೇಶಿಕ ಸಾಮರ್ಥ್ಯದಲ್ಲಿರುವ ಪುರುಷ ಅನುಕೂಲತೆ ದೊಡ್ಡದೇನಲ್ಲ ಆದರೆ ನಾಲ್ಕನೇ ವಯಸ್ಸಿನಷ್ಟು ಮುಂಚೆಯೇ ಗುರುತಿಸಬಹುದಾಗಿದ್ದು ಜೀವಮಾನದುದ್ದಕ್ಕೂ ಉಳಿದುಕೊಳ್ಳುತ್ತದೆ ( ಚೋಯ್ ಮತ್ತು ಸಿಲ್ವರ್‌ಮ್ಯಾನ್, 2003; ಹಾಲ್ಪರ್ನ್, 2004; ಲೆವಿನ್ ಮತ್ತಿತರರು., 1999; ವೋಯರ್, ವೋಯರ್, ಮತ್ತು ಬ್ರೈಡನ್, 1995).

ದೃಶ್ಯ/ದೇಶಿಕ ಸಾಮರ್ಥ್ಯಗಳು: ಮಾನಸಿಕವಾಗಿ ಚಿತ್ರರೂಪದ ಮಾಹಿತಿಯನ್ನು ತಿರುಚುವುದು ಅಥವಾ ಅದರ ಬಗ್ಗೆ ಊಹೆ ಮಾಡುವುದು.

**ಆಕೃತಿ 12.1**:
ಮಾದರಿ
ಸ್ಪಂದನೆಗಳು: 1, 2, 3, 4
1.ಮನೋ ಆವರ್ತ (mental rotation): ಪರೀಕ್ಷಾರ್ಥಿಗಳು ಮಾದರಿಯಲ್ಲಿ ತೋರಿಸಿದ ಆಕೃತಿಯು ಯಾವ ದಿಕ್ಕಿಗೆ ಇದೆಯೋ ಅದಕ್ಕೆ ಭಿನ್ನವಾದ ದಿಕ್ಕಿನಲ್ಲಿರುವ ಆಕೃತಿಯನ್ನು ಆಯ್ಕೆ ಮಾಡಬೇಕು.
. "Emergence and Characteristics of Sex Differences in Spatial Ability: A Meta-Analysis," by M. C. Linn &

A. C. Petersen, 1985, Child Development, 56, 1479–1498. Copyright © 1985 by the Society for Research in Child Development, Inc. Reprinted by permission.)


B. 


Figure 12.1 A spatial task for which sex differences in performance have been found. From "Emergence and Characteristics of Sex Differences in Spatial Ability: A Meta-Analysis," by M. C. Linn & A. C. Petersen, 1985, Child Development, 56, 1479–1498. Copyright © 1985 by the Society for Research in Child Development, Inc. Reprinted by permission.

## ಗಣಿತೀಯ ಸಾಮರ್ಥ್ಯ

ಹರೆಯದಿಂದಲೇ ಆರಂಭಿಸಿ, *ಅಂಕಗಣಿತ ತರ್ಕದ ಪರೀಕ್ಷೆಗಳಲ್ಲಿ* ಗಂಡು ಮಕ್ಕಳು ಹೆಣ್ಣುಮಕ್ಕಳಿಗೆ ಹೋಲಿಸಿದರೆ ಕಡಿಮೆ ಪ್ರಮಾಣದಲ್ಲಿ, ಆದರೆ ಸುಸಂಗತವಾಗಿ ಮುಂದಿರುತ್ತಾರೆ (ಹಾಲ್ಪರ್ನ್, 1997, 2004; ಹೈಡ್, ಫೆನ್ನೆಮಾ, ಮತ್ತು ಲಾಮನ್, 1990). ಎಣಿಕೆಯ ಕೌಶಲ್ಯದಲ್ಲಿ ಹೆಣ್ಣುಮಕ್ಕಳು ಗಂಡುಮಕ್ಕಳಿಗಿಂತ ಮುಂದಿರುತ್ತಾರೆ ಮತ್ತು ಗಣಿತದಲ್ಲಿ ಹೆಚ್ಚಿನ ಅಂಕಗಳನ್ನೂ ಪಡೆಯುತ್ತಾರೆ, ಅದು ಭಾಗಶಃ ಏಕೆಂದರೆ ಸಾಧನೆಯ ಗುರಿಗಳಿಗಿಂತ ಕಲಿಕೆಯನ್ನು ಆಯ್ದುಕೊಳ್ಳಲು ಹೆಣ್ಣುಮಕ್ಕಳಿಗೆ ಗಂಡುಮಕ್ಕಳಿಗಿಂತ ಹೆಚ್ಚಿನ ಒಲವು ಇರುವುದರಿಂದ ತಮ್ಮ ಗಣಿತದ ಸಾಮರ್ಥ್ಯಗಳನ್ನು ಹೆಚ್ಚಿಸಿಕೊಳ್ಳಲು ಕಠಿಣ ಪರಿಶ್ರಮ ಪಡುತ್ತಾರೆ. (ಕೆನ್ನಿ-ಬೆನ್ಸನ್ ಮತ್ತಿತರರು., 2006). ಆದರೆ ಗಣಿತದಲ್ಲಿ ಹೆಣ್ಣುಮಕ್ಕಳಿಗಿಂತ ಗಂಡುಮಕ್ಕಳು ಹೆಚ್ಚು ಸ್ವ-ಸಫಲತೆ ಹೊಂದಿರುತ್ತಾರೆ (ಸಿಂಪ್ಕಿನ್ಸ್, ಡೇವಿಸ್-ಕೀನ್, ಮತ್ತು ಎಕ್ಲಿಸ್, 2006) ಮತ್ತು ಗಣಿತದಲ್ಲಿ ಸಂಕೀರ್ಣ ವಾಕ್ಯರೂಪದ ಸಮಸ್ಯೆಗಳು, ಜ್ಯಾಮಿತಿ ಮತ್ತು ಶೈಕ್ಷಣಿಕ ಅಭಿಕ್ಷಮತೆಯ ಪರೀಕ್ಷೆಗಳ (SAT: Scholastic Aptitude test) ಗಣಿತ ಭಾಗಗಳಲ್ಲಿ ಹೆಣ್ಣುಮಕ್ಕಳಿಗಿಂತ ಹೆಚ್ಚಿನ ಸಾಧನೆಯನ್ನು ತೋರಿಸಲು ಅನುವು ಮಾಡಿಕೊಡುವ ಸಮಸ್ಯಾ-ಪರಿಹಾರದ ತಂತ್ರಗಳನ್ನು ದಕ್ಕಿಸಿಕೊಂಡಿರುತ್ತಾರೆ (ಬರ್ನ್ಸ್ ಮತ್ತು ತಕಹಿರಾ, 1993; ಕೇಸೀ, 1996; ಲಿಪ್ಸ್, 2006). ಗಣಿತದಲ್ಲಿ ಮೇಲ್ಮಟ್ಟದ ಸಾಧಕರಲ್ಲಂತೂ ಗಣಿತದ ಸಮಸ್ಯಾ ಪರಿಹಾರಕ್ಕೆ ಸಂಬಂಧಿಸಿದಂತೆ ಪುರುಷರ ಮೇಲುಗೈ ಇರುವುದು ಎದ್ದು ಕಾಣುತ್ತದೆ: ಸ್ತ್ರೀಯರಿಗಿಂತ ಪುರುಷರೇ ಗಣಿತದಲ್ಲಿ ಅಸಾಮಾನ್ಯ ಪ್ರತಿಭಾಶಾಲಿಗಳಾಗಿರುವುದು ಕಂಡು ಬರುತ್ತದೆ (ಲಿಪ್ಸ್, 2006; ಸ್ಟಂಫ್ ಮತ್ತು ಸ್ಟ್ಯಾನ್ಲಿ, 1996). ದೃಶ್ಯ ಮತ್ತು ದೇಶಿಕ ಸಾಮರ್ಥ್ಯ ಹಾಗೂ ಸಮಸ್ಯಾ ಪರಿಹಾರದ ತಂತ್ರಗಳಲ್ಲಿನ ಲಿಂಗ ವ್ಯತ್ಯಾಸಗಳು ಅಂಕಗಣಿತದ ತರ್ಕದಲ್ಲಿನ ಲಿಂಗ ವ್ಯತ್ಯಾಸಗಳ ಮೇಲೆಯೂ ಪರಿಣಾಮ ಬೀರುತ್ತವೆ (ಕೇಸಿ, ನಟಾಲ್ ಮತ್ತು ಪೆಝ್ಯೂರಿಸ್, 1997). ಆದರೆ ನಾವು ಬಹು ಬೇಗ ಸಾಮಾಜಿಕ ಪ್ರಭಾವಗಳು- ಹುಡುಗರು ಮತ್ತು ಹುಡುಗಿಯರು ಅವರ

ಸಾಮರ್ಥ್ಯಗಳ ಬಗ್ಗೆ  ಸ್ವೀಕರಿಸುವ ಸಂದೇಶಗಳು- ಕೂಡಾ ಅವರ ಗಣಿತೀಯ, ಶಾಬ್ದಿಕ ಮತ್ತು ದೃಶ್ಯ/ಸ್ಥಳವಿಸ್ತಾರದ ತಾರ್ಕಿಕ ಕೌಶಲ್ಯಗಳ ಮೇಲೆ ಹೇಗೆ ಪ್ರಭಾವ ಬೀರುತ್ತವೆ ಎಂಬುದನ್ನು ನೋಡಲಿದ್ದೇವೆ.

## ಆಕ್ರಮಣಶೀಲತೆ

ಎರಡನೇ ವಯಸ್ಸಿನಿಂದಲೇ ಬಾಲಕರು ಬಾಲಕಿಯರಿಗಿಂತ  ದೈಹಿಕವಾಗಿ ಮತ್ತು ಶಾಬ್ದಿಕವಾಗಿ ಹೆಚ್ಚು ಆಕ್ರಮಣಶೀಲರಾಗಿರುತ್ತಾರೆ, ಮತ್ತು ಹದಿಹರೆಯದಲ್ಲಿ ಅವರು ಬಾಲಕಿಯರಿಗಿಂತ 10 ಪಟ್ಟು ಹೆಚ್ಚು ಸಮಾಜವಿರೋಧಿ ವರ್ತನೆಯಲ್ಲಿ ಮತ್ತು ಹಿಂಸಾತ್ಮಕ ಅಪರಾಧಗಳಲ್ಲಿ ತೊಡಗಿಕೊಳ್ಳುತ್ತಾರೆ (ಬ್ಯಾರಶ್, 2002; ಸ್ನೈಡರ್, 2003). ಬಾಲಕಿಯರು ಮುಖಮುರಿತ, ನಿರ್ಲಕ್ಷ್ಯ, ಅಥವಾ ಅವರ ಸಾಮಾಜಿಕ ಪ್ರತಿಷ್ಠೆಯನ್ನು ಹಾಳುಮಾಡುವಂತಹ ಗೋಪ್ಯ ರೂಪದ ಹಗೆತನವನ್ನು ಬಾಲಕರಿಗಿಂತ ಹೆಚ್ಚಾಗಿ ತೋರಿಸುತ್ತಾರೆ(ಕ್ರಿಕ್, ಕ್ಯಾಸಸ್, ಮತ್ತು ಮೋಶರ್, 1997; ಕ್ರಿಕ್ ಮತ್ತು ಗ್ರಾಟ್‌ಪೀಟರ್, 1995).

## ಚಟುವಟಿಕೆಯ ಮಟ್ಟ

ಹುಟ್ಟುವುದಕ್ಕಿಂತ ಮೊದಲೇ ಬಾಲಕರು ದೈಹಿಕವಾಗಿ ಬಾಲಕಿಯರಿಗಿಂತ  ಹೆಚ್ಚು ಚಟುವಟಿಕೆಯಿಂದ  ಇರುತ್ತಾರೆ (ಆಲ್ಮಲೀ, ಬಾಲ್ ಮತ್ತು ವೀಲರ್, 2001) ಮತ್ತು ಬಾಲ್ಯದುದ್ದಕ್ಕೂ, ಮುಖ್ಯವಾಗಿ ತಮ್ಮ ವಯಸ್ಸಿನ ಜೊತೆಗಾರರೊಂದಿಗೆ ಒಡನಾಡುವಾಗ ಹೆಚ್ಚು ಚಟುವಟಿಕೆಯಿಂದಿರುತ್ತಾರೆ (ಈಟನ್ ಮತ್ತು ಎನ್ಸ್, 1986; ಈಟನ್ ಮತ್ತು ಯು, 1989).  ಬಾಲಕರ ಹೆಚ್ಚಿನ ಮಟ್ಟದ ಚಟುವಟಿಕೆ ಆಕ್ರಮಣಕಾರಿಯಲ್ಲದ ಒಬ್ಬರ ಮೇಲೊಬ್ಬರು ಬೀಳುವ, ಕುಸ್ತಿಯಾಡುವ ಚಟುವಟಿಕೆಗಳಿಗೆ ಏಕೆ  ಬಾಲಕರು ಬಾಲಕಿಯರಿಗಿಂತ  ಹೆಚ್ಚು ಮುಂದೆ ಹೋಗುತ್ತಾರೆ ಮತ್ತು ಸದಾ ಸಿದ್ಧರಾಗಿರುತ್ತಾರೆ ಎಂಬುದನ್ನು ವಿವರಿಸಲು ಸಹಾಯ ಮಾಡಬಹುದು (ಪೆಲೆಗ್ರೀನಿ ಮತ್ತು ಸ್ಮಿತ್, 1998).

## ಭಯ, ಪುಕ್ಕಲುತನ ಮತ್ತು ಅಪಾಯಕ್ಕೆ ಒಡ್ಡಿಕೊಳ್ಳುವುದು.

ಜೀವನದ ಮೊದಲನೆಯ ವರ್ಷದಲ್ಲೇ ಬಾಲಕಿಯರು ಅನಿರ್ದಿಷ್ಟ ಸನ್ನಿವೇಶಗಳಲ್ಲಿ ಬಾಲಕರಿಗಿಂತ ಹೆಚ್ಚು ಭಯ ಮತ್ತು ಪುಕ್ಕಲುತನ ತೋರಿಸುತ್ತಾರೆ. ಇಂತಹ ಸನ್ನಿವೇಶಗಳಲ್ಲಿ ಅವರು ಹೆಚ್ಚು ಜಾಗೃತರಾಗಿದ್ದು  ಕಡಿಮೆ ಸ್ವ-ಸಮರ್ಥನೆ ತೋರುತ್ತಾರೆ, ಮತ್ತು ಬಾಲಕರಿಗೆ ಹೋಲಿಸಿದರೆ ಅಪಾಯಕ್ಕೆ ಕೈ ಹಾಕುವುದು ಕಡಿಮೆ (ಕ್ರಿಸ್ಟೋಫರ್‌ಸನ್, 1989; ಫೇನ್‌ಗೋಲ್ಡ್, 1994). ಅಪಾಯಕ್ಕೆ ಒಡ್ಡಿಕೊಳ್ಳುವುದರಲ್ಲಿರುವ ಲಿಂಗ ವ್ಯತ್ಯಾಸಗಳಿಗೆ ಭಾಗಶಃ ಬಾಲಕರ ಹೆಚ್ಚಿನ ಚಟುವಟಿಕೆಯ ಮಟ್ಟವೂ ಕಾರಣವಾಗಿರಬಹುದು. ಆದರೆ ಅಪಾಯಕ್ಕೆ ಒಡ್ಡಿಕೊಳ್ಳುವುದಕ್ಕೆ ಪಾಲಕರ ಪ್ರತಿಕ್ರಿಯೆಯೂ ಮುಖ್ಯ. 6 ರಿಂದ 10೦ ವರ್ಷದ ಮಕ್ಕಳ ತಾಯಿಯರು ಅಪಾಯಕ್ಕೆ ವಿರುದ್ಧ ನಿಯಮಗಳನ್ನು ಪಾಲಿಸುವಂತೆ ಗಂಡು ಮಕ್ಕಳಿಗಿಂತ ಹೆಣ್ಣುಮಕ್ಕಳೊಂದಿಗೆ ಹೆಚ್ಚು ಪ್ರಯತ್ನಿಸುತ್ತೇವೆ ಎಂದು ವರದಿಮಾಡಿದ್ದರು. ಏಕೆ ? ಭಾಗಶಃ ಏಕೆಂದರೆ ಅವರು ಮಗನ ಅಪಾಯಕಾರಿ ವರ್ತನೆ

ಮಾರ್ಪಡಿಸುವಲ್ಲಿ ಕಡಿಮೆ ಯಶಸ್ವಿಗಳಾಗಿ "ಹುಡುಗರು ಯಾವಾಗಲೂ ಹುಡುಗರೇ" ಮತ್ತು ಅಪಾಯಕ್ಕೆ ಒಡ್ಡಿಕೊಳ್ಳುವುದು "ಅವರ ಸ್ವಭಾವದಲ್ಲಿಯೇ ಇರುತ್ತದೆ" ಎಂದು ತೀರ್ಮಾನಿಸಿರುತ್ತಾರೆ (ಮಾರೆಂಜೆಲ್ಲೋ ಮತ್ತು ಹಾಗ್, 2004). ಹೀಗೆ ಬಾಲಕರು ತಮ್ಮ ಬಾಲ್ಯ ಮತ್ತು ಹರೆಯದುದ್ದಕ್ಕೂ ಅಪಾಯಕ್ಕೆ ಹೆಚ್ಚು ಒಡ್ಡಿಕೊಳ್ಳುತ್ತಾರೆ (ಅದರ ಫಲವಾಗಿ ನಕಾರಾತ್ಮಕ ಪರಿಣಾಮ ಅನುಭವಿಸುತ್ತಾರೆ), ಹುಡುಗಿಯರೂ ಕೆಲವು ಅಪಾಯಕಾರಿ ವರ್ತನೆಯಲ್ಲಿ (ಧೂಮ್ರಪಾನ, ಅತಿಕುಡಿತ ಮುಂತಾದವು) ಬಾಲಕರಷ್ಟೇ ತೊಡಗುತ್ತಾರೆ(ಬ್ಲಾಕ್‌ಮೋರ್, ಬೆರೆನ್‌ಬಾಮ್, ಮತ್ತು ಲಿಬೆನ್, 2009).



[ಛಾಯಾಚಿತ್ರ 1. ಕುಸ್ತಿ ಆಟಗಳು ಬಾಲಕಿಯರಿಗಿಂತ ಬಾಲಕರಲ್ಲಿಯೇ ಹೆಚ್ಚು ಸಾಮಾನ್ಯ]

## ವಿಕಾಸಾತ್ಮಕ ವೇಧನೀಯತೆ ( ಅಪಾಯದ ಸಾಧ್ಯತೆ) (vulnerability)

ಗರ್ಭಧಾರಣೆಯಿಂದ ಹಿಡಿದು ಪ್ರಸವಪೂರ್ವದ ಮತ್ತು ಪ್ರಸವದ ಸಮಯದ ಗಂಡಾಂತರಗಳು ಮತ್ತು ರೋಗಗಳ ಪರಿಣಾಮಕ್ಕೆ ಬಾಲಕರಲ್ಲಿ ಬಾಲಕಿಯರಿಗಿಂತ ಹೆಚ್ಚು ವೇಧನೀಯತೆ ಇರುತ್ತದೆ (ರಾಝ್ ಮತ್ತಿತರರು., 1994, 1995). ಆಟಿಸಂ, ಓದಿನ ತೊಡಕುಗಳು, ಮಾತಿನ ದೋಷಗಳು, ಏಕಾಗ್ರತೆಯ ಕೊರತೆ/ಅತೀ ಚಟುವಟಿಕೆಯ ಅಸ್ವಸ್ಥತೆ (ADHD), ಭಾವನಾತ್ಮಕ ಅಸ್ವಸ್ಥತೆ. ಸಂಜ್ಞಾನಾತ್ಮಕ ಸಾಮರ್ಥ್ಯಗಳ ವಿಕಾಸದ ವಿಳಂಬ ಮುಂತಾದ ವಿವಿಧ ವಿಕಾಸಾತ್ಮಕ ಸಮಸ್ಯೆಗಳನ್ನು ಹುಡುಗರು ಹುಡುಗಿಯರಿಗಿಂತ ಹೆಚ್ಚು ಪ್ರದರ್ಶಿಸುವ ಸಂಭವ ಇದೆ. (ಹಾಲ್ಪರ್ನ್, 1997; ಹೋಲ್ಡನ್, 2005; ಥಾಮ್ಸನ್, ಕರುಸೋ, ಮತ್ತು ಎಲೆರ್‌ಬಕ್, 2003).

## ಸಂವೇಗಾತ್ಮಕ ಅಭಿವ್ಯಕ್ತಿ/ /ಸಂವೇದನಾಶೀಲತೆ

ಶೈಶವದಲ್ಲಿ ಸಂವೇಗಗಳ ಅಭಿವ್ಯಕ್ತಿಯಲ್ಲಿ ಬಾಲಕರು ಮತ್ತು ಬಾಲಕಿಯರಲ್ಲಿ ಬಹಳ ವ್ಯತ್ಯಾಸಗಳಿರುವುದಿಲ್ಲ (ಬ್ರಾಡಿ, 1998). ಬಾಲ್ಯದಿಂದಾಚೆ ಬಾಲಕರು ಒಂದು ಸಂವೇಗವನ್ನು ಬಾಲಕಿಯರಿಗಿಂತ ಹೆಚ್ಚು ಪ್ರದರ್ಶಿಸುತ್ತಾರೆ- ಅದು ಕೋಪ, ಆದರೆ ಬಾಲಕಿಯರು ಬೇರೆ ಎಲ್ಲ ಸಂವೇಗಗಳನ್ನು ಆಗಾಗ ತೋರಿಸುತ್ತಾರೆ. (ಫೇಬ್ಸ್ ಮತ್ತಿತರರು., 1991; ಕೊಚಾನ್ಸ್ಕಾ, 2001). 2 ವರ್ಷದ ಬಾಲಕರಿಗಿಂತ 2 ವರ್ಷದ ಬಾಲಕಿಯರು ಭಾವನೆಗಳಿಗೆ ಸಂಬಂಧಿಸಿದ ಪದಗಳನ್ನು ಹೆಚ್ಚು ಬಳಸತೊಡಗುತ್ತಾರೆ (ಸರ್ವಾಂಟಿಸ್ ಮತ್ತು ಕ್ಯಾಲನನ್, 1998) ಮತ್ತು ಶಾಲಾಪೂರ್ವ ಮಕ್ಕಳ ಪಾಲಕರು ತಮ್ಮ ಹೆಣ್ಣುಮಕ್ಕಳೊಂದಿಗೆ ಭಾವನೆಗಳು ಮತ್ತು ಸ್ಮರಣೀಯ ಭಾವನಾತ್ಮಕ ಘಟನೆಗಳ ಬಗೆಗೆ ಹೆಚ್ಚು ಮಾತನಾಡುತ್ತಾರೆ (ಕ್ಯುಯೇಬ್ಲಿ, ಬಟ್ಲರ್ ಮತ್ತು ಫೈವುಶ್, 1995). ಅವರಿಗೆ ಸಿಗುವ ಈ ಸಾಮಾಜಿಕ ಬೆಂಬಲ ಏಕೆ ಹುಡುಗಿಯರು ಮತ್ತು ಮಹಿಳೆಯರು ತಮ್ಮ ಸಂವೇಗಗಳನ್ನು ಆಳ, ಹೆಚ್ಚು ತೀವ್ರ ಎಂದು ಚಿತ್ರಿಸುತ್ತಾರೆ ಮತ್ತು

ಅವುಗಳನ್ನು ಅಭಿವ್ಯಕ್ತಿಸಲು ಬಾಲಕರು ಮತ್ತು ಪುರುಷರಿಗಿಂತ ಹೆಚ್ಚು ಸ್ವತಂತ್ರರೆಂದು ಭಾವಿಸುತ್ತಾರೆ ಎನ್ನುವುದನ್ನು ವಿವರಿಸಬಹುದು. (ಫಿಶರ್ ಮತ್ತಿತರರು., 2004; ಫಕ್ಸ್ ಮತ್ತು ಥಿಲನ್, 1988; ಸಾರನಿ, 1999; ಜೊತೆಗೆ ಚಾಂಗ್ ಮತ್ತಿತರರು., 2003).

ಪೋಷಿಸುವುದು ಮತ್ತು ಸಹಾನುಭೂತಿ(ಸಿಂಪತಿ)ಸಹಾನುಭೂತಿ(ಎಂಪತಿ)ಯಲ್ಲಿ ಲಿಂಗ ವ್ಯತ್ಯಾಸಗಳಿಗೆ ಮಿಶ್ರಿತ ಪುರಾವೆಗಳು ಇವೆ. ಬಾಲಕರು ಮತ್ತು ಪುರುಷರಿಗಿಂತ ತಾವು ಹೆಚ್ಚಿನ ಪಾಲನೆ-ಪೋಷಣೆ ಮಾಡುತ್ತೇವೆ ಮತ್ತು ನಮ್ಮಲ್ಲೇ ತಾದಾತ್ಮ್ಯ ಹೆಚ್ಚಿರುತ್ತದೆ ಎಂದು ಬಾಲಕಿಯರು ಮತ್ತು ಮಹಿಳೆಯರು ಸ್ವತಃ ತಾವೇ ತಮ್ಮನ್ನು ಅಳೆದುಕೊಳ್ಳುತ್ತಾರೆ (ಹಾಗೆ ಇತರರಿಂದಲೂ ಚಿತ್ರಿಸಲ್ಪಡುತ್ತಾರೆ) (ಬ್ಯಾರನ್-ಕೊಹೆನ್, 2003; ಫೀನ್‌ಗೋಲ್ಡ್, 1994). ಆದರೆ ಸಹಾನುಭೂತಿ(ಸಿಂಪತಿ)ಯನ್ನು ಹುಟ್ಟಿಸಲೆಂದು ವಿನ್ಯಾಸಗೊಳಿಸಿದ ಪ್ರಯೋಗಾಲಯದ ಅಧ್ಯಯನಗಳು (ಬೇರೆಯವರ ದುರ್ದಶೆ ಮತ್ತು ವಿಪತ್ತುಗಳಿಗೆ ಮಕ್ಕಳನ್ನು ಪರಿಚಯಿಸುವುದು) ಬಾಲಕರು ಮುಖಭಾವದಲ್ಲಿ ಕ್ಲೇಶವನ್ನು, ಕಾಳಜಿ ಮತ್ತು ದೈಹಿಕ ಉತ್ತೇಜನವನ್ನೂ ಬಾಲಕಿಯರಷ್ಟೇ ಅಭಿವ್ಯಕ್ತಗೊಳಿಸುತ್ತಾರೆ. (ಬ್ಲ್ಯಾಕ್‌ಮೋರ್, ಬೆರೆನ್ಬ್ಯಾಮ್, ಲಿಬೆನ್, 2009; ಐಸೆನ್‌ಬರ್ಗ ಮತ್ತು ಫೇಬ್ಸ್, 1998). ಸಹಜ ಸನ್ನಿವೇಶಗಳಲ್ಲಿ ಸಾಕುಪ್ರಾಣಿಗಳ ಮತ್ತು ವೃದ್ಧ ಬಂಧುಗಳ ಯೋಗಕ್ಷೇಮದ ಮಟ್ಟಿಗೆ ಬಾಲಕಿಯರಷ್ಟೇ ಬಾಲಕರೂ ವಾತ್ಯಲ್ಯಭರಿತವಾಗಿರುತ್ತಾರೆ ಎಂಬುದು ಕಂಡು ಬಂದಿದೆ (ಮೆಲ್ಸನ್, ಪೀಟ್, ಮತ್ತು ಸ್ಪಾರ್ಕ್ಸ್, 1991).

## ಅನುಸರಣೆ

ಶಾಲಾಪೂರ್ವ ಹಂತದ ಆರಂಭದಿಂದಲೇ ಪಾಲಕರು, ಶಿಕ್ಷಕರು ಮತ್ತು ಇತರ ಅಧಿಕಾರಯುತ ವ್ಯಕ್ತಿಗಳ ವಿನಂತಿಗಳು ಮತ್ತು ಬೇಡಿಕೆಗಳನ್ನು ಬಾಲಕರಿಗಿಂತ ಹೆಚ್ಚು ಬಾಲಕಿಯರು ಅನುಸರಣೆ ಮಾಡುತ್ತಾರೆ (ಕಲೀಕಿಯಾ ಮತ್ತು ಸ್ಯಾಂಟೊಸ್ಟೆಫನೊ, 2004; ಸ್ಮಿತ್ ಮತ್ತಿತರರು., 2004). ಹಾಗೆ ಇತರರನ್ನು ತಮ್ಮ ಇಷ್ಟದಂತೆ ಮನವೊಲಿಸಲು ಬಾಲಕಿಯರು ಪ್ರಸಂಗಾವಧಾನ ಮತ್ತು ನಮ್ರ ಸಲಹೆಗಳನ್ನು ಬಳಸುವುದು ಹೆಚ್ಚು (ಬ್ಯಾರನ್-ಕೊಹೆನ್, 2003). ಬಾಲಕಿಯರಿಗೆ ಹೋಲಿಸಿದರೆ ಬಾಲಕರು ಆಗ್ರಹಿಸುವುದು ಮತ್ತು ಅದುಮಿಡುವ ತಂತ್ರಗಳ ಮೇಲೆ ಅವಲಂಬಿತರಾಗಿರುತ್ತಾರೆ. (ಲೀಪರ್, ಟೆನೆನ್‌ಬೌಮ್, ಮತ್ತು ಶಾಫರ್, 1999; ಸ್ಟ್ರೋ ಮತ್ತು ಬರ್ಗ್, 2000).


## ಸ್ವ-ಗೌರವ

ಸಮಗ್ರ ಸ್ವ-ಗೌರವ ಸೂಚಿಯಲ್ಲಿ ಬಾಲಕಿಯರಿಗಿಂತ ಬಾಲಕರು ತುಸು ಹೆಚ್ಚಳ ತೋರುತ್ತಾರೆ. (ಕ್ಲಿಂಗ್ ಮತ್ತಿತರರು., 1999). ಈ ಲಿಂಗ ವ್ಯತ್ಯಾಸವು ಆರಂಭಿಕ ಹರೆಯದಲ್ಲೇ ಎದ್ದು ಕಾಣತೊಡಗಿ ಪ್ರೌಢತ್ವದಲ್ಲಿ ಮುಂದುವರೆಯುತ್ತದೆ.

ಉಪಸಂಹಾರ

“ನಿಜವಾದ” ಲಿಂಗ ವ್ಯತ್ಯಾಸಗಳ ಪುರಾವೆಗಳನ್ನು ಪುನರ್‌ಪರಿಶೀಲನೆ ಮಾಡುವಾಗ ನಾವು ಗಮನಿಸಬೇಕಾದದ್ದು, ದತ್ತಾಂಶಗಳು ಯಾವುದೇ ನಿರ್ದಿಷ್ಟ ವ್ಯಕ್ತಿಯ ವರ್ತನೆಯನ್ನು ವರ್ಣಿಸದೆ ಗುಂಪಿನ ಸರಾಸರಿಯನ್ನು ಬಿಂಬಿಸುತ್ತವೆ. ಉದಾಹರಣೆಗೆ, ಮಕ್ಕಳ ಬಾಹ್ಯ ಆಕ್ರಮಣಕಾರಿ ವರ್ತನೆಗೆ ಲಿಂಗ ಸುಮಾರು 5 ಪ್ರತಿಶತ ಪ್ರಸರಣಕ್ಕೆ (variation) ಕಾರಣವಾಗುತ್ತದೆ, (ಹೈಡ್, 1984), ಉಳಿದ 95 ಪ್ರತಿಶತ ಜನರ ನಡುವಿನ ಇತರ ವ್ಯತ್ಯಾಸಗಳಿಂದ ಉಂಟಾಗಿರುತ್ತವೆ. ಮ್ಯಾಕಬಿ ಮತ್ತು ಜಾಕ್ಲಿನ್ ಗುರುತಿಸುವ ಹಾಗೆ ಶಾಬ್ದಿಕ, ದೇಶಿಕ, ಮತ್ತು ಗಣಿತೀಯ ಸಾಮರ್ಥ್ಯಗಳಲ್ಲಿನ ಲಿಂಗ ವ್ಯತ್ಯಾಸಗಳಲ್ಲಿ ಸಹಾ ಸಣ್ಣ ಪ್ರಮಾಣದ ವ್ಯತ್ಯಾಸಗಳು ಸಾಮರ್ಥ್ಯ ಹಂಚಿಕೆಯ ತುತ್ತ ತುದಿಗಳಲ್ಲಿ (ಅಂದರೆ ಅತೀ ಹೆಚ್ಚು, ಅಥವಾ ಅತೀ ಕಡಿಮೆ) ಹೆಚ್ಚು ತೋರುತ್ತವೆ (ಹಾಲ್ಪರ್ನ್, 1997, 2004), ಅವು ಮತ್ತೆಲ್ಲೂ ಕಾಣಲು ಸಿಗದಿರಬಹುದು (ಲಿಪ್ಸ್, 2006; ಸ್ಟೆಟ್ಸೆಂಕೊ ಮತ್ತಿತರರು., 2000). ಉದಾಹರಣೆಗೆ ತಾಂತ್ರಿಕ ತರಬೇತಿ ಮತ್ತು ತಾಂತ್ರಿಕ ವೃತ್ತಿಗಳಿಗೆ ಅತ್ಯುತ್ತಮ ಅವಕಾಶಗಳು ಇರುವ ಇಸ್ರೇಲ್‌ನಂತಹ ಸಮಾಜಗಳಲ್ಲಿ ಮಹಿಳೆಯರು ಗಣಿತೀಯ ಸಾಮರ್ಥ್ಯಗಳ ಪರೀಕ್ಷೆಯಲ್ಲಿ ಉತ್ತಮವಾಗಿ ಉತ್ತರಿಸುತ್ತಾರೆ (ಬೇಕರ್ ಮತ್ತು ಜೋನ್ಸ್, 1992). ಅಮೇರಿಕೆಯಲ್ಲೇ ಎಲ್ಲಾ ಜನಾಂಗೀಯ ಸಮುದಾಯಗಳಲ್ಲಿಯೂ ನಿರೀಕ್ಷಿತ ಲಿಂಗ ವ್ಯತ್ಯಾಸಗಳು ಕಾಣಿಸಿಕೊಳ್ಳುವುದಿಲ್ಲ. ಉದಾಹರಣೆಗೆ SAT ಅನ್ನೂ ಒಳಗೊಂಡು ಉನ್ನತ ಮಟ್ಟದ ಗಣಿತ ಪರೀಕ್ಷೆಗಳಲ್ಲಿ ಚೈನಾ ಮೂಲದ ಅಮೇರಿಕನ್ ಬಾಲಕಿಯರು ಮತ್ತು ಚೈನಾ ಮೂಲದ ಅಮೇರಿಕನ್ ಬಾಲಕರು ಸರಿಸಮನಾಗಿ ಒಳ್ಳೆಯ ಸಾಧನೆ ತೋರಿಸುತ್ತಾರೆ, ಅದೇ SAT ನಲ್ಲಿ ಯುರೋಪ್ ಮೂಲದ ಅಮೇರಿಕನ್ ಬಾಲಕರು (40 ರಿಂದ 50 ಅಂಕಗಳಷ್ಟು ಹೆಚ್ಚು ಪಡೆದು) ಯುರೋಪ್ ಮೂಲದ ಅಮೇರಿಕನ್ ಬಾಲಕಿಯರಿಗಿಂತ ಒಳ್ಳೆಯ ಸಾಧನೆಯನ್ನು ತೋರಿಸುತ್ತಾರೆ (ಲಿಪ್ಸ್, 2006). ಈ ಫಲಿತಗಳ ಒಟ್ಟೂ ಇಂಗಿತವೇನೆಂದರೆ, ಹೆಚ್ಚಿನ ಲಿಂಗ ವ್ಯತ್ಯಾಸಗಳು ಜೈವಿಕವಾಗಿಯೇ ನಿರ್ಧರಿತವಾಗಲ್ಪಡುತ್ತವೆ ಎಂದೇನೂ ಇಲ್ಲ, ಸ್ತ್ರೀ ಮತ್ತು ಪುರುಷರ ನಡುವಿನ ವ್ಯತ್ಯಾಸಗಳ ಬೆಳವಣಿಗೆಯಲ್ಲಿ ಸಾಂಸ್ಕೃತಿಕ ಮತ್ತು ಇತರ ಸಾಮಾಜಿಕ ಪ್ರಭಾವಗಳೂ ಸಹ ಮುಖ್ಯವಾದ ಪಾತ್ರವನ್ನು ವಹಿಸುತ್ತವೆ (ಹಾಲ್ಪರ್ನ್, 1997).

ಹಾಗಿದ್ದರೆ ಲಿಂಗಗಳ ನಡುವಿನ ಮಾನಸಿಕ ವ್ಯತ್ಯಾಸಗಳ ಬಗೆಗೆ ನಾವು ಅಂತಿಮವಾಗಿ ಏನೆಂದು ನಿರ್ಧರಿಸಬೇಕು? ಸಮಕಾಲೀನ ವಿದ್ವಾಂಸರು ಕೆಲವು ವೇಳೆ ಲಿಂಗ ವ್ಯತ್ಯಾಸಗಳು ಸತ್ಯ ಅಥವಾ ಅರ್ಥಪೂರ್ಣ ಎಂದೆಲ್ಲಾ ಮಾತು ಹೊರಳಿಸಿದರೂ, (ಈಗ್ಲಿ, 1995; ಹೈಡ್ ಮತ್ತು ಪ್ಲ್ಯಾಂಟ್, 1995) ಹೆಚ್ಚಿನ ವಿಕಾಸವಾದಿಗಳು *'ಸ್ತ್ರೀ ಮತ್ತು ಪುರುಷರು, ಮಾನಸಿಕವಾಗಿ ವ್ಯತ್ಯಾಸಗಳಿಗಿಂತ ಹೆಚ್ಚು ಸಾಮ್ಯತೆ ಹೊಂದಿದ್ದಾರೆ* ಎಂದು ಒಪ್ಪುತ್ತಾರೆ ಮತ್ತು ಬಹಳ ಸಮರ್ಪಕವಾಗಿ ದಾಖಲಿಸಿದ ವ್ಯತ್ಯಾಸಗಳು ಕೂಡ (ಆಕೃತಿ 12.2 ನ್ನು ನೋಡಿ) ಸೀಮಿತವಾಗಿದ್ದವು (ಬ್ಲಾಕ್‌ಮೋರ್ ಮತ್ತಿತರರು., 2009). ಇದರರ್ಥ, ಯಾವುದೇ ವ್ಯಕ್ತಿಯ ಆಕ್ರಮಣಶೀಲತೆ, ಗಣತೀಯ ಕೌಶಲ್ಯ, ಚಟುವಟಿಕೆಯ ಮಟ್ಟ ಅಥವಾ ಸಂವೇಗಾತ್ಮಕ ಅಭಿವ್ಯಕ್ತಿಯನ್ನು ಕೇವಲ ಅವನ ಅಥವಾ ಅವಳ ಲಿಂಗತ್ವವನ್ನು ತಿಳಿದುಕೊಂಡು ಅಂದಾಜು ಮಾಡಲು ಸಾಧ್ಯವಿಲ್ಲ. ಗುಂಪುಗಳ ಸರಾಸರಿಯನ್ನು ಲೆಕ್ಕಹಾಕಿದಾಗ ಮಾತ್ರ ಲಿಂಗ ವ್ಯತ್ಯಾಸಗಳು ಕಾಣಿಸಿಕೊಳ್ಳುತ್ತವೆ.




**ಆಕೃತಿ 12.2**

**ಪುರುಷರು ಮತ್ತು ಸ್ತ್ರೀಯರು**

**ವಿವರಣೆ**: ಪುರುಷರು ಮತ್ತು ಸ್ತ್ರೀಯರನ್ನು ಕುರಿತ ಅಂಕಗಳ ಈ ಹಂಚಿಕೆಯು ಲಿಂಗ ವ್ಯತ್ಯಾಸಗಳು ಸುಸಂಗತವಾಗಿ ಕಂಡು ಬರುವ ಸಾಮರ್ಥ್ಯಗಳು ಯಾವವೋ ಅವುಗಳಿಗೆ ಸಂಬಂಧಿಸಿದಂತೆ ಲಿಂಗಗಳ ನಡುವಿನ ಅಂತರವು ಎಷ್ಟು ದೊಡ್ಡದು ಅಥವಾ ಸಣ್ಣದು ಎಂಬುದರ ಬಗೆಗೆ ಒಂದು ಕಲ್ಪನೆ ಕೊಡುತ್ತದೆ. ಸರಾಸರಿ ಸಾಧನೆಯಲ್ಲಿ ಸಣ್ಣ ಪ್ರಮಾಣದ ವ್ಯತ್ಯಾಸವನ್ನು ಹೊರತು ಪಡಿಸಿದರೆ ಸ್ತ್ರೀ ಮತ್ತು ಪುರುಷರ ಅಂಕಗಳು ಒಂದರ ಮೇಲೊಂದು ಗಣನೀಯವಾಗಿ ಆಕ್ರಮಿಸಿಕೊಳ್ಳುತ್ತವೆ. *"Gender Differences in Mathematics Performance: A Meta-Analysis," by J. S. Hyde, E. Fennema, & S. J. Lamon, 1990,* Psychological Bulletin, 107, *p. 139–155. Copyright © 1990 by the American Psychological Association.*

## ಸಾಂಸ್ಕೃತಿಕ ಮಿಥ್ಯೆಗಳು

ಲಿಂಗತ್ವ-ಪಾತ್ರದ ರೂಢಮಾದರಿಗಳು "ಸಾಂಸ್ಕೃತಿಕ ಮಿಥ್ಯೆಗಳೇ" ಆಗಿವೆ, ಅವುಗಳಿಗೆ ವಾಸ್ತವದ ಆಧಾರವಿಲ್ಲ ಎಂಬ ಮ್ಯಾಕಬಿ ಮತ್ತು ಜ್ಯಾಕ್ಲಿನ್‌ರವರ (1974) ಪ್ರತಿಪಾದನೆಯನ್ನು ಈಗ ಹೆಚ್ಚಿನ ವಿಕಾಸವಾದಿಗಳು ಬೆಂಬಲಿಸುತ್ತಾರೆ." ಸ್ತ್ರೀಯರು ಪುರುಷರಿಗಿಂತ ಹೆಚ್ಚು ಸಾಮಾಜಿಕವಾಗಿ ಬೆರೆಯುವಂಥವರು, ಸುಲಭವಾಗಿ ಇತರರ ಪ್ರಭಾವಕ್ಕೆ ಒಳಗಾಗುವವರು, ಅತಾರ್ಕಿಕರು, ಕಡಿಮೆ ವಿಶ್ಲೇಷಣೆ ಮಾಡುವವರು, ಕಡಿಮೆ ಸಾಧನಾಕಾಂಕ್ಷಿಗಳು ಎಂಬಂತಹ ಮಿಥ್ಯೆಗಳು ವ್ಯಾಪಕವಾಗಿ ಒಪ್ಪಿಕೊಳ್ಳಲಾದ ಕೆಲವು "ಮಿಥ್ಯೆ"ಗಳು.

ಈ ತಪ್ಪುಗಳು ಏಕೆ ಉಳಿದುಕೊಳ್ಳುತ್ತವೆ? ಮ್ಯಾಕಬಿ ಮತ್ತು ಜಾಕ್ಲಿನ್‌ರವರ (1974) ಪ್ರಕಾರ,

"ಮಿಥ್ಯೆಗಳು" ಮುಂದುವರಿದುಕೊಂಡು ಬರುವುದಕ್ಕೆ ಒಂದು ಸಂಭವನೀಯ ವಿವರಣೆ ಎಂದರೆ ರೂಢಮಾದರಿಗಳು ಬಹಳ ಶಕ್ತಿಶಾಲಿಯಾಗಿರುತ್ತವೆ. ಒಂದು ಪ್ರಾಚೀನ ಸತ್ಯವು ಇಲ್ಲಿ ಉಲ್ಲೇಖನಾರ್ಹವಾಗಿದೆ: ಒಂದು ಗುಂಪಿನ ಬಗೆಗಿನ ಸಾಮಾನ್ಯೀಕರಣವೊಂದನ್ನು ನಂಬಲಾಗುತ್ತಿದ್ದು, ಆ ಗುಂಪಿನ ಸದಸ್ಯನೊಬ್ಬನು ನಿರೀಕ್ಷೆಗೆ ತಕ್ಕಂತೆ ವರ್ತಿಸುತ್ತಿದ್ದರೆ ಅವಲೋಕನ ಮಾಡುವವನು ಅದನ್ನು ಗಮನಿಸುತ್ತಾನೆ ಹಾಗೂ, ಆತನ ನಂಬಿಕೆಯು ಸರಿಯೆಂದು ಖಚಿತವಾಗುತ್ತದೆ ಮತ್ತು ಇನ್ನಷ್ಟು ಬಲಗೊಳ್ಳುತ್ತದೆ; ಒಂದೊಮ್ಮೆ ಒಂದು ಗುಂಪಿನ ಸದಸ್ಯನು ಅವಲೋಕನ ಮಾಡುವವನ ನಿರೀಕ್ಷೆಗಳಿಗೆ ತಕ್ಕಂತೆ ವರ್ತಿಸದೇ ಇದ್ದ ಪಕ್ಷದಲ್ಲಿ ಆ ಘಟನೆಯನ್ನು ಪರಿಗಣಿಸಲಾಗುವುದಿಲ್ಲ, ಹಾಗೂ ಅವಲೋಕನ ಮಾಡುವವನ ಸಾಮಾನ್ಯೀಕೃತ ನಂಬಿಕೆಯು ತಪ್ಪೆಂದು ಸಾಬೀತಾಗುವುದರಿಂದ ಬಚಾವಾಗುತ್ತದೆ. . . [ಬೇಕಾದ್ದನ್ನಷ್ಟೇ ಆರಿಸಿಕೊಂಡು] ಚೆನ್ನಾಗಿ ದಾಖಲಿಸಲ್ಪಡುವ [ಈ]. . . ಪ್ರಕ್ರಿಯೆಯ. . . ದೆಸೆಯಿಂದ ವಿರುದ್ಧದ ಪುರಾವೆಗಳಿಂದಾಗಿ ಸಾಯಬಹುದಾದ ಮಿಥ್ಯೆಗಳು ಉಳಿದುಕೊಳ್ಳುತ್ತವೆ. (ಪು.355)

ಇದನ್ನು ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ಲಿಂಗತ್ವ-ಪಾತ್ರ ರೂಢಮಾದರಿಗಳು ಆಳವಾಗಿ ಬೇರೂರಿದ ಸಂಜ್ಞಾನಾತ್ಮಕ ಸಂರಚನೆಗಳಾಗಿವೆ, ಅವುಗಳನ್ನು ನಾವು ಸ್ತ್ರೀ-ಪುರುಷರ ವರ್ತನೆಗಳನ್ನು ಅರ್ಥ ನಿರೂಪಣೆ ಮಾಡಲು ಮತ್ತು ಬಹಳ ಸಲ ತಿರುಚಲು ಬಳಸುತ್ತೇವೆ (ಮಾರ್ಟಿನ್ ಮತ್ತು ಹಾಲ್ವರ್ಸನ್, 1981). ಜನರು ಈ ಸಂರಚನೆಗಳನ್ನು ಶಿಶುಗಳ ವರ್ತನೆಗಳನ್ನೂ ಸಹಾ ವರ್ಗೀಕರಿಸಲು ಬಳಸುತ್ತಾರೆ. ಕಾಂಡ್ರಿ ಮತ್ತು ಕಾಂಡ್ರಿ ನಡೆಸಿದ ಒಂದು ಅಧ್ಯಯನದಲ್ಲಿ (1976), ಹೆಣ್ಣು ಶಿಶು (ಡಾನಾ) ಅಥವಾ ಗಂಡು ಶಿಶು (ಡೇವಿಡ್) ಎಂದು ಪರಿಚಯಿಸಿ 9 ತಿಂಗಳ ಒಂದು ಶಿಶುವಿನ ವೀಡಿಯೋ ಮುದ್ರಿಕೆಯನ್ನು ವೀಕ್ಷಿಸಲೆಂದು ಕಾಲೇಜು ವಿದ್ಯಾರ್ಥಿಗಳಿಗೆ ನೀಡಲಾಯಿತು. ಶಿಶುವು ಆಡುವುದನ್ನು ವಿದ್ಯಾರ್ಥಿಗಳು ವೀಕ್ಷಿಸಿದ ನಂತರ, ಟೆಡ್ಡಿ ಬೇರ್‌ನೊಂದಿಗೆ ಅಥವಾ ಪೆಟ್ಟಿಗೆಯೊಳಗಿನ ಸ್ಪ್ರಿಂಗ್ ಗೊಂಬೆಯೊಂದಿಗೆ (ಜ್ಯಾಕ್ ಇನ್ ದ ಬಾಕ್ಸ್) ಅವಳು ಅಥವಾ ಅವನು ಹೇಗೆ ಪ್ರತಿಕ್ರಿಯಿಸಿದರು ಎಂಬುದರ ಅರ್ಥ ನಿರೂಪಣೆ ಮಾಡುವಂತೆ ವಿದ್ಯಾರ್ಥಿಗಳಿಗೆ ಹೇಳಲಾಯಿತು. ಶಿಶುವಿನ ವರ್ತನೆಯ ಬಗ್ಗೆ ಅವರ ಅಭಿಪ್ರಾಯಗಳು ಶಿಶುವಿನ ಲಿಂಗದ ಊಹೆಯನ್ನು ಅವಲಂಬಿಸಿರುತ್ತಿತ್ತು. ಉದಾಹರಣೆಗೆ, ಜ್ಯಾಂಕ್ ಇನ್ ದ ಬಾಕ್ಸ್ ನ ಮೇಲಿನ ತೀಕ್ಷ್ಣ ಪ್ರತಿಕ್ರಿಯೆಯನ್ನು ಆ ಶಿಶುವು ಗಂಡೆಂದು ಭಾವಿಸಿಕೊಂಡವರು ’ಕೋಪ’ ಎಂದು ತೀರ್ಮಾನಿಸಿದರು, ಆ ಶಿಶುವು ಹೆಣ್ಣೆಂದು ಭಾವಿಸಿದವರು ’ಭಯ’ ಎಂದು ತೀರ್ಮಾನಿಸಿದರು (ಬನ್ರ್ಯಾಮ್ ಮತ್ತು ಹ್ಯಾರಿಸ್ ನ್ನೂ ನೋಡಿ, 1992). ಆಧಾರಗಳಿಲ್ಲದ ಅಥವಾ ತಪ್ಪಾದ ಲಿಂಗ ಪಾತ್ರಗಳ ರೂಢಮಾದರಿಗಳು ಬಾಲಕರು ಮತ್ತು ಬಾಲಕಿಯರ ಮೇಲೆ ಮುಖ್ಯವಾದ ಪರಿಣಾಮವನ್ನು ಬೀರುತ್ತವೆ. ಈ ಸಾಂಸ್ಕೃತಿಕ ಮಿಥ್ಯೆಗಳ ನಕಾರಾತ್ಮಕ ಪರಿಣಾಮಗಳನ್ನು ಮುಂದಿನ ವಿಭಾಗದಲ್ಲಿ ಚರ್ಚಿಸಲಾಗಿದೆ.

## ಸಾಂಸ್ಕೃತಿಕ ಮಿಥ್ಯೆಗಳು ಮಕ್ಕಳ ಸಾಮರ್ಥ್ಯಗಳಲ್ಲಿ ಮತ್ತು (ವೃತ್ತಿ ಸಂಬಂಧಿತ ಅವಕಾಶಗಳಲ್ಲಿ) ಕಂಡುಬರುವ ಲಿಂಗ ವ್ಯತ್ಯಾಸಗಳಿಗೆ ಕಾರಣವಾಗುತ್ತವೆಯೆ?

1968ರಲ್ಲಿ, ಫಿಲಿಪ್ ಗೋಲ್ಡ್ ಬರ್ಗ್ ಕಾಲೇಜಿಗೆ ಹೋಗುವ ಕೆಲ ಮಹಿಳೆಯರನ್ನು ಪುರುಷ ಲೇಖಕರೊಬ್ಬರು ಬರೆದಿದ್ದು (John McKay) ಅಥವಾ ಮಹಿಳಾ ಲೇಖಕಿಯೊಬ್ಬರು (Joan McKay) ಬರೆದಿದ್ದು ಎಂದು ಹೇಳಿ ಹಲವು ವೈಜ್ಞಾನಿಕ ಲೇಖನಗಳ ಗುಣಾವಗುಣಗಳನ್ನು ನಿರ್ಣಯಿಸುವಂತೆ ಕೇಳಿಕೊಂಡರು. ಈ ಲೇಖನಗಳು ಎಲ್ಲಾ ದೃಷ್ಟಿಯಿಂದಲೂ ಒಂದೇ ರೀತಿ ಇದ್ದರೂ, ಭಾಗವಹಿಸಿದವರು ಪುರುಷ ಲೇಖಕರು ಬರೆದಿದ್ದು ಎಂದ ಲೇಖನಗಳು ಮಹಿಳಾ ಲೇಖಕಿಯ ಬರೆದಿದ್ದು ಎಂದ ಲೇಖನಗಳಿಗಿಂತಲೂ ಉತ್ತಮ ಗುಣಮಟ್ಟದವು ಎಂದು ತೀರ್ಮಾನಿಸಿದರು.

ಈ ಯುವತಿಯರು, ಹುಡುಗಿಯರು ಮತ್ತು ಮಹಿಳೆಯರು ಗಣಿತ ಅಥವಾ ವಿಜ್ಞಾನದಂತಹ ಕೋರ್ಸುಗಳಲ್ಲಿ ಅಥವಾ ಆ ರೀತಿಯ ತರಬೇತಿ ಅವಶ್ಯವಿರುವ ವೃತ್ತಿಗಳಲ್ಲಿ ಅಗ್ಗಳಿಕೆಗೆ ಬೇಕಾದ ಸಾಮರ್ಥ್ಯ ಹೊಂದಿರುವುದಿಲ್ಲ’ ಎಂದು ಅನೇಕ ಸಮಾಜಗಳ ಜನರಲ್ಲಿ ಸಾಮಾನ್ಯವಾಗಿರುವ ಒಂದು ನಂಬಿಕೆಯನ್ನೇ ಪ್ರತಿಬಿಂಬಿಸಿದ್ದರು (ಇಕ್ಲಿಸ್, 2004; ಇಕ್ಲಿಸ್, ಫ್ರೀಮ್ಯಾನ್-ಡೊವಾನ್, ಜಾಕಬ್ಸ್ ಮತ್ತು

ಯೂನ್, 2000; ಟೆನೆನ್‌ಬಾಮ್  ಮತ್ತು ಲೀಪರ್, 2002). ಅಂಕಗಣಿತದಲ್ಲಿ ತಾವು ಗಂಡುಮಕ್ಕಳಷ್ಟು ಸಮರ್ಥರಲ್ಲ ಎಂದು ಶಿಶುವಿಹಾರ ಮತ್ತು ಮೊದಲನೆ ಇಯತ್ತೆಯ ಹೆಣ್ಣುಮಕ್ಕಳು ನಂಬುತ್ತಾರೆ; ಮತ್ತು ಶಾಲೆ ಪೂರ್ತಿ ಕಲಿತು ಮುಗಿಸುವ ತನಕ ಓದುವುದು, ಕಲೆ ಮತ್ತು ಸಂಗೀತ ಇವುಗಳೆಲ್ಲ ಹೆಣ್ಣುಮಕ್ಕಳ ಕ್ಷೇತ್ರವೆಂದು, ಹಾಗೂ ಗಣಿತ, ಕ್ರೀಡೆ, ಮತ್ತು ತಾಂತ್ರಿಕ ವಿಷಯಗಳು ಗಂಡುಮಕ್ಕಳಿಗೆ ಸೂಕ್ತ ಎಂಬ ನಂಬಿಕೆಯು ಹೆಚ್ಚುತ್ತ ಹೋಗುತ್ತದೆ (ಇಕ್ಲಿಸ್ ಮತ್ತಿತರರು., 2000; ಇಕ್ಲಿಸ್, ಜಾಕಬ್ಸ್, ಮತ್ತು ಹೆರಾಲ್ಡ್, 1990; ಇಕ್ಲಿಸ್, ವಿಗ್‌ಫೀಲ್ಡ್, ಹೆರಾಲ್ಡ್, ಮತ್ತು ಬ್ಲೂಮ್‌ಫೀಲ್ಡ್, 1993). ಮತ್ತೂ ಮುಂದುವರೆದು ವಿವಿಧ ವೃತ್ತಿಗಳಲ್ಲಿ ತೊಡಗಿಕೊಂಡಿರುವ ಸ್ತ್ರೀ ಮತ್ತು ಪುರುಷರ ಶೇಕಡಾವಾರು ಪ್ರಮಾಣವನ್ನು ಪರೀಕ್ಷಿಸಿದರೆ ಶಾಬ್ದಿಕ ಸಾಮರ್ಥ್ಯಗಳು ಬೇಕಾಗಿರುವ ಕ್ಷೇತ್ರಗಳಲ್ಲಿ (ಉದಾ: ಗ್ರಂಥಾಲಯ ವಿಜ್ಞಾನ ಮತ್ತು ಪ್ರಾಥಮಿಕ ಶಿಕ್ಷಣ) ಮಹಿಳೆಯರಿಗೆ ಹೆಚ್ಚು ಪ್ರಾತಿನಿಧ್ಯ ಇರುತ್ತದೆ ಮತ್ತು ಇತರ ವೃತ್ತಿಗಳಲ್ಲಿ, ಅದರಲ್ಲೂ ನಿರ್ದಿಷ್ಟವಾಗಿ ಗಣಿತ ಮತ್ತು ವಿಜ್ಞಾನದ ಹಿನ್ನೆಲೆ ಬೇಕಾಗಿರುವ ತಾಂತ್ರಿಕ ವೃತ್ತಿಗಳಲ್ಲಿ ( ಉದಾ:ಇಂಜಿನಿಯರಿಂಗ್) ಕಡಿಮೆ ಪ್ರಾತಿನಿಧ್ಯ ಇರುವುದು ಕಂಡು ಬರುತ್ತದೆ (ಇಕ್ಲಿಸ್ ಮತ್ತಿತರರು., 2000; ರಾಷ್ಟ್ರೀಯ ಮಹಿಳಾ ಸಂಶೋಧನಾ ಆಯೋಗ, 2002). ಈ ರೀತಿಯ ಅಸಮಾನತೆಗಳು ಯುರೋಪಿನಲ್ಲಿಯೂ ಇವೆ (ದೆವಾಂದ್ರೆ, 2002). ಈ ಬಗೆಯ ನಾಟಕೀಯ ಲಿಂಗ ವ್ಯತ್ಯಾಸಗಳನ್ನು ಹೇಗೆ ವಿವರಿಸುವುದು? ಇದಕ್ಕೆ ಶಾಬ್ದಿಕ, ಗಣಿತೀಯ ಮತ್ತು ದೃಶ್ಯ/ಸ್ಥಳವಿಸ್ತಾರದ ಸಾಧನೆಯಂತಹ ಸಣ್ಣ ಪ್ರಮಾಣದ ಲಿಂಗ ವ್ಯತ್ಯಾಸಗಳು ಕಾರಣವೆ? ಅಥವಾ, ಲಿಂಗತ್ವ-ಪಾತ್ರ ರೂಢಮಾದರಿಗಳು ಸಂಜ್ಞಾನಾತ್ಮಕ ಸಾಧನೆಗಳಲ್ಲಿ ಲಿಂಗ ವ್ಯತ್ಯಾಸಗಳನ್ನು *ಉತ್ತೇಜಿಸುವ* ಸ್ವಯಂ-ಸಿದ್ಧಕ- ಭವಿಷ್ಯವಾಣಿಗಳನ್ನು (self-fulfilling prophecy) ಸೃಷ್ಟಿಸಿ  ಆ ಮೂಲಕ ಬಾಲಕರು ಮತ್ತು ಬಾಲಕಿಯರನ್ನು ವಿಭಿನ್ನ ವೃತ್ತಿಗಳಿಗೆ ಮುನ್ನಡೆಸುತ್ತವೆಯೆ? ಇಂದು ಹೆಚ್ಚಿನ ವಿಕಾಸವಾದಿಗಳು ಈ ಎರಡನೆಯ ದೃಷ್ಟಿಕೋನವನ್ನು ಬೆಂಬಲಿಸುತ್ತಾರೆ. ಅದನ್ನು ಇನ್ನೂ ಹತ್ತಿರದಿಂದ ನೋಡೋಣ.

****ಸ್ವಯಂ-ಸಿದ್ಧಕ-ಭವಿಷ್ಯವಾಣಿ** ಜನರು ಇತರರ ಬಗೆಗೆ ಇಟ್ಟುಕೊಂಡಿರುವ ನಿರೀಕ್ಷೆಗಳಿಗೆ ತಕ್ಕಂತೆ ಇತರರು ನಡೆದುಕೊಳ್ಳುವಂತೆ ಮಾಡುವ ಒಂದು ವಿದ್ಯಮಾನ.

## ಕುಟುಂಬದ ಪ್ರಭಾವಗಳು

ಬಹಳ ಸಲ ಪಾಲಕರು ತಮ್ಮ ಗಂಡುಮಕ್ಕಳು ಮತ್ತು ಹೆಣ್ಣುಮಕ್ಕಳನ್ನು ಭಿನ್ನ-ಭಿನ್ನವಾಗಿ  ನಡೆಸಿಕೊಂಡು ಮಕ್ಕಳ ಸಾಮರ್ಥ್ಯ ಮತ್ತು ಸ್ವ-ಗ್ರಹಿಕೆಗಳಲ್ಲಿನ ಲಿಂಗ ವ್ಯತ್ಯಾಸಗಳಿಗೆ ತಮ್ಮ ಪಾಲನ್ನೂ ನೀಡುತ್ತಾರೆ. ಹೆಣ್ಣುಮಕ್ಕಳು ಏಕೆ ಗಣಿತ ಮತ್ತು ವಿಜ್ಞಾನದ ಕೋರ್ಸುಗಳೆಂದರೆ ಹಿಂಜರಿಯುತ್ತಾರೆ ಹಾಗೂ ಗಣಿತ ಮತ್ತು ವಿಜ್ಞಾನವನ್ನು ಒಳಗೊಳ್ಳುವ ವೃತ್ತಿಗಳಲ್ಲಿ ಕಡಿಮೆ ಪ್ರಾತಿನಿಧ್ಯವನ್ನು ಹೊಂದಿರುತ್ತಾರೆ ಎಂಬುದರ ಮೇಲೆ ಜ್ಯಾಕಲಿನ್ ಇಕ್ಲಿಸ್ ಮತ್ತು ಅವರ ಸಹೋದ್ಯೋಗಿಗಳು (1990) ಹಲವು ಅಧ್ಯಯನಗಳನ್ನು ಮಾಡಿದ್ದಾರೆ.  ಗಣಿತೀಯ ಸಾಮರ್ಥ್ಯಕ್ಕೆ ಸಂಬಂಧಿಸಿದ ಲಿಂಗವ್ಯತ್ಯಾಸಗಳ ಮೇಲಿನ ಪಾಲಕರ ನಿರೀಕ್ಷೆಗಳು ಸ್ವಯಂ-ಸಿದ್ಧಕ- ಭವಿಷ್ಯವಾಣಿಯಾಗಿ ಪರಿಣಮಿಸುತ್ತದೆ ಎಂದು ಅವರ ಅಧ್ಯಯನದಲ್ಲಿ ಕಂಡುಕೊಳ್ಳಲಾಯಿತು. ಅದರ ವಿವರಗಳು ಹೀಗಿವೆ:

- ಲಿಂಗತ್ವ ರೂಢಮಾದರಿಗಳಿಂದ ಪ್ರಭಾವಿತರಾದ ಪಾಲಕರು ಗಣಿತದಲ್ಲಿ ತಮ್ಮ ಗಂಡುಮಕ್ಕಳು ತಮ್ಮ ಹೆಣ್ಣುಮಕ್ಕಳಿಗಿಂತ ಮುಂದಿರಬೇಕೆಂದು ನಿರೀಕ್ಷಿಸುತ್ತಾರೆ. ಅಮೇರಿಕ, ಜಪಾನ್ ಮತ್ತು ತೈವಾನಿನ ತಾಯಂದಿರು ತಮ್ಮ ಮಕ್ಕಳ ಔಪಚಾರಿಕ ಶಿಕ್ಷಣ ಇನ್ನೂ ಶುರುವಾಗುವ ಮೊದಲೇ ಗಂಡುಮಕ್ಕಳಿಗೆ ಹೆಣ್ಣುಮಕ್ಕಳಿಗಿಂತ ಹೆಚ್ಚಿನ ಗಣಿತೀಯ ಸಾಮರ್ಥ್ಯವಿರುತ್ತದೆ ಎಂಬ ಒಂದು ನಂಬಿಕೆ ಪ್ರಕಟಿಸುತ್ತಾರೆ (ಲಮೀಸ್ ಮತ್ತು ಸ್ಟೀವನ್ಸನ್, 1990).

- ತಮ್ಮ ಗಂಡುಮಕ್ಕಳು ಗಣಿತದಲ್ಲಿ ಒಳ್ಳೆಯ ಸಾಧನೆಯನ್ನು ತೋರಿಸಿದರೆ ಅದು ಅವರ *ಸಾಮರ್ಥ್ಯ*ದ ಕಾರಣದಿಂದ ಎಂದು, ಅದೇ ಹೆಣ್ಣುಮಕ್ಕಳು ಒಳ್ಳೆಯ ಸಾಧನೆ ತೋರಿದರೆ ಅದು ಅವರ *ಕಠಿಣ ಪರಿಶ್ರಮದ* ಫಲ ಎಂದು ಪಾಲಕರು ಮಕ್ಕಳ ಮೇಲೆ ಗುಣಾರೋಪಣೆ ಮಾಡುತ್ತಾರೆ (ಪಾರ್ಸನ್ಸ್, ಆಡ್ಲರ್, ಮತ್ತು ಕ್ಯಾಜಲಾ, 1982). ಈ ಗುಣಾರೋಪಣೆಗಳೇ ಮುಂದೆ 'ಹೆಣ್ಣುಮಕ್ಕಳಿಗೆ ಗಣಿತದಲ್ಲಿ ಸ್ವ-ಪ್ರತಿಭೆ ಕಡಿಮೆ ಇರುತ್ತದೆ ಹಾಗೂ ಅವರ ಸಾಧನೆಗಳ ಹಿಂದೆ ಕಠಿಣ ಪರಿಶ್ರಮ ಇರುತ್ತದ' ಎಂಬ ನಂಬಿಕೆಗೆ ಮತ್ತಷ್ಟು ಬಲ ಕೊಡುತ್ತವೆ (ಪಾಮೆರಾಂಝ್ ಮತ್ತು ರೂಬಲ್, 1998). ಸೂಕ್ಷ್ಮರೂಪದಲ್ಲಿ ಪಾಲಕರು ಈ ಸಂದೇಶವನ್ನು ತಮ್ಮ ಮಕ್ಕಳಿಗೆ ರವಾನಿಸುತ್ತಾರೆ. ಉದಾಹರಣೆಗೆ, ಗಣಿತದ ಸಮಸ್ಯೆಗಳನ್ನು ಬಿಡಿಸಲು ಮಗಳು ತಾಯಿಯ ಬಳಿ ಹೋದರೆ, "ತಂದೆಯನ್ನು ಕೇಳು, ಗಣಿತದಲ್ಲಿ ಅವನ ತಲೆ ಬಹಳ ಚುರುಕು" ಎಂದು ತಾಯಿಯು ಹೇಳುವುದು; ಅಥವಾ "ತೊಂದರೆ ಇಲ್ಲ ಪುಟ್ಟಿ, ನಿನ್ನ ತಾಯಿಗೂ ಗಣಿತವೆಂದರೆ ತಲೆಬಿಸಿ" ಎಂದು ತಂದೆಯೆನ್ನುವುದು -ಹೀಗೆ ಮಾಡಿದಾಗ ಗಣಿತವೆಂದರೆ ಪುರುಷರ ಕ್ಷೇತ್ರ, ಅದಕ್ಕೆ ಹೆಣ್ಣುಮಕ್ಕಳು ಸೂಕ್ತವಲ್ಲ ಎಂದು ಮಗಳು ಕಲಿಯತೊಡಗುತ್ತಾಳೆ (ಲಿಪ್ಸ್, 2006).

- ಮಕ್ಕಳು ತಮ್ಮ ಪಾಲಕರ ಅಭಿಪ್ರಾಯಗಳನ್ನು ಆಂತರೀಕರಿಸಿಕೊಳ್ಳುತ್ತ ಬರುತ್ತಾರೆ. ಹಾಗೆ ಬಾಲಕರು ಆತ್ಮವಿಶ್ವಾಸದೊಂದಿಗೆ ಬೆಳೆದರೆ ಬಾಲಕಿಯರು, ಆತಂಕಿತರಾಗುತ್ತಾರೆ, ಖಿನ್ನರಾಗುತ್ತಾರೆ ಹಾಗೂ, ತಮ್ಮ ಸಾಮಾನ್ಯ ಶೈಕ್ಷಣಿಕ ಸಾಮರ್ಥ್ಯ ಅದರಲ್ಲೂ ತಮ್ಮ ಗಣತೀಯ ಸಾಮರ್ಥ್ಯವನ್ನು ಅಪಮೌಲ್ಯ ಮಾಡುತ್ತಾರೆ (ಕೋಲ್ ಮತ್ತಿತರರು., 1999; ಸ್ಟೆಟ್ಸೆನ್ಕೊ ಮತ್ತಿತರರು., 2000) (ಫ್ರೆಡ್ರಿಕ್ಸ್ ಮತ್ತು ಇಕ್ಲಿಸ್, 2002; ಸಿಂಪ್ಕಿನ್ಸ್ ಮತ್ತಿತರರು., 2006).

- ತಮಗೆ ಸಾಮರ್ಥ್ಯವಿಲ್ಲ ಎಂದು ಯೋಚಿಸಿ ಬಾಲಕಿಯರು ಗಣಿತದಲ್ಲಿ ಆಸಕ್ತಿ ಕಳೆದುಕೊಳ್ಳುತ್ತಾರೆ, ಅವರು ಗಣಿತದ ಕೋರ್ಸುಗಳನ್ನು ಆಯ್ದುಕೊಳ್ಳುವ ಸಾಧ್ಯತೆ ಕಡಿಮೆಯಾಗುತ್ತದೆ, ಮತ್ತು ಪ್ರೌಢಶಾಲೆಯ ನಂತರ ಗಣಿತದ ಅವಶ್ಯಕತೆ ಇರುವ ವೃತ್ತಿಗಳನ್ನು ಕೈಕೊಳ್ಳುವುದೂ ಸಹ ಕಡಿಮೆಯೇ ಆಗುತ್ತದೆ (ಬೆನ್‌ಬೋ ಮತ್ತು ಅರ್ಜಿಮಾಂಡ್, 1990; ಜಾಕಬ್ಸ್ ಮತ್ತಿತರರು., 2002). ಗಣಿತ ಮತ್ತು ವಿಜ್ಞಾನದಲ್ಲಿ ತಮ್ಮ ಸಾಮರ್ಥ್ಯವು ಗಟ್ಟಿಯಾಗೇ ಇದೆ ಎಂದು ಗೊತ್ತಿರುವ ಕಾಲೇಜು ವಿದ್ಯಾರ್ಥಿನಿಯರೂ ಸಹ ಆ ಕ್ಷೇತ್ರದಲ್ಲಿ ತಮ್ಮ ಅಧ್ಯಯನವನ್ನು ಮುಂದುವರೆಸುವ ಅಥವಾ ವೃತ್ತಿಗಳನ್ನು ಕೈಗೊಳ್ಳುವ

ನಿರೀಕ್ಷೆಗಳನ್ನು ಇಟ್ಟುಕೊಳ್ಳುವುದು ಗಂಡು ಮಕ್ಕಳಿಗಿಂತ ಕಡಿಮೆ (ಲಿಪ್ಸ್, 2004).

ಸಂಕ್ಷಿಪ್ತವಾಗಿ ಹೇಳುವುದಾದರೆ, ತಮ್ಮ ಹೆಣ್ಣುಮಕ್ಕಳಿಗೆ ಅಂಕಿಗಳೊಂದಿಗೆ ಸಮಸ್ಯೆಯಾಗುತ್ತದೆ ಎಂದು ನಿರೀಕ್ಷಿಸುವ ಪಾಲಕರು ತಾವು ನಿರೀಕ್ಷಿಸಿದ್ದನ್ನೇ ಪಡೆಯುತ್ತಾರೆ. ಇಕ್ಲಿಸ್ ಮತ್ತು ಅವರ ಸಹೋದ್ಯೋಗಿಗಳು (1990) ತಮ್ಮ ಸಂಶೋಧನೆಯಲ್ಲಿ ಪಾಲಕರು (ಮತ್ತು ಹೆಣ್ಣುಮಕ್ಕಳೇ ಸ್ವತಃ) ಹೆಣ್ಣುಮಕ್ಕಳಿಂದ ಕಡಿಮೆ ನಿರೀಕ್ಷೆ ಮಾಡುವುದಕ್ಕೆ ಕಾರಣ, ವಾಸ್ತವವಾಗಿ ಹೆಣ್ಣುಮಕ್ಕಳು ಗಣಿತದಲ್ಲಿ ಗಂಡುಮಕ್ಕಳಿಗಿಂತ ಕೆಟ್ಟ ಸಾಧನೆ ತೋರಬಹುದು ಎಂಬ ಸಾಧ್ಯತೆಯನ್ನು ತಳ್ಳಿ ಹಾಕುತ್ತಾರೆ. ಗಣಿತದ ಅಭೀಕ್ಷಮತೆಯ (Aptitude) ಪರೀಕ್ಷೆಯಲ್ಲಿ ಬಾಲಕರು ಮತ್ತು ಬಾಲಕಿಯರು ಇಬ್ಬರೂ ಸಮಾನ ಸಾಧನೆಯನ್ನು ತೋರಿ, ಸಮಾನ ಗ್ರೇಡುಗಳನ್ನು ಪಡೆದರೂ ಸಹ ಹೆಣ್ಣುಮಕ್ಕಳ ಸ್ವ-ಗ್ರಹಿಕೆಯ ಮೇಲೆ ಪಾಲಕರ ಕಡಿಮೆ ನಿರೀಕ್ಷೆಗಳ ನಕಾರಾತ್ಮಕ ಪರಿಣಾಮಗಳು ಸ್ಪಷ್ಟವಾಗಿ ಗೋಚರಿಸುತ್ತವೆ (ಇಕ್ಲಿಸ್ ಮತ್ತಿತರರು., 2002; ಫ್ರೆಡ್ರಿಕ್ಸ್ ಮತ್ತು ಇಕ್ಲಿಸ್, 2002; ಟೆನೆನ್ಬಾಮ್ ಮತ್ತು ಲೀಪರ್, 2002). ಗಣಿತದ ಬಗ್ಗೆ ಹುಡುಗಿಯರಲ್ಲಿರುವ ಕೆಳಮಟ್ಟದ ನಿರೀಕ್ಷೆಗಳು ಏಕೆ ಅವರು ಗಣಿತದಲ್ಲಿ ಕಡಿಮೆ ಸಾಧನೆ ತೋರಿದಾಗ 'ಪುಟಿದೆದ್ದು' ಒಳ್ಳೆಯ ಸಾಧನೆ ತೋರುವುದಿಲ್ಲ ಎನ್ನುವದನ್ನು ವಿವರಿಸಲು ಸಹಾಯ ಮಾಡುತ್ತದೆ. (ಕೊವಾಲೆಸ್ಕಿ-ಜೋನ್ಸ್ ಮತ್ತು ಡಂಕನ್, 1999). ಹೆಣ್ಣುಮಕ್ಕಳು ಇಂಗ್ಲೀಷ್ ವಿಷಯದಲ್ಲಿ ಅತ್ಯುತ್ತಮ ಸಾಧನೆ ತೋರುತ್ತಾರೆ ಮತ್ತು ಗಂಡುಮಕ್ಕಳು ಕ್ರೀಡೆಯಲ್ಲಿ ಉತ್ತಮ ಸಾಧನೆ ಮಾಡುತ್ತಾರೆ ಎಂಬ ಪಾಲಕರ ನಂಬಿಕೆಗಳು, ಈ ಕ್ಷೇತ್ರಗಳಿಗೆ ಸಂಬಂಧಿಸಿ ಮಕ್ಕಳು ಬೆಳೆಸಿಕೊಳ್ಳುವ ಆಸಕ್ತಿಗಳು ಹಾಗೂ ದಕ್ಷತೆಗಳಲ್ಲಿನ ಲಿಂಗವ್ಯತ್ಯಾಸಗಳಿಗೂ ಕಾರಣವಾಗುತ್ತವೆ (ಇಕ್ಲಿಸ್ ಮತ್ತಿತರರು., 1990); ಫ್ರೆಡ್ರಿಕ್ಸ್ ಮತ್ತು ಇಕ್ಲಿಸ್, 2002; ಟೆನನ್‌ಬಾಮ್ ಮತ್ತು ಲೀಪರ್, 2003).

**ಶೈಕ್ಷಣಿಕ ಪ್ರಭಾವಗಳು**

ಶಿಕ್ಷಕರೂ ಸಹ ಬಾಲಕರು ಮತ್ತು ಬಾಲಕಿಯರಿಗೆ ನಿರ್ದಿಷ್ಟ ವಿಷಯಗಳಲ್ಲಿರುವ ಸಾಮರ್ಥ್ಯಗಳ ಬಗ್ಗೆ ರೂಢಮಾದರಿ ನಂಬಿಕೆಗಳನ್ನು ಹೊಂದಿರುತ್ತಾರೆ ಉದಾಹರಣೆಗೆ ಆರನೆಯ ತರಗತಿಯ ಗಣಿತ ಅಧ್ಯಾಪಕರು ಬಾಲಕರಿಗೆ ಗಣಿತದಲ್ಲಿ ಹೆಚ್ಚಿನ ಸಾಮರ್ಥ್ಯವಿದೆ, ಆದರೆ ಬಾಲಕಿಯರಿಗೆ ಹೆಚ್ಚು ಪರಿಶ್ರಮ ಬೇಕು ಎಂದು ಭಾವಿಸುತ್ತಾರೆ (ಜಸೀಮ್ ಮತ್ತು ಇಕ್ಲಿಸ್, 1992). ಹೆಣ್ಣುಮಕ್ಕಳಿಗೆ, ಅವರ ಕಠಿಣ ಪರಿಶ್ರಮಕ್ಕಾಗಿ ಗಂಡುಮಕ್ಕಳಿಗೆ ಕೊಡುವಷ್ಟೇ ಅಥವಾ ಅದಕ್ಕಿಂತ ಹೆಚ್ಚಿನ ಅಂಕಗಳನ್ನು ನೀಡಿ ಪ್ರೋತ್ಸಾಹಿಸಿದರೂ ಕೂಡಾ, ಹೆಣ್ಣುಮಕ್ಕಳು ಗಣಿತದಲ್ಲಿ ಒಳ್ಳೆಯ ಸಾಧನೆಯನ್ನು ತೋರಿಸಬೇಕೆಂದರೆ ಬಹಳ ಕಷ್ಟಪಡಬೇಕು ಎಂದು ಶಿಕ್ಷಕರು ರವಾನಿಸುವ ಈ ಸಂದೇಶವು ಹುಡುಗಿಯರಿಗೆ ತಮ್ಮ ಪ್ರತಿಭೆಯನ್ನು ತಮಗೆ ಹೆಚ್ಚು ಸೂಕ್ತವಾದ ಅಪರಿಮಾಣಾತ್ಮಕ ಕ್ಷೇತ್ರಗಳ – ಸಂಗೀತ, ಇಂಗ್ಲೀಷ್ ಮುಂತಾದ - ಕಡೆ ತಿರುಗಿಸುವುದು ಉತ್ತಮ ಎಂದು ಒಪ್ಪಿಸಿಬಿಡುತ್ತದೆ.

ಒಟ್ಟಿನಲ್ಲಿ, ಸಂಜ್ಞಾನಾತ್ಮಕ ಸಾಮರ್ಥ್ಯಗಳಲ್ಲಿನ ಲಿಂಗವ್ಯತ್ಯಾಸಗಳಿಗೆ ಸಂಬಂಧಿಸಿದಂತೆ ಇರುವ ಇಂತಹ ಆಧಾರವಿಲ್ಲದ ನಂಬಿಕೆಗಳು ಖಂಡಿತವಾಗಿಯೂ

ನಾವು ಹಿಂದೆ ಚರ್ಚಿಸಿದಂತಹ ಸಣ್ಣ ಪ್ರಮಾಣದ ಲಿಂಗಸಂಬಂಧಿತ ಸಾಮರ್ಥ್ಯಗಳ ವ್ಯತ್ಯಾಸಗಳಿಗೆ ಕಾರಣವಾಗಬಹುದು. ಮತ್ತು ಕೊನೆಗೆ, ಅದು ವಿಜ್ಞಾನ ಮತ್ತು ಪರಿಮಾಣಾತ್ಮಕ ಕೌಶಲ್ಯಗಳು ಬೇಕಾಗುವ ಇತರ ವೃತ್ತಿಗಳಲ್ಲಿ ಮಹಿಳೆಯರ ಕಡಿಮೆ ಮಟ್ಟದ ಪ್ರಾತಿನಿಧ್ಯಕ್ಕೆ ಕಾರಣವಾಗಬಹದು. ಇಕ್ಲಿಸ್ ವರ್ಣಿಸುವಂತಹ ಘಟನಾವಳಿಗಳು ಅನಿವಾರ್ಯವೇನಲ್ಲ ಎನ್ನುವದಂತೂ ಸ್ಪಷ್ಟ. ವಾಸ್ತವದಲ್ಲಿ ಅಸಂಪ್ರದಾಯಿಕ ಲಿಂಗತ್ವ-ಪಾತ್ರ ಅಭಿವೃತ್ತಿ ಮತ್ತು ವರ್ತನೆಗಳುಳ್ಳ ಪಾಲಕರ ಹೆಣ್ಣುಮಕ್ಕಳು ಹೆಚ್ಚು ಸಂಪ್ರದಾಯಿಕ ವಾತಾವರಣದಲ್ಲಿ ಬೆಳೆದ ಹೆಣ್ಣುಮಕ್ಕಳು ಗಣಿತ ಮತ್ತು ವಿಜ್ಞಾನದಲ್ಲಿ ಪ್ರದರ್ಶಿಸುವಂತಹ ಇಳಿಮುಖವನ್ನು ತೋರಿಸುವುದಿಲ್ಲ (ಅಪ್‌ಡೆಗ್ರಾಫ್, ಮೆಕ್‌ಹಾಲ್, ಮತ್ತು ಕ್ರೌಟರ್, 1996). ಆದರೂ ಬಾಲಕರಿಗಿಂತ, ಬಾಲಕಿಯರು ಹೆಚ್ಚಿನ ಪ್ರಮಾಣದಲ್ಲಿ ಸಾಧಾರಣೀಕರಣ ಉಳ್ಳವರಾಗಿದ್ದು ಹೆಚ್ಚಿನ ಅಥವಾ ಎಲ್ಲಾ ವಿಷಯಗಳಲ್ಲೂ ಚೆನ್ನಾಗಿ ಮಾಡಲು ಶ್ರಮಿಸುತ್ತಾರೆ. ಹೀಗೆ ತಮ್ಮ ಸಮಯ, ಶಕ್ತಿ ಮತ್ತು ಪ್ರತಿಭೆಗಳನ್ನು ಹಲವು ಶೈಕ್ಷಣಿಕ ಕ್ಷೇತ್ರಗಳ ವಿಶಾಲ ವ್ಯಾಪ್ತಿಯ ಹರವಿನಲ್ಲಿ ವ್ಯಯಿಸುವುದರಿಂದ ಹೆಣ್ಣುಮಕ್ಕಳು ಯಾವುದೇ ಒಂದು ವಿಷಯದಲ್ಲಿ ಅಸಾಧಾರಣ ಪರಿಣತಿಯನ್ನು ಸಾಧಿಸುವ (ನಿರ್ದಿಷ್ಟವಾಗಿ 'ಪುರುಷ" ವಿಷಯಗಳಾದ ಗಣಿತ ಮತ್ತು ವಿಜ್ಞಾನದಲ್ಲಿ) ಸಾಧ್ಯತೆ ಕಡಿಮೆ (ಡೆನಿಸೆನ್, ಝೂರೆಟ್, ಮತ್ತು ಇಕ್ಲಿಸ್, 2007).

ಹೇಗೆ ಆಧಾರರಹಿತ ಲಿಂಗತ್ವ ರೂಢಮಾದರಿಗಳು ಪ್ರತಿಭಾನ್ವಿತ ಹೆಣ್ಣುಮಕ್ಕಳ ಶೈಕ್ಷಣಿಕ ಮತ್ತು ವೃತ್ತಿಸಂಬಂಧಿ ಆಕಾಂಕ್ಷೆಗಳನ್ನು ಕುಗ್ಗಿಸುತ್ತವೆ ಎಂಬುದರ ಬಗೆಗೆ ಇತ್ತೀಚಿನ ದಿನಗಳಲ್ಲಿ ಪಾಲಕರು, ಶಿಕ್ಷಕರು, ಮತ್ತು ಪರಾಮರ್ಶಕರಿಗೆ ಸೂಕ್ಷ್ಮವಾಗಿ ಅರಿವು ಮೂಡಿಸುವ ಪ್ರಯತ್ನಗಳಾಗುತ್ತಿವೆ ಮತ್ತು ಆ ನಿಟ್ಟಿನಲ್ಲಿ ಸುಧಾರಣೆಗಳಾಗುತ್ತಿರುವುದು ಕಂಡುಬರುತ್ತಿದೆ. ಇಕ್ಲಿಸ್ ಮತ್ತು ಅವರ ಸಹೋದ್ಯೋಗಿಗಳು (ಫ್ರೆಡರಿಕ್ಸ್ ಮತ್ತು ಇಕ್ಲಿಸ್, 2002) ಕೈಕೊಂಡ ಒಂದು ಅನುಲಂಬೀಯ ಅಧ್ಯಯನದಲ್ಲಿ ಕಂಡುಬಂದ ಹಾಗೆ, ಹೆಣ್ಣುಮಕ್ಕಳು 12ನೆಯ ಇಯತ್ತೆಗೆ ಕಾಲಿಡುವ ಹೊತ್ತಿಗೆ ಗಣಿತಕ್ಕೆ ಅವರು ಗಂಡುಮಕ್ಕಳಷ್ಟೇ ಪ್ರಾಧಾನ್ಯವನ್ನು ನೀಡತೊಡಗಿದರು ಮತ್ತು ತಾವು ಗಣಿತದಲ್ಲಿ ಗಂಡುಮಕ್ಕಳಷ್ಟೇ ಸಮರ್ಥರು ಎಂದು ಪರಿಗಣಿಸತೊಡಗಿದರು (ಆದರೂ ಅವರ ಪ್ರೌಢಶಾಲಾ ವರ್ಷಗಳಲ್ಲಿ ಎರಡೂ ಲಿಂಗದವರಿಂದ ಗಣಿತೀಯ ಮೌಲ್ಯ ಮತ್ತು ಸಾಮರ್ಥ್ಯಗಳಲ್ಲಿ ಇಳಿಕೆ ಕಂಡುಬಂದಿತ್ತು). ಇವತ್ತಿನ ಮಟ್ಟಿಗೆ ಅಮೇರಿಕಾದಲ್ಲಿ ವಿಜ್ಞಾನ ಮತ್ತು ಇಂಜಿನಿಯರಿಂಗ್‌ನ ಒಟ್ಟೂ ಕಾರ್ಯಬಲದ ಶೇಕಡಾ 23ರಷ್ಟು ಭಾಗದಲ್ಲಿ ಮಾತ್ರ ಮಹಿಳೆಯರು ಇರುವುದಾದರೂ, ಪುರುಷರಿಗಿಂತಾ ಹೆಚ್ಚು ಪ್ರಮಾಣದಲ್ಲಿ ಮಹಿಳೆಯರು ಕಾಲೇಜು ಪ್ರವೇಶಿಸಿ ಪದವಿ ಪಡೆಯುತ್ತಿದ್ದಾರೆ. (ಲಿಪ್ಸ್, 2006), 2005ರಲ್ಲಿ ಶೇಕಡಾ 49ರಷ್ಟು ಕಾನೂನು ಪದವಿಗಳನ್ನು, ಶೇಕಡಾ 47 ರಷ್ಟು ವೈದ್ಯಕೀಯ ಪದವಿಗಳನ್ನು, ಹಾಗೂ ಶೇಕಡಾ 44ರಷ್ಟು ಇಂಜಿನಿಯರಿಂಗ್ ಮತ್ತು ವಿಜ್ಞಾನ ವಿಭಾಗಗಳ ಪದವಿಗಳನ್ನು ಮಹಿಳೆಯರೇ ಪಡೆದರು. 1976ರಲ್ಲಿ ಪದವಿ ಪಡೆದ ಮಹಿಳೆಯರ ಶೇಕಡಾವಾರು ಲೆಕ್ಕ ಹಾಕಿದಾಗ, ವಿಜ್ಞಾನ ಮತ್ತು ಇಂಜಿನಿಯರಿಂಗ್ ವಿಭಾಗದಲ್ಲಿ ಶೇಕಡಾ 10, ಕಾನೂನಿನಲ್ಲಿ ಶೇಕಡಾ 18, ವೈದ್ಯಕೀಯದಲ್ಲಿ ಶೇಕಡಾ 28 ಮಾತ್ರವೇ ಇತ್ತು (ಸಿಂಕರ್, 2007). 2006ರಲ್ಲಿ ನ್ಯಾನ್ಸಿ ಪೊಲೊಸಿಯವರು ಕಾಂಗ್ರೆಸ್ಸಿನ

ಮೊದಲ ಮಹಿಳಾ ನಾಯಕಿಯಾದರು (ಅಮೇರಿಕಾದ ಶಾಸಕಾಂಗದ ಸ್ಪೀಕರ್ ಕೂಡಾ), ಮತ್ತು 2007ರಲ್ಲಿ ಅಮೇರಿಕಾ ಅಧ್ಯಕ್ಷ ಸ್ಥಾನಕ್ಕೆ ಸೆನೆಟರ್ ಹಿಲರಿ ಕ್ಲಿಂಟನ್ ಅವರು ಮೊತ್ತ ಮೊದಲ ಗಂಭೀರವಾಗಿ ಪರಿಗಣಿಸಲ್ಪಟ್ಟ ಮಹಿಳಾ ಸ್ಪರ್ಧಿಯಾಗಿ ಹೊರಹೊಮ್ಮಿದ್ದರು. ಆದ್ದರಿಂದ, ಮಹಿಳೆಯರು ಮುಂದಿನ ದಿನಗಳಲ್ಲಿ ರಾಜಕೀಯ, ತಜ್ಞ ವೃತ್ತಿಗಳು, ವಿಜ್ಞಾನ ಕ್ಷೇತ್ರ, ವ್ಯಾಪಾರದ ಕೌಶಲ್ಯ, ಮತ್ತು ಹೆಚ್ಚುಕಡಿಮೆ ಬದುಕಿನ ಎಲ್ಲ ಕಾರ್ಯಕ್ಷೇತ್ರಗಳಲ್ಲಿಯೂ ಹೆಚ್ಚಿನ ಪ್ರಾತಿನಿಧ್ಯವನ್ನು ತೋರಿಸುತ್ತ ಬಂದ ಹಾಗೆ ಮಹಿಳೆಯರ ಸಾಮರ್ಥ್ಯಗಳಿಗೆ ಸಂಬಂಧಿಸಿದಂತೆ ಅವರನ್ನು ನಿರ್ಬಂಧಿಸುವ ರೂಢಮಾದರಿಗಳು ಕ್ರಮೇಣ ಕುಸಿಯುತ್ತ ಹೋಗುತ್ತವೆ ಎಂದು  ಅಂದುಕೊಳ್ಳುವುದು ಸಕಾರಣವಾಗಿಯೇ ಇದೆ. ಅಂತಹ ಪ್ರವೃತ್ತಿಯನ್ನು ವಿರೋಧಿಸುವುದೆಂದರೆ ಒಂದು ಅಮೂಲ್ಯ ಸಂಪನ್ಮೂಲವೊಂದನ್ನು ಅಪವ್ಯಯ ಮಾಡಿದಂತೆ ಆಗುತ್ತದೆ, ಅಂದರೆ ಜಗತ್ತಿನ ಜನಸಂಖ್ಯೆಯ ಅರ್ಧಕ್ಕಿಂತ ಹೆಚ್ಚಿನ ಭಾಗದ ಸಾಮರ್ಥ್ಯಗಳು ಮತ್ತು ಪ್ರಯತ್ನಗಳನ್ನು ಅಪವ್ಯಯಿಸಿದಂತೆ.

**ಛಾಯಾಚಿತ್ರ**: ದೃಶ್ಯ ಮತ್ತು ಸ್ಥಳವಿಸ್ತಾರದ ಆಟಿಕೆಗಳೊಂದಿಗೆ ಆಡುವ ಬಾಲಕಿಯರು ಸ್ಥಳವಿಸ್ತಾರದ ಪರೀಕ್ಷೆಗಳಲ್ಲಿ ಉತ್ತಮ ಸಾಧನೆ ತೋರುತ್ತಾರೆ.

ಈಗ ಬಾಲಕರು ಮತ್ತು ಬಾಲಕಿಯರು ತಮ್ಮನ್ನು ತಾವು ಏಕೆ ಇಷ್ಟೊಂದು ಭಿನ್ನವಾಗಿ ಅವಲೋಕಿಸುತ್ತಾರೆ ಮತ್ತು ಬಹಳಷ್ಟು ವೇಳೆ ವಿಭಿನ್ನ ಪಾತ್ರಗಳನ್ನು ವಹಿಸಲು ಆಯ್ದುಕೊಳ್ಳುತ್ತಾರೆ ಎಂದು ತಿಳಿಯಲು   ಲಿಂಗತ್ವ ಪ್ರರೂಪ ಪ್ರಕ್ರಿಯೆಯನ್ನು ಪರಿಶೀಲಿಸೋಣ.

**ಲಿಂಗತ್ವ ಅನನ್ಯತೆ: ತನ್ನ ಲಿಂಗತ್ವ ಮತ್ತು ಅದರ** ಸೂಚ್ಯಾರ್ಥಗಳ ಬಗ್ಗೆ ವ್ಯಕ್ತಿಗಿರುವ ಅರಿವು

## ಲಿಂಗತ್ವ ಪ್ರರೂಪಣದ ವಿಕಾಸಾತ್ಮಕ ಧಾಟಿಗಳು

ಸಾಂಪ್ರದಾಯಿಕವಾಗಿ ಲಿಂಗ ಪ್ರರೂಪಣದ ಸಂಶೋಧನೆಯು ಮೂರು ಪ್ರತ್ಯೇಕವಾದ, ಆದರೆ ಪರಸ್ಪರ ಸಂಬಂಧವುಳ್ಳ ವಿಷಯಗಳ ಮೇಲೆ ಕೇಂದ್ರೀಕೃತವಾಗಿದೆ: 1) **ಲಿಂಗತ್ವ ಅನನ್ಯತೆಯ ವಿಕಾಸ**, ಅಥವಾ ತಾನು ಒಬ್ಬ ಹುಡುಗ, ಅಥವಾ ಹುಡುಗಿ, ಮತ್ತು ಲಿಂಗತ್ವವು ಎಂದೂ ಬದಲಾಗದ ಒಂದು ಲಕ್ಷಣ ಎಂಬ ಎಂಬ ಅರಿವು  2) **ಲಿಂಗತ್ವ-ಪಾತ್ರ ರೂಢಮಾದರಿಗಳ ಬೆಳವಣಿಗೆ**, ಅಥವಾ ಪುರುಷರು ಮತ್ತು ಸ್ತ್ರೀಯರು ಹೇಗಿರಬೇಕು ಎನ್ನುವುದರ ಬಗೆಗಿನ ಆಲೋಚನೆಗಳು; 3) ಲಿಂಗತ್ವ-ಪ್ರರೂಪಿತ ವರ್ತನಾ ವಿನ್ಯಾಸಗಳ ವಿಕಾಸ- ಅಂದರೆ ಮಗುವೊಂದು ತನ್ನ ಲಿಂಗಕ್ಕೆ ಸಂಬಂಧಿಸಿದ ಚಟುವಟಿಕೆಗಳನ್ನು ಸಾಮಾನ್ಯವಾಗಿ ಮತ್ತೊಂದು ಲಿಂಗಕ್ಕೆ ಸೇರಿದವರಿಗೆ ಸಂಬಂಧಿಸಿದ ಚಟುವಟಿಕೆಗಳಿಗೆ ಬದಲಾಗಿ ಇಷ್ಟಪಡುವ ಪ್ರವೃತ್ತಿ.

### ಲಿಂಗತ್ವ ಸಂಕಲ್ಪನೆಯ ವಿಕಾಸ

ಲಿಂಗತ್ವ ಅನನ್ಯತೆಯ ವಿಕಾಸದ ಮೊದಲ ಹೆಜ್ಜೆಯೆಂದರೆ ಪುರುಷರನ್ನು ಸ್ತ್ರೀಯರಿಂದ ಬೇರ್ಪಡಿಸಿ ತಮ್ಮನ್ನು ಅವರೆರಡರಲ್ಲಿ ಒಂದು ವರ್ಗದಲ್ಲಿ ನೆಲೆಸಿಕೊಳ್ಳುವುದು. ಸರಳವಾದ ಲಿಂಗತ್ವ ಬೇರ್ಪಡಿಕೆ  ಬಹಳ ಚಿಕ್ಕಂದಿನಲ್ಲೇ ಪ್ರಾರಂಭವಾಗುತ್ತದೆ.

ಶಿಶುಗಳು ನಾಲ್ಕು ತಿಂಗಳಾಗುವ ಹೊತ್ತಿಗಾಗಲೇ ಬಹು-ಇಂದ್ರಿಯ ಗ್ರಹಿಕೆಯ (intermodal perception) ಪರೀಕ್ಷೆಗಳಲ್ಲಿ ಸ್ತ್ರೀ ಮತ್ತು ಪುರುಷ ಧ್ವನಿಗಳನ್ನು ಸಂಬಂಧಪಟ್ಟ ಮುಖಗಳೊಂದಿಗೆ ಹೊಂದಿಸಿ ಗ್ರಹಿಸಿಕೊಳ್ಳಲು ಶುರು ಮಾಡಿರುತ್ತವೆ (ವಾಕರ್-ಆಂಡ್ರ್ಯೂಸ್ ಮತ್ತಿತರರು., 1991); ನಂತರ ಒಂದು ವರ್ಷದ ಕೊನೆಗೆ, ಸ್ತ್ರೀ-ಪುರುಷರ ಸ್ಥಿರ ಛಾಯಾಚಿತ್ರಗಳಲ್ಲಿ ಭೇದ ಗುರುತಿಸಲು ಕಲಿಯುತ್ತವೆ (ಲೇನ್‌ಬಾಕ್ ಮತ್ತು ಫ್ಯಾಗಟ್, 1993).

2 ಮತ್ತು 3 ವರ್ಷಗಳ ನಡುವೆ, ಚಿಕ್ಕಮಕ್ಕಳು "ಅಮ್ಮ" ಮತ್ತು "ಅಪ್ಪ" ಎಂಬ ಗುರುತಿಸುವಿಕೆಯನ್ನು ಮೈಗೂಡಿಸಿಕೊಂಡು ಆ ಪದಗಳನ್ನು ಸಮರ್ಪಕವಾಗಿ ಬಳಸಲು ಕಲಿಯುವುದರಿಂದ ಲಿಂಗತ್ವದ ಬಗೆಗೆ ತಮಗೇನು ಗೊತ್ತಿದೆ ಎಂಬುದನ್ನು ನಮಗೆ ಹೇಳಲು ಆರಂಭಿಸುತ್ತಾರೆ, ಮತ್ತು ಸ್ವಲ್ಪ ಆಮೇಲೆ "ಹುಡುಗ" ಮತ್ತು "ಹುಡುಗಿ" ಎಂಬ ಗುರುತಿಸುವಿಕೆಯನ್ನೂ ಕಲಿಯುತ್ತಾರೆ (ಲೇನ್‌ಬಾಕ್ ಮತ್ತು ಫ್ಯಾಗಟ್, 1986). ಎರಡೂವರೆಯಿಂದ ಮೂರು ವರ್ಷಗಳಾಗುವ ಹೊತ್ತಿಗೆ ಹೆಚ್ಚಿನ ಮಕ್ಕಳು ತಾವು ಹುಡುಗನೋ, ಹುಡುಗಿಯೋ ಎಂಬುದನ್ನು ಕರಾರುವಕ್ಕಾಗಿ ಹೇಳಬಲ್ಲವರಾಗುತ್ತಾರೆ (ಥಾಮ್ಸನ್, 1975; ವಾರಿನ್, 2000), ಆದರೂ ಲಿಂಗತ್ವವು ಶಾಶ್ವತವಾಗಿ ತಮ್ಮೊಂದಿಗೆ ಇರುವ ಲಕ್ಷಣ ಎನ್ನುವುದನ್ನು ಅರಿಯಲು ಅವರಿಗೆ ಇನ್ನೂ ಹೆಚ್ಚಿನ ಸಮಯ ಬೇಕಾಗುತ್ತದೆ. ಉದಾಹರಣೆಗೆ, ನಿಜವಾಗಿಯೂ ಬಯಸಿದರೆ ಹುಡುಗರು ಅಮ್ಮಂದಿರಾಗಲು ಸಾಧ್ಯ ಮತ್ತು ಹುಡುಗಿಯರು ಅಪ್ಪಂದಿರಾಗಬಹುದು ಎಂದು, ಅಥವಾ ಬಟ್ಟೆ ಮತ್ತು ಕೂದಲ ಶೈಲಿಯನ್ನು ಬದಲಾಯಿಸಿಕೊಳ್ಳುವ ಮೂಲಕ ತಾವು ಮತ್ತೊಂದು ಲಿಂಗದವರಾಗಬಹುದು ಎಂದು 3 ರಿಂದ 5 ರ ಒಳಗಿನ ಹೆಚ್ಚಿನ ಮಕ್ಕಳು ಯೋಚಿಸುತ್ತಾರೆ (ಫ್ಯಾಗಟ್, 1985ಬ; Szkrybalo ಮತ್ತು ರೂಬಲ್, 1999; ವಾರಿನ್, 2000). ಸಾಮಾನ್ಯವಾಗಿ ಮಕ್ಕಳಿಗೆ 5 ರಿಂದ 7 ವರ್ಷಗಳಾಗುವ ಹೊತ್ತಿಗೆ ಅವರಿಗೆ ಲಿಂಗತ್ವ ಶಾಶ್ವತವಾದ ಲಕ್ಷಣ ಎಂಬುದು ಅರ್ಥವಾಗತೊಡಗುತ್ತದೆ, ಹೀಗಾಗಿ ಹೆಚ್ಚಿನ ಎಳೆಯರು ಔಪಚಾರಿಕ ಶಿಕ್ಷಣವನ್ನು ಆರಂಭಿಸುವ ಹೊತ್ತಿಗೆ ತಾನು ಹುಡುಗ ಅಥವಾ ತಾನು ಹುಡುಗಿ ಎಂಬ ಒಂದು ಧೃಡ, ಭವಿಷ್ಯಮುಖಿಯಾದ ಅನನ್ಯತೆಯ ಹೊಂದಿರುತ್ತಾರೆ (Szkrybalo ಮತ್ತು ರೂಬಲ್, 1999).

ಒಬ್ಬರ ಲಿಂಗತ್ವ ಅನನ್ಯತೆಯ ಅರಿವು "ನಾನು ಒಬ್ಬ ಹುಡುಗ/ಹುಡುಗಿ ಮತ್ತು ನಾನು ಯಾವತ್ತೂ ಹುಡುಗ/ಹುಡುಗಿಯಾಗಿಯೇ ಇರುತ್ತೇನೆ" ಎಂಬುದನ್ನಷ್ಟೇ ಅಲ್ಲದೆ, "ನಾನು ನನ್ನ ಲಿಂಗತ್ವಕ್ಕೆ ವಿಶಿಷ್ಟವಾದ/ವಿಶಿಷ್ಟವಲ್ಲದ ಸದಸ್ಯ," "ನನಗೆ ನನ್ನ ಜೈವಿಕ ಲಿಂಗವನ್ನು ಕುರಿತು ತೃಪ್ತಿ ಇದೆ/ತೃಪ್ತಿ ಇಲ್ಲ," "ಅನ್ಯಜೈವಿಕ ಲಿಂಗಗಳ ವ್ಯಾಪ್ತಿಯ ಆಯ್ಕೆಗಳನ್ನು ಶೋಧಿಸಲು ನಾನು ಸ್ವತಂತ್ರನೆಂದು/ಸ್ವತಂತ್ರನಲ್ಲವೆಂದು ನನಗೆ ಅನಿಸುತ್ತದೆ," ಮತ್ತು "ನನ್ನ ಲಿಂಗವು ಬೇರೆ ಲಿಂಗಕ್ಕಿಂತ ಶ್ರೇಷ್ಠ/ಶ್ರೇಷ್ಠವಲ್ಲ" ಎಂಬ ರೀತಿಯ ತೀರ್ಮಾನಗಳನ್ನೂ ಒಳಗೊಳ್ಳುತ್ತದೆ ಎಂದು ಸೂಸನ್ ಈಗನ್ ಮತ್ತು ಡೇವಿಡ್ ಪೆರ್ರಿ (2001) ವಾದಿಸುತ್ತಾರೆ. ಇಂತಹ ಲಿಂಗತ್ವ ಅನನ್ಯತೆಯ ಮುಂದುವರಿದ ಆಯಾಮಗಳು ಪ್ರಾಥಮಿಕ ಶಾಲಾ ಅವಧಿಯಲ್ಲೇ ಹುಟ್ಟಿಕೊಳ್ಳುತ್ತವೆ ಮತ್ತು ಒಂದು ಮಗುವಿನ ವೈಯಕ್ತಿಕ ಹಾಗೂ ಸಾಮಾಜಿಕ ಹೊಂದಾಣಿಕೆಯ ಮೇಲೆ ಪ್ರಭಾವ ಬೀರುವಲ್ಲಿ ಒಂದು ಅರ್ಥಪೂರ್ಣ ಪಾತ್ರವನ್ನು ವಹಿಸಿಕೊಳ್ಳುತ್ತವೆ.

## ಲಿಂಗತ್ವ- ಪಾತ್ರ ರೂಢಮಾದರಿಗಳ ವಿಕಾಸ

ಎಳೆಯ ಮಕ್ಕಳು ತಾವು ಹುಡುಗರು ಅಥವಾ ಹುಡುಗಿಯರು ಎಂಬ ಮೂಲ ಅನನ್ಯತೆಗಳ ಬಗೆಗೆ ಯಾವಾಗಿನಿಂದ ಅರಿಯಲು ಆರಂಭಿಸುತ್ತಾರೋ ಹೆಚ್ಚುಕಡಿಮೆ ಅದೇ ಸಮಯದಲ್ಲಿ ಲಿಂಗತ್ವ ಪಾತ್ರಗಳಿಗೆ ಸಂಬಂಧಿಸಿದ ರೂಢಮಾದರಿಗಳನ್ನು ಸಹಾ ದಕ್ಕಿಸಿಕೊಳ್ಳಲು ಆರಂಭಿಸುತ್ತಾರೆ ಎನ್ನುವದು ಗಮನಾರ್ಹ ಸಂಗತಿಯೇ ಆಗಿದೆ (ಜೆಲ್ಮನ್, ಟೇಲರ್, ಮತ್ತು ಗೂಯೇ, 2004). ಡಿಯಾನ ಕುನ್ಹ್ ಮತ್ತು ಅವರ ಸಹಭಾಗಿಗಳು (1978) ಒಂದು ಗಂಡು ಗೊಂಬೆ ("ಮೈಕೆಲ್") ಮತ್ತು ಇನ್ನೊಂದು ಹೆಣ್ಣು ಗೊಂಬೆಯನ್ನು ("ಲೀಸಾ) ಎರಡೂವರೆಯಿಂದ ಮೂರುವರೆ ವರ್ಷದೊಳಗಿನ ಮಕ್ಕಳಿಗೆ ತೋರಿಸಿ, ಆ ಎರಡು ಗೊಂಬೆಗಳಲ್ಲಿ ಯಾವುದು –ಅಡುಗೆ ಮಾಡುವುದು, ಹೊಲಿಯುವುದು, ಗೊಂಬೆಗಳೊಂದಿಗೆ ಆಡುವುದು, ಟ್ರಕ್ಕುಗಳು ಅಥವಾ ಟ್ರೇನುಗಳೊಂದಿಗೆ ಆಡುವುದು, ಬಹಳ ಮಾತನಾಡುವುದು. ಮುತ್ತು ಕೊಡುವುದು, ಹೊಡೆದಾಡುವುದು ಅಥವಾ ಮರ ಹತ್ತುವುದರಂತಹ ಲಿಂಗಾಧಾರಿತ ರೂಢಮಾದರಿಗಳನ್ನು ಆಧರಿಸಿದ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುತ್ತದೆ ಎಂದು ಕೇಳಿದರು. ಹೆಚ್ಚುಕಡಿಮೆ ಎರಡೂವರೆ ವರ್ಷದ ಎಲ್ಲ ಮಕ್ಕಳಿಗೂ ಲಿಂಗತ್ವ-ಪಾತ್ರಗಳ ರೂಢಮಾದರಿಗಳ ಜ್ಞಾನವಿತ್ತು. ಉದಾಹರಣೆಗೆ ಹೆಣ್ಣುಮಕ್ಕಳು ಹೆಚ್ಚು ಮಾತನಾಡುತ್ತಾರೆ, ಹೊಡೆದಾಟಕ್ಕೆ ಬರುವುದಿಲ್ಲ, ಅವರಿಗೆ ಇನ್ನೊಬ್ಬರ ಸಹಾಯ ಬೇಕು, ಗೊಂಬೆಗಳೊಂದಿಗೆ ಆಡಲು ಬಯಸುತ್ತಾರೆ ಮತ್ತು ಮನೆಗೆಲಸದಲ್ಲಿ ತಾಯಂದಿರಿಗೆ ಸಹಾಯ ಮಾಡುತ್ತಾರೆ ಎಂಬುದನ್ನು ಬಾಲಕರು ಮತ್ತು ಬಾಲಕಿಯರಿಬ್ಬರೂ ಒಪ್ಪಿಕೊಂಡರು. ವ್ಯತಿರಿಕ್ತವಾಗಿ, ಗಂಡುಮಕ್ಕಳು ಕಾರಿನೊಂದಿಗೆ ಆಡಲು ಬಯಸುತ್ತಾರೆ, ತಂದೆಯರಿಗೆ ಸಹಾಯ ಮಾಡುತ್ತಾರೆ, ವಸ್ತುಗಳನ್ನು ರಚಿಸುತ್ತಾರೆ, ಮತ್ತು ಅವರು "ನಾನು ನಿನಗೆ ಹೊಡೆಯಬಲ್ಲೆ" ಎಂಬಂತಹ ಹೇಳಿಕೆಗಳನ್ನು ಹೇಳುವಂಥವರು ಎಂದು ಆ ಮಕ್ಕಳಿಗೆ ಅನಿಸಿತ್ತು (ಬ್ಲಾಕ್‌ಮೋರ್ ಅವರನ್ನೂ ಓದಿ, 2003). ಲಿಂಗತ್ವ ರೂಢಮಾದರಿಗಳನ್ನು ಬಲ್ಲ 2 ರಿಂದ 3 ವರ್ಷದ ಮಕ್ಕಳು ಇತರ ಮಕ್ಕಳ ಛಾಯಾಚಿತ್ರಗಳನ್ನು ನೋಡಿ ಇವರು ಹುಡುಗರು, ಇವರು ಹುಡುಗಿಯರು ಎಂದು ಸಮರ್ಪಕವಾಗಿ ಗುರುತಿಸಲು ಬಲ್ಲವರಾಗಿರುತ್ತಾರೆ (ಫ್ಯಾಗಟ್, ಲೇನ್‌ಬಾಕ್, ಮತ್ತು ಒ'ಬಾಯ್ಲ್, 1992).

> **ಛಾಯಾಚಿತ್ರ:** ಹುಡುಗರು ಮತ್ತು ಹುಡುಗಿಯರು ಬೇರೆ ಬೇರೆ ಪ್ರಕಾರದ ಚಟುವಟಿಕೆಗಳನ್ನು ಮಾಡಲು ಬಯಸುತ್ತಾರೆ ಎಂಬುದು ಮಕ್ಕಳಿಗೆ ಎರಡೂವರೆಯಿಂದ ಮೂರು ವರ್ಷಗಳಾಗುವ ಹೊತ್ತಿಗೆ ತಿಳಿಯುತ್ತದೆ ಮತ್ತು ಅವರು ಲಿಂಗತ್ವ-ಪಾತ್ರ ರೂಢಮಾದರಿಗಳನ್ನು ಅನುಸರಿಸಿ ಆಡಲು ಆರಂಭಿಸುತ್ತಾರೆ.

ಶಾಲಾಪೂರ್ವ ಮತ್ತು ಆರಂಭಿಕ-ಮಟ್ಟದ ಶಾಲಾ ವರ್ಷಗಳಲ್ಲಿ ಮಕ್ಕಳು ಆಟಿಕೆಗಳು, ಚಟುವಟಿಕೆಗಳು, ಮತ್ತು ಹುಡುಗಿಯರು ಹಾಗೂ ಹುಡುಗರಿಗೆ ಸೂಕ್ತ ಎನಿಸಿದ ವಿಶಿಷ್ಟ ಸಾಧನೆಯ ಕ್ಷೇತ್ರಗಳ ಬಗೆಗೆ ಹೆಚ್ಚು ಹೆಚ್ಚು ಕಲಿಯತೊಡಗುತ್ತಾರೆ (ಬ್ಲಾಕ್‌ಮೋರ್, 2003; ಸರ್ಬಿನ್, ಪೌಲಿಸ್ಟಾ, ಮತ್ತು ಗುಲ್ಕೊ, 1993; ವೆಲ್ಚ್-ರೋಸ್ ಮತ್ತು ಶ್ಮಿಟ್, 1996). ಕಾಲಕ್ರಮೇಣ, ಶಾಲಾ ಮಕ್ಕಳು ಮೊದಲು ತಮ್ಮದೇ ಲಿಂಗಕ್ಕೆ ಸಂಬಂಧಿಸಿದ ಧನಾತ್ಮಕ

ಗುಣವಿಶೇಷಗಳನ್ನು ಮೊದಲು ಕಲಿತು, ನಂತರ ಅನ್ಯ ಲಿಂಗದ ನಕಾರಾತ್ಮಕ ಗುಣವಿಶೇಷಗಳನ್ನು ಅರಿತು, ಎರಡು ಲಿಂಗಗಳ ಮಾನಸಿಕ ಆಯಾಮಗಳ ನಡುವೆ ಪ್ರಖರವಾದ ವಿಭೇದವನ್ನು ಮಾಡುತ್ತಾರೆ. (ಸರ್ಬಿನ್, ಪೌಲಿಸ್ಕಾ, ಮತ್ತು ಗುಲ್ಕೊ, 1993). ಮಕ್ಕಳಿಗೆ 10 ಮತ್ತು 11 ವರ್ಷಗಳಾಗುವ ಹೊತ್ತಿಗೆ, ಅವರು ವ್ಯಕ್ತಿತ್ವ ಗುಣವಿಶೇಷಣಗಳನ್ನು ರೂಢಮಾದರಿ ಮಾಡುವುದು ವಯಸ್ಕರನ್ನೂ ಮೀರಿಸತೊಡಗುತ್ತದೆ. ಒಂದು ಸುಪ್ರಸಿದ್ಧ ಅಂತರ-ಸಾಂಸ್ಕೃತಿಕ ಅಧ್ಯಯನದಲ್ಲಿ ಮಹಿಳೆಯರು ದುರ್ಬಲರು, ಭಾವುಕರು, ಮೃದು ಹೃದಯಿಗಳು, ನಯನಾಜೂಕಿನವರು, ವಾತ್ಸಲ್ಯಮಯಿಗಳೂ ಆಗಿರುತ್ತಾರೆ, ಮತ್ತು ಪುರುಷರು ಮಹತ್ವಾಕಾಂಕ್ಷಿಗಳೂ, ತಮ್ಮ ಹಠ ಸಾಧಿಸುವವರು, ಆಕ್ರಮಣಶೀಲರು, ಯಜಮಾನಿಕೆಯನ್ನು ಸಾಧಿಸುವವರು ಮತ್ತು ಕ್ರೂರಿಗಳೂ ಆಗಿರುತ್ತಾರೆ ಎಂದು ಇಂಗ್ಲೆಂಡ್, ಐರ್ಲೆಂಡ್, ಮತ್ತು ಅಮೇರಿಕಾದ ನಾಲ್ಕು ಮತ್ತು ಐದನೆಯ ಇಯತ್ತೆಯ ಮಕ್ಕಳು ಭಾವಿಸಿದ್ದರು ಎಂದು ದೆಬೊರಾ ಬೆಸ್ಟ್ ಮತ್ತು ಅವರ ಸಹೋದ್ಯೋಗಿಗಳಿಗೆ (1977) ಕಂಡುಬಂದಿತು. ಅದರ ನಂತರ ಮುಂದುವರೆದ ಸಂಶೋಧನೆಯಲ್ಲಿ ಭಾಗಿಯಾಗಿದ್ದ ಜಗತ್ತಿನ ಅನೇಕ ದೇಶಗಳ ಪುರುಷರು ಮತ್ತು ಸ್ತ್ರೀಯರು ಇವೇ ವ್ಯಕ್ತಿತ್ವದ (ಮತ್ತು ಇನ್ನಿತರ) ಆಯಾಮಗಳನ್ನು ವಿಶ್ವಸನೀಯ ರೀತಿಯಲ್ಲಿ ಮಹಿಳೆಯರು ಮತ್ತು ಪುರುಷರಿಗೆ ಆರೋಪಿಸುತ್ತಾರೆ ಎಂದು ತೋರಿಸಿತು(ವಿಲಿಯಮ್ಸ್, ಸ್ಯಾಟರ್‌ವೈಟ್, ಮತ್ತು ಬೆಸ್ಟ್, 1999).

ಆದರೆ, ಮಕ್ಕಳು ಈ ರೂಢಮಾದರಿಗಳನ್ನು ಗಂಭೀರವಾಗಿ ಪರಿಗಣಿಸುತ್ತಾರೆಯೆ, ಮತ್ತು ಇವು ತಾವು ಕಡ್ಡಾಯವಾಗಿ ಅನುಸರಿಸಲೇಬೇಕಾದ ವಿಧಾಯಕಗಳು ಎಂದು ನಂಬುತ್ತಾರೆಯೆ? 3 ರಿಂದ 7 ರ ಒಳಗಿನ ಹೆಚ್ಚಿನ ಮಕ್ಕಳು ನಂಬುತ್ತಾರೆ; ಅವರೂ ಪುಟ್ಟ ಶುವನಿಸ್ಟರಂತೆ ಲಿಂಗತ್ವ-ಪಾತ್ರ ಮಾನಕಗಳು ಎಲ್ಲರಿಗೂ ಅನ್ವಯವಾಗುವ ಮುರಿಯಲಾಗದ ನಿಯಮಗಳು ಎನ್ನುವಂತೆ ತರ್ಕಿಸುತ್ತಾರೆ. (ಬ್ಯಾನರ್ಜಿ, ಲಿಂಟರ್ನ್, 2000; ಬೀರ್ನಾತ್, 1991, ರೂಬಲ್ ಮತ್ತು ಮಾರ್ಟಿನ್, 1998). ಗೊಂಬೆಗಳೊಂದಿಗೆ ಆಡಲು ಬಯಸುವ ಆರು ವರ್ಷದ ಜಾರ್ಜ್ ಎಂಬ ಹುಡುಗನ ಪ್ರತಿಕ್ರಿಯೆಯನ್ನು ನೋಡಿ:

(*ಜಾರ್ಜ್ ಗೊಂಬೆಗಳೊಂದಿಗೆ ಆಡಬಾರದು ಎಂದು ಜನರು ಏಕೆ ಹೇಳುತ್ತಾರೆ?*) ಅವನು ಹುಡುಗರು ಆಡುವಂತಹ ಆಟಿಕೆಗಳೊಂದಿಗೆ ಮಾತ್ರ ಆಡಬೇಕು. ಈಗ ಅವನು ಆಡುತ್ತಿರುವ ವಸ್ತುವು ಹುಡುಗಿಯರು ಆಡುವಂದ್ದು. . . (*ಜಾರ್ಜ್ ಬಾರ್ಬಿ ಗೊಂಬೆಗಳೊಂದಿಗೆ ಆಡಬಹುದೆ?*) ಇಲ್ಲ ಸರ್!. . . (*ಹಾಗಾದರೆ ಜಾರ್ಜ್ ಏನು ಮಾಡಬೇಕು?*) ಅವನು ಹುಡುಗಿಯರ ಗೊಂಬೆಗಳೊಂದಿಗೆ ಆಡುವುದನ್ನು ನಿಲ್ಲಿಸಬೇಕು

ಮತ್ತು ಜಿ.ಐ. ಜೋನೊಂದಿಗೆ ಆಡಬೇಕು. (*ಹುಡುಗನೊಬ್ಬ ಜಿ.ಐ.ಜೋನೊಂದಿಗೆ ಏಕೆ ಆಡಬೇಕು, ಬಾರ್ಬಿ ಗೊಂಬೆಯೊಂದಿಗೆ ಏಕಿಲ್ಲ?*) ಏಕೆಂದರೆ, ಹುಡುಗನೊಬ್ಬನು ಬಾರ್ಬಿ ಗೊಂಬೆಯೊಂದಿಗೆ ಆಡುತ್ತಿದ್ದರೆ ಜನ ಅವನನ್ನು ನೋಡಿ ತಮಾಷೆ ಮಾಡುತ್ತಾರೆ. . . ಅಲ್ಲದೆ, ಹುಡುಗಿಯರು ತನ್ನನ್ನು ಇಷ್ಟ ಪಡಬೇಕೆಂದು ಅವನು ಆಟವನ್ನು ಮುಂದುವರೆಸಿದರೆ ಹುಡುಗಿಯರೂ ಅವನನ್ನು ಇಷ್ಟಪಡುವುದಿಲ್ಲ. (ಡಾಮನ್, 1977, ಪು. 255; ಇಟಾಲಿಕ್ಸ್ ಸೇರಿಸಲಾಗಿದೆ)

ಲಿಂಗತ್ವ-ಪಾತ್ರಗಳನ್ನು ಮೀರಿ ನಡೆಯುವುದರ ಬಗೆಗೆ ಚಿಕ್ಕ ಮಕ್ಕಳು ಏಕೆ ಅಷ್ಟು ಕಟ್ಟುನಿಟ್ಟಾಗಿರುತ್ತಾರೆ ಮತ್ತು ಏಕೆ ಅವರಿಗೆ ಅಸಹನೆ? ಮತ್ತು 1970ರಲ್ಲಿ ಮಾಡಿದ ಸಂಶೋಧನೆಯು ಈ ಕಾಲಕ್ಕೂ ಏಕೆ ಅನ್ವಯವಾಗುತ್ತದೆ? ಮೊದಲನೆಯದಾಗಿ, 3

ರಿಂದ 7ರ ಒಳಗಿನ ಮಕ್ಕಳಿಗೆ ಲಿಂಗತ್ವ-ಸಂಬಂಧಿ ವಿಷಯಗಳು ಬಹಳ ಮುಖ್ಯವಾಗಿರುತ್ತವೆ; ಎರಡನೆಯದಾಗಿ, ವಯಸ್ಕರಿಗೆ ಸಂಬಂಧಿಸಿದ ಲಿಂಗತ್ವ ನಿಯಮಗಳಲ್ಲಿ ಸಾಂಸ್ಕೃತಿಕ ಬದಲಾವಣೆಗಳಾದರೂ ಬಾಲ್ಯದಲ್ಲಿ ಒಪ್ಪಿಕೊಂಡ ಲಿಂಗತ್ವ ಮನೋನಕ್ಷೆಗಳಿಗೆ ಅಂಟಿಕೊಳ್ಳುವಂತೆ ಮಾಡುವ ಬಾಲ್ಯದ ಒತ್ತಡಗಳು ಉಳಿದಿರುತ್ತವೆ. ಆಗ ಚಿಕ್ಕ ಹುಡುಗನಾಗಿದ್ದ ಜಾರ್ಜ್ ನನ್ನು ಸಂದರ್ಶಿಸಿ 40 ವರ್ಷಗಳಾದವು, ಆದರೆ ಈಗಲೂ ಹೆಚ್ಚಿನ ಚಿಕ್ಕ ಬಾಲಕಿಯರು ಬಾರ್ಬಿ ಗೊಂಬೆಯೊಂದಿಗೆ ಮತ್ತು ಬಾಲಕರು ಜಿ. ಐ ಜೋ ನೊಂದಿಗೆ ಆಡುತ್ತಾರೆ-ಗೊಂಬೆಗಳೂ ಸಹ ಬದಲಾಗಿಲ್ಲ! ಜೊತೆಗೆ ಅದು, ತಾವು ಹುಡುಗರು ಅಥವಾ ಹುಡುಗಿಯರೆಂದು ಧೃಢವಾಗಿ ವರ್ಗೀಕರಿಸಿಕೊಳ್ಳುವ ಮತ್ತು ತಾವು ಇನ್ನು *ಯಾವತ್ತೂ* ಹುಡುಗರಾಗಿ ಅಥವಾ ಹುಡುಗಿಯರಾಗಿಯೇ ಇರುತ್ತೇವೆ ಎಂದು ಅನುಮಾನಿಸುವ ವಯಸ್ಸು. ಹೀಗೆ ಅವರು ಲಿಂಗತ್ವ-ಪಾತ್ರ ರೂಢಮಾದರಿಗಳನ್ನು "ಸಂಜ್ಞಾನಾತ್ಮಕವಾಗಿ ಸ್ಪಷ್ಟಪಡಿಸಿಕೊಳ್ಳಲು" ಅವನ್ನು ಉತ್ಪ್ರೇಕ್ಷಿಸಿ, ಆ ಮೂಲಕ ತಮ್ಮ ಸ್ವ-ಬಿಂಬಕ್ಕೆ ತಕ್ಕಂತೆ ಬದುಕಬಹುದು (ಮ್ಯಾಕಬಿ, 1998).

ಮಕ್ಕಳಿಗೆ 8 ರಿಂದ 9 ವರ್ಷಗಳು ಆಗುವ ಹೊತ್ತಿಗೆ, ಅವರು ಹೆಚ್ಚು ನಮ್ಯವಾಗುತ್ತಾರೆ ಮತ್ತು ಲಿಂಗತ್ವ ಬಗ್ಗೆ ಅವರ ಯೋಚನೆಗಳಲ್ಲಿ ಶುವನಿಸಂ ಕಡಿಮೆಯಾಗುತ್ತದೆ.(ಬ್ಲಾಕ್‌ಮೋರ್, 2003; ಲೆವಿ, ಟೇಲರ್, ಮತ್ತು ಜೆಲ್ಮನ್, 1995; ಮೆಕ್‌ಹೇಲ್, ಕೌಟರ್, ಮತ್ತು ಟಕರ್, 2001). 9 ವರ್ಷದ ಜೇಮ್ಸ್ ನು ಜನರು ಪಾಲಿಸಲೇಬೇಕಾದ ನೈತಿಕ ನಿಯಮಗಳಿಗೂ ಮತ್ತು, *ಕಡ್ಡಾಯವಲ್ಲದ* ಆದರೆ, ವಾಡಿಕೆಯಲ್ಲಿರುವ ಲಿಂಗತ್ವ-ಪಾತ್ರ ಮಾನದಂಡಗಳಿಗೂ ವ್ಯತ್ಯಾಸವಿರುವುದನ್ನು ಹೇಗೆ ಗುರುತಿಸುತ್ತಾನೆ ಎಂದು ನೋಡಿ:

.

(*ಅವನ ಪಾಲಕರು ಏನು ಮಾಡಬೇಕೆಂದು ನಿನಗೆ ಅನಿಸುತ್ತದೆ?*) ಅವರು. . . ಅವನಿಗೆ ಟ್ರಕ್ಕುಗಳು ಮತ್ತು ಆ ತರಹದ ವಸ್ತುಗಳನ್ನು ತಂದುಕೊಡಬೇಕು ಮತ್ತು ಅವನು ಅದರೊಂದಿಗೆ ಆಡುತ್ತಾನೆಯೆ ಇಲ್ಲವೆ ಎಂಬುದನ್ನು ಗಮನಿಸಬೇಕು. (*ಒಂದು ವೇಳೆ. . . ಅವನು ಗೊಂಬೆಗಳೊಂದಿಗೆ ಆಡುತ್ತ ಉಳಿದರೆ? ಆಗ ಅವರು ಅವನಿಗೆ ಶಿಕ್ಷೆ ಕೊಡುವರೆ?*) ಇಲ್ಲ. (*ಹೇಗೆ?*) ಅವನು ನಿಜಕ್ಕೂ ಅಂತಹ ಕೆಟ್ಟದ್ದನ್ನೇನೂ ಮಾಡುತ್ತಿಲ್ಲ. (*ಅದು ಏಕೆ ಕೆಟ್ಟದ್ದಲ್ಲ?*) ಏಕೆಂದರೆ. . . ಒಂದೊಮ್ಮೆ ಅವನು ಕಿಟಕಿ ಗಾಜನ್ನು ಒಡೆಯುತ್ತಿದ್ದರೆ, ಎಚ್ಚರಿಸಿದರೂ ಅದನ್ನು ಮುಂದುವರೆಸಿದರೆ ಆಗ, ಅವನಿಗೆ ಶಿಕ್ಷೆ ಕೊಡಬಹುದು. ಏಕೆಂದರೆ ನೀವು ಕಿಟಕಿಯ ಗಾಜನ್ನು ಒಡೆಯಬಾರದು. ಆದರೆ ನಿಮಗೆ ಗೊಂಬೆಗಳೊಂದಿಗೆ ಆಡಬೇಕೆಂದಿದ್ದರೆ ನೀವು ಆಡಬಹುದು. (*ಅವರೆಡರಲ್ಲಿಯೂ ಏನು ವ್ಯತ್ಯಾಸ?*) ಕಿಟಕಿಯ ಗಾಜನ್ನು ಒಡೆಯುವಂತಿಲ್ಲ. ಮತ್ತು ನೀವು ಗೊಂಬೆಗಳೊಂದಿಗೆ ಆಡುವುದಾದರೆ ಆಡಬಹುದು, ಆದರೆ ಹುಡುಗರು ಸಾಮಾನ್ಯವಾಗಿ ಗೊಂಬೆಗಳೊಂದಿಗೆ ಆಡುವುದಿಲ್ಲ. (ಡಾಮನ್, 1977, ಪು. 263; ಇಟಾಲಿಕ್ಸ್ ಸೇರಿಸಲಾಗಿದೆ)

ಆದರೆ, ಹುಡುಗರು ಮತ್ತು ಹುಡುಗಿಯರು ಬೇರೆ ಬೇರೆ ಲಿಂಗಗಳಿಗೆ ಸಂಬಂಧಿಸಿದ ಆಸಕ್ತಿಗಳನ್ನು ಮತ್ತು ಚಟುವಟಿಕೆಗಳನ್ನು ನ್ಯಾಯಬದ್ಧವಾಗಿಯೇ ಮುಂದುವರೆಸಬಹುದು ಎಂದು ತರಗತಿ-ಶಾಲೆಯ ಮಕ್ಕಳು ಹೇಳುತ್ತಾರೆ ಎಂದ ಮಾತ್ರಕ್ಕೆ ಹಾಗೆ ಮಾಡಿದವರ ಬಗೆಗೆ ಅವರಿಗೆ *ಸಮ್ಮತಿ* ಇದೆ ಎಂದು ಅರ್ಥವಲ್ಲ. ಅಂತಹ ಲಿಂಗತ್ವ ಪಾತ್ರಗಳನ್ನು ಮೀರಿ ನಡೆಯುವುದರ ಮೌಲ್ಯಮಾಪನ

ಮಾಡಲೋಸುಗ ಅವರನ್ನು ತುಟಿಗೆ ಬಣ್ಣ ಹಚ್ಚುವ ಹುಡುಗನ ಸಂಗಡ ಅಥವಾ, ಕಾಲ್ಚೆಂಡನ್ನು ಆಡುವ ಹುಡುಗಿಯ ಸಂಗಡ ನೀವು ಗೆಳೆತನ ಮಾಡುತ್ತೀರಾ ಎಂದು ಕೇಳಿದಾಗ ತರಗತಿ-ಶಾಲೆಯ ಮಕ್ಕಳು (ಮತ್ತು ವಯಸ್ಕರು) ಹುಡುಗಿಯರ ಉಲ್ಲಂಘನೆಯ ಬಗ್ಗೆ ಸಾಕಷ್ಟು ಉದಾರತೆ ತೋರಿದರು. ಆದರೆ ಭಾಗವಹಿಸಿದವರಲ್ಲಿ, (ಮುಖ್ಯವಾಗಿ ಬಾಲಕರು) ಹುಡುಗಿಯರಂತೆ ವರ್ತಿಸುವ ಹುಡುಗರ ಬಗೆಗೆ ಕಟುವಾಗಿದ್ದರು, ಹುಡುಗರು ಇದು ಹೆಚ್ಚುಕಡಿಮೆ ಒಂದು ನೈತಿಕ ನಿಯಮವನ್ನು ಉಲ್ಲಂಘಿಸಿದಷ್ಟೇ ಕೆಟ್ಟದ್ದು ಎಂಬಂತೆ ಯೋಚಿಸಿದ್ದರು. ಇದು ಗಂಡುಮಕ್ಕಳ ಮೇಲೆ ಲಿಂಗತ್ವ-ಪಾತ್ರಗಳನ್ನು ಅನುಸರಿಸುವ ಒತ್ತಡವು ಎಷ್ಟಿರುತ್ತದೆ ಎಂಬುದರ ಸೂಚನೆಯಾಗಿದೆ (ಬ್ಲಾಕ್‌ಮೋರ್, 2003; ಲೆವಿ, ಟೇಲರ್, ಮತ್ತು ಜೆಲ್‌ಮ್ಯಾನ್, 1995).


## ಸಾಂಸ್ಕೃತಿಕ ಪ್ರಭಾವಗಳು

ಪಾಶ್ಚಾತ್ಯ ಸಮಾಜಗಳ ವ್ಯಕ್ತಿಕೇಂದ್ರಿತ ಪರಿಸರದಲ್ಲಿ ಹುಟ್ಟಿ ಬೆಳೆದ 8 ರಿಂದ 10 ವರ್ಷಗಳ ಒಳಗಿನ ಮಕ್ಕಳು ಲಿಂಗತ್ವ ರೂಢಮಾದರಿಗಳ ಉಲ್ಲಂಘನೆಯನ್ನು ಕುರಿತು ಹೆಚ್ಚು ಮುಕ್ತವಾಗಿ ಯೋಚಿಸತೊಡಗುತ್ತಾರೆ ಎಂಬುದು ನಿಜವಾದರೂ ಅದೇ ಮಾದರಿಯ ವರ್ತನೆಗಳು ಬೇರೆ ಕಡೆಗಳಲ್ಲಿಯೂ ಕಂಡುಬರುತ್ತವೆ ಎನ್ನಲಾಗುವುದಿಲ್ಲ. ಸಾಮಾಜಿಕ ಸಮರಸ ಮತ್ತು ಸಾಮಾಜಿಕ ನಿರೀಕ್ಷೆಗಳಿಗೆ ಹೊಂದಿಕೊಂಡು ಬದುಕುವುದರ ಮೇಲೆ ಒತ್ತು ಕೊಡುವ ಸಮುದಾಯ ಕೇಂದ್ರಿತ ಸಮಾಜವಾದ ತೈವಾನಿನಲ್ಲಿ ಮಕ್ಕಳಿಗೆ ಸಮರ್ಪಕ ಲಿಂಗತ್ವ-ಪಾತ್ರ ವಿಧಾಯಕಗಳನ್ನು ಒಪ್ಪಿಕೊಂಡು ಅನುಸರಿಸಲು ಬಲವಾಗಿ ಪ್ರೋತ್ಸಾಹಿಸಲಾಗುತ್ತದೆ. ಅದರ ಪರಿಣಾಮವಾಗಿ, ತೈವಾನಿನಲ್ಲಿ ಬೆಳೆದ 8-10 ವರ್ಷದ ಮಕ್ಕಳು (ಅದರಲ್ಲೂ ಗಂಡು ಮಕ್ಕಳು) ಅವರದೇ ವಯಸ್ಸಿನ ವ್ಯಕ್ತಿಕೇಂದ್ರಿತ ಪಾಶ್ಚಾತ್ಯ ಸಮಾಜದ ಮಕ್ಕಳಿಗೆ ಹೋಲಿಸಿದರೆ (ಇಸ್ರೇಲಿನ ನಗರ ಪ್ರದೇಶದ ಮಕ್ಕಳು) ಲಿಂಗತ್ವ-ಪಾತ್ರ ಉಲ್ಲಂಘನೆಯನ್ನು ಒಪ್ಪಿಕೊಳ್ಳುವುದು ಕಡಿಮೆ (ಲೊಬೆಲ್ ಮತ್ತಿತರರು., 2001).

## ಲಿಂಗತ್ವ ರೂಢಮಾದರಿಗಳ ಬಗೆಗೆ ಹದಿಹರೆಯದವರ ಆಲೋಚನೆಗಳು

ಮಕ್ಕಳು ಪ್ರಾಥಮಿಕ ಹಂತದ ಶಿಕ್ಷಣದಿಂದ ಮಾಧ್ಯಮಿಕ ಹಂತದ ಶಿಕ್ಷಣಕ್ಕೆ ಬರುತ್ತಿದ್ದಂತೆ, ಆರಂಭಿಕ ಹರೆಯದಲ್ಲಿ, ಸ್ತ್ರೀ ಮತ್ತು ಪುರುಷರು ಪ್ರಕಟಪಡಿಸಬಹುದಾದ ಗುಣವಿಶೇಷಗಳು ಹಾಗೂ ಹವ್ಯಾಸಗಳು ಮತ್ತು ವೃತ್ತಿಗಳ ಬಗ್ಗೆ ಮಕ್ಕಳ ಆಲೋಚನೆಯಲ್ಲಿ ಹೆಚ್ಚು ನಮ್ಯವಾಗುತ್ತಾ ಹೋಗುತ್ತದೆ. ಆದರೆ ಅದಾದ ನಂತರ ಲಿಂಗತ್ವ-ಪಾತ್ರ ವಿಧಾಯಕಗಳೂ ಮತ್ತೆ ಕಠಿಣವಾಗುತ್ತ ಹೋಗುತ್ತವೆ; ಗಂಡು ಮತ್ತು ಹೆಣ್ಣು ಮಕ್ಕಳಿಬ್ಬರೂ ಪುರುಷರಾಗಲಿ ಅಥವಾ ಸ್ತ್ರೀಯರಾಗಲಿ ಅನ್ಯ-ಲಿಂಗದವರಂತೆ ವೈಲಕ್ಷಣಗಳನ್ನು ಪ್ರದರ್ಶಿಸಿದರೆ ಅದರ ಬಗೆಗೆ ಬಲವಾದ ಅಸಹನೆಯನ್ನು ತೋರಿಸುತ್ತಾರೆ (ಆಲ್ಫಿಯರಿ, ರೂಬಲ್ ಮತ್ತು ಹಿಗ್ಗಿನ್ಸ್, 1996; ಸೀಗೆಲ್‌ಮ್ಯಾನ್, ಕಾರ್, ಮತ್ತು ಬೆಗ್ಲಿ, 1986; ಸಿಗ್ನೊರೆಲ್ಲಾ, ಬಿಗ್ಲರ್, ಮತ್ತು ಲಿಬೆನ್, 1993; ಮತ್ತು ಆಕೃತಿ 12.3, ರೇಖಾಚಿತ್ರದ ಮೂಲಕ ಲಿಂಗತ್ವ-ರೂಢ ಮಾದರಿ ವರ್ತನೆಯ ಬಗ್ಗೆ ಮಕ್ಕಳ ಭಾವನೆಗಳ ವಿಕಾಸಾತ್ಮಕ ಬದಲಾವಣೆಗಳನ್ನು

ಚಿತ್ರಿಸಿರುವುದನ್ನು ನೋಡಿರಿ). ಈ ಎರಡನೆಯ ಆವರ್ತದ ಲಿಂಗತ್ವ-ಶುವನಿಸಂನ್ನು ನಾವು ಹೇಗೆ ವಿವರಿಸಬಹುದು?




**ಆಕೃತಿ 12.3:**

------ನೈತಿಕ ಉಲ್ಲಂಘನೆಗಳು

------ಲಿಂಗ ಪಾತ್ರಗಳ ಉಲ್ಲಂಘನೆಗಳು

ತಪ್ಪು ಎನ್ನುವುದರ ಶ್ರೇಣಿಕ್ರಮ: ಅತಿ ಕಡಿಮೆ ತಪ್ಪು, ಅತೀ ದೊಡ್ಡ ತಪ್ಪು

ಶೈಕ್ಷಣಿಕ ಹಂತಗಳು: ಶಿಶುವಿಹಾರ - ಮೂರು – ಐದು - ಎಂಟು

**ವಿವರಣೆ:** ಲಿಂಗತ್ವ- ಪಾತ್ರ ಉಲ್ಲಂಘನೆ (ಹುಡುಗನೊಬ್ಬ ಉಗುರಿಗೆ ಬಣ್ಣ ಹಚ್ಚುವುದು) ಮತ್ತು ನೈತಿಕ ನಿಯಮಗಳ ಉಲ್ಲಂಘನೆಗಳು (ಉಯ್ಯಾಲೆಯಲ್ಲಿ ಕೂತ ಮತ್ತೊಬ್ಬ ಮಗುವನ್ನು ದೂಡುವುದು) ಎಷ್ಟು ದೊಡ್ಡ ಪ್ರಮಾಣದ ದೋಷಗಳು ಎಂಬುದರ ಬಗೆಗಿನ ಮಕ್ಕಳ ಶ್ರೇಣ್ಯಂಕಗಳು. ನೈತಿಕ ನಿಯಮಗಳ ಉಲ್ಲಂಘನೆಯನ್ನು ಎಲ್ಲ ವಯಸ್ಸಿನ ಮಕ್ಕಳೂ ಖಂಡಿಸುತ್ತವೆ, ಆದರೆ ಲಿಂಗತ್ವ-ಪಾತ್ರ ಉಲ್ಲಂಘನೆಯನ್ನು ಶಿಶುವಿಹಾರದಲ್ಲಿರುವ ಮಕ್ಕಳು ಮತ್ತು ಹರೆಯದವರು ಮಾತ್ರ ಖಂಡಿಸುತ್ತಾರೆ ಎನ್ನುವುದನ್ನು ಗಮನಿಸಿ. ಪ್ರಾಥಮಿಕ ಶಾಲಾ ಮಕ್ಕಳು ಲಿಂಗತ್ವ-ಪಾತ್ರ ಮಾನದಂಡಗಳ ಬಗೆಗೆ ತಾವು ಮೊದಲು ಇದ್ದ ರೀತಿಗಿಂತ ಹೆಚ್ಚು ಮುಕ್ತವಾಗಿ ಯೋಚಿಸುತ್ತಾರೆ, ಆದರೆ ಹರೆಯದವರು ಒಬ್ಬರ "ಸಮರ್ಪಕ" ಲಿಂಗತ್ವ ಅನನ್ಯತೆಯಿಂದ ವಿಪಥವಾಗುವುದರ ಮಾನಸಿಕ ಪರಿಣಾಮಗಳ ಬಗೆಗೆ ಚಿಂತಿಸತೊಡಗುತ್ತಾರೆ. [*"Children's Concepts of Cross- Gender Activities," by T. Stoddart & E. Turiel, 1985,* Child Development, *59, 793–814. Copyright © 1985 by the Society for Research in Child Development, Inc.* ಸಮ್ಮತಿಯೊಂದಿಗೆ ಸೇರಿಸಲಾಗಿದೆ.]

**[ಲಿಂಗತ್ವ ಉತ್ಕಟತೆ):** ಹರೆಯದ ಆರಂಭದಲ್ಲಿ ಲಿಂಗ ವ್ಯತ್ಯಾಸಗಳ ಉತ್ಪ್ರೇಕ್ಷೆ, ಅದಕ್ಕೆ ಸಂಬಂಧಿಸಿದ ಸಾಂಪ್ರದಾಯಿಕ ಲಿಂಗತ್ವ-ಪಾತ್ರಗಳ ಅನುಸರಣೆಗೆ ಹೆಚ್ಚುವ ಒತ್ತಡ)

ಅನ್ಯಲಿಂಗೀಯರ ವೈಲಕ್ಷಣ್ಯಗಳು ಮತ್ತು ವರ್ತನೆಗಳ ಬಗ್ಗೆ ಹದಿಹರೆಯದವರಲ್ಲಿ ಹೆಚ್ಚುತ್ತ ಹೋಗುವ ಅಸಹನೆಯು **ಲಿಂಗತ್ವ ಉತ್ಕಟತೆಯ** ಒಂದು ವಿಶಾಲ ವ್ಯಾಪ್ತಿಯ ಪ್ರಕ್ರಿಯೆಯೊಂದಿಗೆ ತಳಕು ಹಾಕಿಕೊಂಡಿರುತ್ತದೆ- ಪ್ರಾಯಕ್ಕೆ ಬಂದಾಗ,

ಲಿಂಗ ವ್ಯತ್ಯಾಸಗಳ ಉತ್ಪ್ರೇಕ್ಷೆಯಿಂದಾಗಿ ಲಿಂಗತ್ವ- ಪಾತ್ರಗಳ ಅನುಸರಣೆಗೆ ಹೆಚ್ಚುವ ಒತ್ತಡದಿಂದ (ಗಲಾಂಬೋಸ್, ಆಲ್ಮೆಡಾ, ಮತ್ತು ಪೀಟರ್ಸನ್, 1990; ಹಿಲ್ ಮತ್ತು ಲಿಂಚ್, 1983). ಹುಡುಗರು ತಮ್ಮನ್ನು ಪುರುಷರಂತೆ ಗುರುತಿಸಿಕೊಳ್ಳಲು ಆರಂಭಿಸುತ್ತಾರೆ ಮತ್ತು ಹುಡುಗಿಯರು ತಮ್ಮ ಸ್ತ್ರೀ ಗುಣಗಳಿಗೆ ಒತ್ತು ನೀಡತೊಡಗುತ್ತಾರೆ (ಮೆಕ್‌ಹೇಲ್ ಮತ್ತಿತರರು., 2001; ಮೆಕ್‌ಹೇಲ್, ಶಾನಹಾನ್ ಮತ್ತಿತರರು., 2004). **ಲಿಂಗತ್ವ ಉತ್ಕಟತೆ ಏಕಾಗುತ್ತೆ?** ಅದಕ್ಕೆ ಪಾಲಕರ ಪ್ರಭಾವ ಒಂದು ಕಾರಣ; ಮಕ್ಕಳು ಹರೆಯಕ್ಕೆ ಕಾಲಿಡುತ್ತಿದ್ದಂತೆ ತಾಯಂದಿರು ತಮ್ಮ ಹೆಣ್ಣುಮಕ್ಕಳ ಒಟ್ಟಿಗೆ ಮತ್ತು ತಂದೆಯಂದಿರು ತಮ್ಮ ಗಂಡುಮಕ್ಕಳ ಒಟ್ಟಿಗೆ ಕೆಲಸಕಾರ್ಯಗಳನ್ನು ಮಾಡತೊಡಗುತ್ತಾರೆ (ಕ್ರೌಟರ್, ಮ್ಯಾಂಕೆ, ಮತ್ತು ಮೆಕ್‌ಹೇಲ್, 1995). ಮುಖ್ಯವಾಗಿ ಮಗಳು ಮತ್ತು ಮಗ ಇಬ್ಬರೂ ಇರುವ ಕುಟುಂಬಗಳಲ್ಲಿ ಪ್ರತಿ ಪಾಲಕರೂ ತಮ್ಮ ಲಿಂಗಗಳಿಗೆ ಸೇರಿದ ಮಕ್ಕಳ ಸಾಮಾಜಿಕೀಕರಣದ ಪ್ರಾಥಮಿಕ ಹೊಣೆಯನ್ನು ಹೊತ್ತುಕೊಳ್ಳಬಹುದು (ಮೆಕ್‌ಹೇಲ್ ಮತ್ತು ಕ್ರೌಟರ್, 2003; ಶಾನಹಾನ್ ಮತ್ತಿತರರು., 2007). ಆದರೆ ಸಮವಯಸ್ಕರ ಪ್ರಭಾವಗಳು ಪಾಲಕರ ಪ್ರಭಾವಕ್ಕಿಂತ ಮುಖ್ಯವಾಗಬಹುದು. ಹರೆಯದವರು ಡೇಟಿಂಗಿನಲ್ಲಿ ಯಶಸ್ವಿಯಾಗಬೇಕೆಂದರೆ ತಾವು ಸಾಂಪ್ರದಾಯಿಕವಾದ ಲಿಂಗತ್ವ ನಿಯಮಗಳನ್ನು ಅನುಸರಿಸಲೇಬೇಕು ಎಂದು ಕಂಡುಕೊಳ್ಳುತ್ತಾರೆ. ಗಂಡುಬೀರಿಯಂತಿದ್ದು ಅದರ ಬಗ್ಗೆ ಹೆಚ್ಚು ಯೋಚಿಸದೇ ಇದ್ದ ಹುಡುಗಿಯೊಬ್ಬಳು ಹರೆಯಕ್ಕೆ ಬಂದಾಗ ತಾನು ಹುಡುಗರನ್ನು ಆಕರ್ಷಿಸಬೇಕೆಂದರೆ ಹೆಚ್ಚು “ಸ್ತ್ರೀ” ಸಹಜವಾಗಿ ಬಟ್ಟೆ ತೊಡಬೇಕು ಮತ್ತು ಸ್ತ್ರೀ ಸಹಜವಾಗಿ ವರ್ತಿಸಬೇಕು ಎಂದುಕೊಳ್ಳುತ್ತಾಳೆ, ಹಾಗೆಯೇ ಹುಡುನೊಬ್ಬನು ’ಪುರುಷತ್ವ’ದ ತೀವ್ರವಾದ ಪ್ರಕ್ಷೇಪಣದಿಂದ ತಾನು ಹೆಚ್ಚು ಜನಪ್ರಿಯನಾಗುತ್ತೇನೆ ಎಂದುಕೊಳ್ಳುತ್ತಾನೆ (ಬರ್ನ್, ಓ’ನೀಲ್, ಮತ್ತು ನೆದರೆಂಡ್, 1996; ಕಾಜ್, 1979). ಸಾಂಪ್ರದಾಯಿಕ ಲಿಂಗ ಪಾತ್ರಗಳಿಗೆ ಬದ್ಧರಾಗಬೇಕೆಂಬ ಹರೆಯದವರ ಮೇಲಿನ  ಸಾಮಾಜಿಕ ಪ್ರಭಾವಗಳೂ ಸಹ ಏಕೆ ಸಂಜ್ಞಾನಾತ್ಮಕ ಸಾಮರ್ಥ್ಯಗಳಲ್ಲಿನ ಲಿಂಗ ವ್ಯತ್ಯಾಸಗಳು ಹರೆಯದಲ್ಲಿ ಹೆಚ್ಚು ಕಾಣಿಸಿಕೊಳ್ಳುತ್ತವೆ ಎಂಬುದನ್ನು  ವಿವರಿಸಲು ಸಹಾಯವಾಗುತ್ತವೆ (ಹಿಲ್ ಮತ್ತು ಲಿಂಚ್, 1983; ರಾಬರ್ಟ್ಸ್ ಮತ್ತಿತರರು., 1990). ನಂತರ ಪ್ರೌಢಶಾಲೆಗಳಲ್ಲಿ ಹದಿಹರೆಯದವರು ಯುವಕ ಅಥವಾ ಯುವತಿಯೆಂದು ತಮ್ಮ ತಮ್ಮ ಅನನ್ಯತೆಗಳೊಂದಿಗೆ ಸಮಾಧಾನದಿಂದಿರುವಾಗ ಅವರ ಲಿಂಗತ್ವ ಆಲೋಚನೆಗಳು ಮರಳಿ ಮುಕ್ತವಾಗುತ್ತ ಬರುತ್ತದೆ (ಅರ್ಬರ್ಗ್, 1979). ಹಾಗಿದ್ದರೂ ಪ್ರೌಢರೂ ಕೂಡಾ ಲಿಂಗತ್ವ-ಪಾತ್ರ ವಿಧಾಯಕಗಳನ್ನು ನಿಸ್ಸಂಕೋಚದಿಂದ ಕಡೆಗಣಿಸುವ ಪುರುಷರ ಬಗೆಗೆ ತೀವ್ರ ಅಸಹಿಷ್ಣುಗಳಾಗಿರುತ್ತಾರೆ (ಲೆವಿ, ಟೇಲರ, ಮತ್ತು ಜೆಲ್ಮನ್, 1995).

## ಲಿಂಗತ್ವ- ಪ್ರರೂಪಿತ ವರ್ತನೆಗಳ ವಿಕಾಸ

ಮಕ್ಕಳ ವರ್ತನೆಯ  “ಲಿಂತ್ವ ಸಮರ್ಪಕತೆ” ಯನ್ನು ಅಳೆಯುವ ಒಂದು ಸಾಮಾನ್ಯ ವಿಧಾನವೆಂದರೆ ಅವರು ಯಾರೊಂದಿಗೆ ಮತ್ತು ಯಾವುದರೊಡನೆ ಆಡಲು ಬಯಸುತ್ತಾರೆ ಎಂಬುದನ್ನು ಅವಲೋಕಿಸುವುದು. ಮಗು ಒಂದು ಸ್ಪಷ್ಟ ಲಿಂಗತ್ವ ಅನನ್ಯತೆ ಸ್ಥಾಪಿಸಿಕೊಳ್ಳುವ ಬಹಳ ಮೊದಲೇ ಅಥವಾ ಆಟಿಕೆಗಳನ್ನು ಸರಿಯಾಗಿ

"ಹುಡುಗರ ವಸ್ತುಗಳೂ" ಅಥವಾ "ಹುಡುಗಿಯರ ವಸ್ತುಗಳು" ಎಂದು ಗುರುತಿಸುವ ಮೊದಲೇ ಆಟಿಕೆಗಳ ಆಯ್ಕೆಯಲ್ಲಿನ ಲಿಂಗ ವ್ಯತ್ಯಾಸಗಳು ಬೆಳೆದಿರುತ್ತವೆ (ಬ್ಲಾಕ್‌ಮೋರ್, ಲಾರೂಯಿ, ಮತ್ತು ಒಲೆಜ್ನಿಕ್, 1979; ಫ್ಯಾಗಟ್, ಲೇನ್‌ಬಾಕ್, ಮತ್ತು ಹೇಗನ್, 1986; ವೇನ್ರೌಬ್ ಮತ್ತಿತರರು., 1984). ಉದಾಹರಣೆಗೆ, ಲೇಘ್ ಸ್ಟೆನಿಸ್ ಮತ್ತು ಅವರ ಸಹೋದ್ಯೋಗಿಗಳ (2005) ಒಂದು ಅಧ್ಯಯನದಲ್ಲಿ 13ತಿಂಗಳ ಮಕ್ಕಳ ಕಾಲ್ಪನಿಕ ಆಟಗಳಲ್ಲಿ, ಹುಡುಗಿಯರು ಪಾಲಕರಂತೆ ವರ್ತಿಸುತ್ತಾ ಅವರನ್ನು ಅನುಕರಿಸುವ ಚಟುವಟಿಕೆಗಳು ಮತ್ತು ಸಂವಹನಾ ಸಂಜ್ಞೆಗಳನ್ನು ಹೊರಹಾಕಿದ್ದರು, ಹುಡುಗರ ಆಟದ ಚಟುವಟಿಕೆ ಮತ್ತು ಸನ್ನೆಗಳು ಸುತ್ತಿಗೆಯಿದ ಹೊಡೆಯುವ, ಗುದ್ದಲಿಯಿಂದ ಅಗೆಯುವ ಪುರುಷ ಚಟುವಟಿಕೆಗಳ ಅನುರಣೆಯಾಗಿತ್ತು. 14-ರಿಂದ 22 ತಿಂಗಳ ಗಂಡುಮಕ್ಕಳು ಸಾಮಾನ್ಯವಾಗಿ ಟ್ರಕ್ಕು-ಕಾರುಗಳನ್ನು ಇಷ್ಟಪಡುತ್ತಾರೆ, ಅದೇ ಹೆಣ್ಣುಮಕ್ಕಳಾದರೆ ಗೊಂಬೆಗಳು, ಮೆತ್ತನೆಯ ಆಟಿಕೆಗಳೊಂದಿಗೆ ಆಡಲು ಬಯಸುತ್ತಾರೆ (ಸ್ಮಿತ್ ಮತ್ತು ಡಗ್ಲಿಶ್, 1977). ವಾಸ್ತವದಲ್ಲಿ, 18-14 ತಿಂಗಳ ಬಾಲಕರು ಅವರ ಬಳಿ ಮತ್ಯಾವುದೇ ಆಟಿಕೆಗಳು ಲಭ್ಯವಿರದಿದ್ದರೂ ಅನ್ಯ-ಲಿಂಗದವರ ಆಟಿಕೆಗಳೊಂದಿಗೆ ಆಡಲು ಸಾಮಾನ್ಯವಾಗಿ ನಿರಾಕರಿಸುತ್ತಾರೆ, (ಕಾಲ್ಡರಾ, ಹೂಸ್ಟನ್, ಮತ್ತು ಓ'ಬ್ರಿಯಾನ್, 1989).

## ಲಿಂಗತ್ವ ಪ್ರತ್ಯೇಕತೆ

ಆಟಕ್ಕೆ ಸ್ವ-ಲಿಂಗೀಯ ಮಕ್ಕಳಿಗೆ ಆದ್ಯತೆ ನೀಡುವುದು ಸಹಾ ಬಹಳ ಮುಂಚೆಯೆ ಬೆಳೆದಿರುತ್ತದೆ. ನರ್ಸರಿ ಶಾಲೆಯಲ್ಲಿ 2 ವರ್ಷದ ಬಾಲಕಿಯರು ಬಾಲಕಿಯರೊಂದಿಗೇ ಆಡಲು ಬಯಸುತ್ತಾರೆ (ಲಾ ಫ್ರೆನಿಯೇರ್, ಸ್ಟ್ರೇಯರ್, ಮತ್ತು ಗೌಥಿಯರ್, 1984); 3 ವರ್ಷದ ಬಾಲಕರು ಬಾಲಕಿಯರಿಗಿಂತ ಹೆಚ್ಚಾಗಿ ಬಾಲಕರನ್ನೇ ಜೊತೆಗಾರರನ್ನಾಗಿ ಆಯ್ಕೆಮಾಡಿಕೊಳ್ಳುತ್ತಾರೆ.. ಅನೇಕ ಸಂಸ್ಕೃತಿಗಳಲ್ಲಿ ಕಂಡುಬರುವ ಈ ರೀತಿಯ **ಲಿಂಗತ್ವ-ಪ್ರತ್ಯೇಕಿಸುವಿಕೆ**ಯು (ಲೀಪರ್, 1994; ವೈಟಿಂಗ್ ಮತ್ತು ಎಡ್ವರ್ಡ್ಸ್, 1988) ವರ್ಷಗಳು ಕಳೆದಂತೆ ಗಟ್ಟಿಯಾಗುತ್ತ ಹೋಗುತ್ತದೆ. ನಾಲ್ಕು ಮತ್ತು ಐದು ವರ್ಷದ ಮಕ್ಕಳು ಆಟಕ್ಕೆ ಅನ್ಯಲಿಂಗದ ಜೊತೆಗಾರರನ್ನು ಸಕ್ರಿಯವಾಗಿಯೇ ತಿರಸ್ಕರಿಸಲು ಶುರು ಮಾಡುತ್ತಾರೆ (ರಾಮ್ಸೆ, 1995); ಮತ್ತು ಅವರಿಗೆ ಆರುವರೆ ವರ್ಷಗಳಾಗುವ ಹೊತ್ತಿಗೆ ಅನ್ಯಲಿಂಗದ ಜೊತೆಗಾರರೊಂದಿಗೆ ಕಳೆಯುವ ಸಮಯದ 10 ಪಟ್ಟು ಹೆಚ್ಚಿನ ಸಮಯವನ್ನು ತಮ್ಮದೇ ಲಿಂಗದ ಜೊತೆಗಾರರೊಂದಿಗೆ ಕಳೆಯುತ್ತಾರೆ (ಮ್ಯಾಕಬಿ, 1998). ಒಂದೊಮ್ಮೆ ಚಿಕ್ಕ ಮಗುವೊಂದು ಅನ್ಯ ಲಿಂಗೀಯ ಸಮವಯಸ್ಕರೊಡನೆ ಆಡಿದರೆ, ಅಲ್ಲಿ ಒಬ್ಬರಾದರೂ ಅದೇ ಲಿಂಗದ ಸಂಗಡಿಗರು ಇರುವುದನ್ನು ನೋಡಬಹುದು (ಫೇಬ್ಸ್, ಮಾರ್ಟಿನ್, ಹಾನಿಶ್, 2003). ತರಗತಿ-ಶಾಲೆಯ (grade-school) ಮತ್ತು ಹರೆಯಪೂರ್ವದ ಮಕ್ಕಳಿಗೆ ಸಾಮಾನ್ಯವಾಗಿ ಬೇರೆ ಲಿಂಗದ ಮಕ್ಕಳೊಂದಿಗೆ ಆಡುವುದು ಕಡಿಮೆ ಆಕರ್ಷಕವಾಗಿರುತ್ತದೆ ಮತ್ತು ವಿರುದ್ಧ ಲಿಂಗದ ಒಡನಾಡಿಗಳೊಂದಿಗೆ ಸ್ವ-ಲಿಂಗೀಯರಿಗಿಂತ ಹೆಚ್ಚು ನಕಾರಾತ್ಮಕ ವರ್ತನೆಗಳನ್ನು ತೋರಿಸುವ ಸಾಧ್ಯತೆ ಇರುತ್ತದೆ (ಅಂಡರ್‌ವುಡ್, ಶಾಕ್ನರ್, ಮತ್ತು ಹರ್ಲೀ, 2001). ಸ್ವಾರಸ್ಯದ ಸಂಗತಿಯೆಂದರೆ, ಚಿಕ್ಕ ಮಕ್ಕಳು ತಾವು ಗೊಂಬೆಗಳೊಂದಿಗೆ ಅಥವಾ ಟ್ರಕ್ಕುಗಳೊಂದಿಗೆ ಆಡುವ ಸಂದರ್ಭದಲ್ಲಿ ಲಿಂಗಾಧಾರಿತವಾಗಿ ಒಂದು ಮಗುವನ್ನು


ಹೊರಗಿಡುವುದು ತಪ್ಪು ಎಂಬುದು ಅವರಿಗೆ ಗೊತ್ತಿರುತ್ತದೆ (ಕಿಲೆನ್ ಮತ್ತಿತರರು., 2001), ಹಾಗಿದ್ದರೂ ಅವರು ಹಾಗೆ ಮಾಡುತ್ತಿರುತ್ತಾರೆ (ಬ್ರೌನ್ ಮತ್ತು ಬಿಗ್ಲರ್, 2004).

> [**ಲಿಂಗತ್ವ ಪ್ರತ್ಯೇಕತೆ**: ಸ್ವ-ಲಿಂಗೀಯ ಜೊತೆಗಾರರೊಂದಿಗೆ ಒಡನಾಡುವ ಮತ್ತು ಅನ್ಯ ಲಿಂಗೀಯರನ್ನು ಹೊರಗುಂಪಿನವರು ಎಂದು ಯೋಚಿಸುವ ಮಕ್ಕಳ ಪ್ರವೃತ್ತಿ.]

ಅಲಾನ್ ಸೌರ್ಫ್ ಮತ್ತು ಅವರ ಸಹೋದ್ಯೋಗಿಗಳು (1993) ಸ್ಪಷ್ಟ ಲಿಂಗತ್ವ ಎಲ್ಲೆಗಳನ್ನು ಉಳಿಸಿಕೊಳ್ಳಲು ಬಹಳ ದೃಢವಾಗಿ ಹಟಮಾಡುವ ಮತ್ತು 'ಶತ್ರು'ಗಳ ಜೊತೆ ಸಂಬಂಧ ತಪ್ಪಿಸಿಕೊಳ್ಳುತ್ತಾರೋ ಅಂತಹ 10 ರಿಂದ 11 ವರ್ಷದ ಮಕ್ಕಳು ಸಾಮಾಜಿಕವಾಗಿ ಸಮರ್ಥರು ಮತ್ತು ಜನಪ್ರಿಯರು ಎಂದೆಣಿಸಿಕೊಳ್ಳುವ ಮತ್ತು ಲಿಂಗತ್ವ ಪ್ರತ್ಯೇಕತೆಯ ನಿಯಮಗಳನ್ನು ಉಲ್ಲಂಘಿಸುವ ಮಕ್ಕಳು ಕಡಿಮೆ ಜನಪ್ರಿಯರು ಮತ್ತು ಸಮಾಯೋಜನೆ ಉಳ್ಳವರಾಗಿದ್ದರು ಎಂದು ಕಂಡುಕೊಂಡರು. ವಾಸ್ತವವಾಗಿ, ವಿರುದ್ಧ ಲಿಂಗದವರೊಡನೆ ಸ್ನೇಹಕ್ಕೆ ಒಲವು ತೋರುವ ಮಕ್ಕಳು ತಮ್ಮ ಸಮವಯಸ್ಕರಿಂದ ತಿರಸ್ಕರಿಸಲ್ಪಡುವ ಸಾಧ್ಯತೆಯೂ ಇದೆ (ಕೋವಾಕ್ಸ್, ಪಾರ್ಕರ್ ಮತ್ತು ಹಾಫ್‌ಮನ್, 1996). ಆದರೆ, ಹರೆಯದಲ್ಲಿ ಪ್ರಾಯದ ಸಾಮಾಜಿಕ ಮತ್ತು ಶಾರೀರಕ ಬದಲಾವಣೆಗಳು ವಿರುದ್ಧ ಲಿಂಗದ ಜೊತೆಗಾರರಲ್ಲಿ ಆಸಕ್ತಿಯನ್ನು ಹುಟ್ಟಿಸಲು ಕಾರಣವಾಗುವುದರಿಂದ ಅನ್ಯ ಲಿಂಗದ ಜೊತೆಗಾರರ ವಿರುದ್ಧದ ಲಿಂಗತ್ವ ಎಲ್ಲೆಗಳು ಮತ್ತು ಪಕ್ಷಪಾತಗಳು ಅವರಲ್ಲಿ ಕ್ರಮೇಣ ಇಳಿಮುಖವಾಗುತ್ತ ಬರುತ್ತವೆ (ಬುಕೊವಸ್ಕಿ, ಸಿಪ್ಪೋಲಾ, ಮತ್ತು ನ್ಯೂಕಾಂಬ್, 2000; ಸರ್ಬಿನ್, ಪೌಲಿಸ್ಟಾ, ಮತ್ತು ಗುಲ್ಕೊ, 1993).

ಲಿಂಗತ್ವ ಪ್ರತ್ಯೇಕತೆ ಏಕೆ ಸಂಭವಿಸುತ್ತದೆ? ಅದು ಹೆಚ್ಚಿನದಾಗಿ ಗಂಡುಮಕ್ಕಳು ಮತ್ತು ಹೆಣ್ಣುಮಕ್ಕಳ ಆಟದ ಶೈಲಿಯಲ್ಲಿ ಕಂಡುಬರುವ ವ್ಯತ್ಯಾಸಗಳನ್ನು ಪ್ರತಿಫಲಿಸುತ್ತದೆ, ಈ ಅನನುರೂಪತೆಯು ಹುಡುಗರಲ್ಲಿ ಕ್ರಿಯಾಸಕ್ತ, ಗದ್ದಲಮಯ ವರ್ತನೆಯನ್ನು ಪ್ರೋತ್ಸಾಹಿಸುವ ಹೆಚ್ಚು ಮಟ್ಟದ ಆಂಡ್ರೊಜಿನ್ ನಿಂದ ಉಂಟಾಗಬಹುದು ಎಂದು ಎಲಿಯನರ್ ಮ್ಯಾಕಬಿ (1998) ನಂಬುತ್ತಾರೆ. ಒಂದು ಅಧ್ಯಯನದಲ್ಲಿ (ಜಾಕ್ಲಿನ್ ಮತ್ತು ಮ್ಯಾಕಬಿ, 1978) ಮಕ್ಕಳನ್ನು ಅನೇಕ ಆಸಕ್ತಿದಾಯಕ ಆಟಿಕೆಗಳಿರುವ ಆಟದಕೋಣೆಯಲ್ಲಿ ಬಿಟ್ಟಾಗ ಎಷ್ಟುಬಾರಿ ಪುಟಾಣಿಗಳು ಸ್ವ-ಲಿಂಗೀಯ ಮತ್ತು ಮಿಶ್ರ-ಲಿಂಗೀಯ ಜೋಡಿಗಳಲ್ಲಿ ಅಥವಾ ಒಬ್ಬರೇ ಆಡಿದರು ಎಂದು ವಯಸ್ಕ ವೀಕ್ಷಕರು ದಾಖಲಿಸಿದರು. ಆಕೃತಿ 12.4ರಲ್ಲಿ ನೋಡುವ ಹಾಗೆ, ಹುಡುಗರು ಹುಡುಗಿಯರಿಗಿಂತ ಹುಡುಗರೊಂದಿಗೇ ಹೆಚ್ಚು ಸಾಮಾಜಿಕ ಸ್ಪಂದನೆಗಳನ್ನು ನೀಡಿದ್ದಾರೆ, ಅಂತೆಯೇ ಹುಡುಗಿಯರು ಹುಡುಗರಿಗಿಂತ ಹುಡುಗಿಯರೊಂದಿಗೇ ಹೆಚ್ಚು ಸಾಮಾಜಿಕವಾಗಿ ಸ್ಪಂದಿಸಿದ್ದಾರೆ. ಸ್ವ-ಲಿಂಗ ಜೋಡಿಗಳಲ್ಲಿ ಆಟದ ಜೊತೆಗಾರರ ನಡುವೆ ಇದ್ದ ಸಂವಹನಗಳು ಚೇತೋಹಾರಿಯಾಗಿದ್ದವು, ಸಕಾರಾತ್ಮಕವಾಗಿದ್ದವು. ವ್ಯತಿರಿಕ್ತವಾಗಿ, ಮಿಶ್ರ ಲಿಂಗದ ಜೋಡಿಗಳಲ್ಲಿ ಹುಡುಗಿಯರು ಹುಡುಗರೊಂದಿಗಿನ ಆಟವನ್ನು ಅರ್ಧಕ್ಕೆ ನಿಲ್ಲಿಸಿದ್ದು ಕಂಡುಬಂತು. ಬಾಲಕರ ಅತಿಯಾದ ಆರ್ಭಟ, ಉದ್ದಟತನಗಳು ಕಡಿಮೆ ಒರಟುತನವನ್ನು ಬಯಸುವ, ಆಗ್ರಹಗಳು ಮತ್ತು ಬಲಪ್ರಯೋಗ ಮಾಡದೆ ಸೌಜನ್ಯಪೂರ್ವಕವಾಗಿ ತಮ್ಮ ಕಿತ್ತಾಟಗಳಿಗೆ ಸಂಧಿಮಾಡಿಕೊಳ್ಳಲು ಬಯಸುವ ಹುಡುಗಿಯರ ಅಭಿರುಚಿಗೆ ಹೊಂದುತ್ತಿರಲಿಲ್ಲ (ಮಾರ್ಟಿನ್ ಮತ್ತು ಫೇಬ್ಸ್, 2001;

ಮೊಲೇರ್ ಮತ್ತು ಸರ್ಬಿನ್, 1996). ಬಾಲ್ಯದುದ್ದಕ್ಕೂ ಗಂಡುಮಕ್ಕಳು ಸ್ವ-ಲಿಂಗೀಯ ***ಗುಂಪಿ***ನಲ್ಲಿ ಆಡಲು ಅಥವಾ ಕೆಲಸ ಮಾಡಲು ಬಯಸುತ್ತಾರೆ, ಆದರೆ ಹುಡುಗಿಯರು ಗುಂಪಿನ ಸನ್ನಿವೇಶದಿಂದ ಹಿಂದೆ ಸರಿದು ವ್ಯಕ್ತಿಗಳ ಮೇಲೆ ಗಮನ ಕೊಡುತ್ತಾರೆ ಮತ್ತು ಸ್ವ-ಲಿಂಗೀಯ ಜೋಡಿಗಳಲ್ಲಿ ಅವರ ಕಾರ್ಯ ಅತ್ಯುತ್ತಮವಾಗಿರುತ್ತದೆ. (ಬೆನೆನ್‌ಸನ್ ಮತ್ತು ಹೀತ್, 2006). ಅದರ ಜೊತೆಗೆ, ಹೆಣ್ಣುಮಕ್ಕಳು ಗದ್ದಲ ಮಾಡದೆ, ಸೌಮ್ಯ ರೀತಿಯಲ್ಲಿ ಆಡಬೇಕೆಂದು ನಿರೀಕ್ಷಿಸಲಾಗುತ್ತದೆ, ಹಾಗೂ ಅವರು ದೊಡ್ಡದಾಗಿ ಗಲಾಟೆ ಮಾಡಿದರೆ, ಗಂಡುಮಕ್ಕಳ ಹಾಗೆ ಒರಟಾಗಿ ನಡೆದುಕೊಂಡರೆ ಟೀಕೆಗೆ (ಹುಡುಗರು ಮತ್ತು ಹುಡುಗಿಯರು ಇಬ್ಬರಿಂದಲೂ) ಗುರಿಯಾಗುತ್ತಾರೆ (ಬ್ಲಾಕ್‌ಮೋರ್, 2003).




**ಆಕೃತಿ 12.4:**

ಆಟದ ಜೊತೆಗಾರರ ಲಿಂಗ: ಗಂಡು–ಹೆಣ್ಣು

ಆಟವಾಡುವವರ ಲಿಂಗ: ಗಂಡು-ಹೆಣ್ಣು

ಜೊತೆಗಾರರೆಡೆಗೆ ತೋರಿದ ಸಾಮಾಜಿಕ ವರ್ತನೆಗಳು

ಕೆಳಗಿನಿಂದ ಮೇಲೆ: 16, 18, 20, 22, 24, 26, 28, 30, 32

**ವಿವರಣೆ:** ಎರಡರಿಂದ ಮೂರು ವರ್ಷದ ಪುಟಾಣಿಗಳು ತಮ್ಮದೇ ಲಿಂಗಕ್ಕೆ ಸೇರಿದ ಜೊತೆಗಾರರೊಂದಿಗೆ ಆಡಲು ಬಯಸುತ್ತಾರೆ. ಹುಡುಗರು ಹುಡುಗಿಯರಿಗಿಂತ ಹುಡುಗರೊಂದಿಗೇ ಸಾಮಾಜಿಕವಾಗಿ ಹೆಚ್ಚು ಬೆರೆಯುತ್ತಾರೆ, ಅದೇ ಹುಡುಗಿಯರು ಹುಡುಗರಿಗಿಂತ ಹೆಚ್ಚು ಹುಡುಗಿಯರೊಂದಿಗೇ ಹೆಚ್ಚು ಬೆರೆಯುತ್ತಾರೆ.

[ಆಕರ: *"Social Behavior at 33 Months in Same-Sex and Mixed-Sex Dyads," by C. N. Jacklin & E. E. Maccoby, 1978,* Child Development, *49, 557–569. Copyright © 1978 by the Society for Research in Child Development, Inc.* ಅಳವಡಿಸಿಕೊಳ್ಳಲು ಅನುಮತಿ ಸಿಕ್ಕಿದೆ.]

ಸಂಜ್ಞಾನಾತ್ಮಕ ಮತ್ತು ಸಾಮಾಜಿಕ-ಸಂಜ್ಞಾನಾತ್ಮಕ ಬೆಳವಣಿಗೆಗಳೂ ಮಕ್ಕಳು ಪ್ರದರ್ಶಿಸುವ ಲಿಂಗತ್ವ ಪ್ರತ್ಯೇಕತೆಗೆ ಕಾರಣವಾಗುತ್ತವೆ. ಶಾಲಾಪೂರ್ವ ಹಂತದ ಮಕ್ಕಳು ಒಮ್ಮೆ ತಮ್ಮನ್ನು ತಾವು ಹುಡುಗರು ಅಥವಾ ಹುಡುಗಿಯರು ಎಂದು ಗುರುತಿಸಿಕೊಳ್ಳಲು ಆರಂಭಿಸಿ ಲಿಂಗತ್ವ ರೂಢಮಾದರಿಗಳನ್ನು ದಕ್ಕಿಸಿಕೊಳ್ಳಲು ಆರಂಭಿಸಿದ ನಂತರ, ತಾವು ಯಾವ ಲಿಂಗಕ್ಕೆ ಸೇರಿದ್ದೇವೆಯೋ ಆ ಲಿಂಗದ ಗುಂಪಿನ ಪರವಾಗಿ ನಿಲ್ಲುತ್ತಾರೆ ಮತ್ತು ಕ್ರಮೇಣ ಅನ್ಯ ಲಿಂಗದವರನ್ನು ಹಲವು ನಕಾರಾತ್ಮಕ ಲಕ್ಷಣಗಳನ್ನು ಹೊಂದಿದ ಒಂದು ಏಕರೂಪದ ಬಾಹ್ಯ-ಗುಂಪು ಎಂಬಂತೆ ನೋಡಲು

ಆರಂಭಿಸುತ್ತಾರೆ (ಮಾರ್ಟಿನ್, 1994; ಪೌಲಿಸ್ಟಾ, 1995). ವಾಸ್ತವದಲ್ಲಿ ಯಾವ ಮಕ್ಕಳು ಲಿಂಗಗಳ ಬಗೆಗೆ ರೂಢಮಾದರಿಗಳನ್ನು ಆಧರಿಸಿದ ದೃಷ್ಟಿಕೋನಗಳನ್ನು ಹೆಚ್ಚು ಹೊಂದಿರುತ್ತಾರೋ ಅವರೇ ಹೆಚ್ಚಿನದಾಗಿ ತಮ್ಮ ಆಟದ ಚಟುವಟಿಕೆಗಳಲ್ಲಿ ಲಿಂಗತ್ವ ಪ್ರತ್ಯೇಕಿಸುವಿಕೆಯನ್ನು ಮಾಡುತ್ತಿರುತ್ತಾರೆ ಮತ್ತು ಅವರಿಗೆ ವಿರುದ್ಧ ಲಿಂಗದ ಸ್ನೇಹಿತರು ಬಹಳ ಕಡಿಮೆ ಇರುತ್ತಾರೆ (ಕೋವ್ಯಾಕ್ಸ್, ಪಾರ್ಕರ್ ಮತ್ತು ಹಾಫ್‌ಮನ್, 1996; ಮಾರ್ಟಿನ್, 1994).

## ಲಿಂಗತ್ವ ಪ್ರರೂಪಿತ ವರ್ತನೆಗಳಲ್ಲಿನ ಲಿಂಗ ವ್ಯತ್ಯಾಸಗಳು

ನಮ್ಮ ಸಂಸ್ಕೃತಿಯನ್ನೂ ಒಳಗೊಂಡಂತೆ ಹಲವು ಸಂಸ್ಕೃತಿಗಳು ಪುರುಷ ಲಿಂಗತ್ವ-ಪಾತ್ರಗಳಿಗೆ ಹೆಚ್ಚಿನ ಸ್ಥಾನವನ್ನು ನೀಡುತ್ತವೆ (ಬ್ಲಾಕ್‌ಮೋರ್, ಬೆರೆನ್‌ಬಾಮ್, ಮತ್ತು ಲಿಬೆನ್, 2009; ಟರ್ನರ್ ಮತ್ತು ಜುವೇ, 1995), ಮತ್ತು ಲಿಂಗತ್ವ ಸೂಕ್ತ ನಡವಳಿಕೆಯ ಕಟ್ಟಳೆಗಳನ್ನು ಪಾಲಿಸಲು ಗಂಡುಮಕ್ಕಳು ಹೆಣ್ಣುಮಕ್ಕಳಿಗಿಂತ ಹೆಚ್ಚು ಒತ್ತಡವನ್ನು ಅನುಭವಿಸುತ್ತಾರೆ (ಬಸ್ಸೀ ಮತ್ತು ಬ್ಯಾಂಡುರಾ, 1992; ಲೊಬೆಲ್ ಮತ್ತು ಮೆನಾಶ್ರೀ, 1993). ಸಾಮಾನ್ಯವಾಗಿ ಹೆಣ್ಣು ಶಿಶುಗಳ ತಂದೆಯಂದಿರು ತಮ್ಮ 12 ತಿಂಗಳ ಹೆಣ್ಣುಮಕ್ಕಳಿಗೆ ಆಡಲು ಟ್ರಕ್ಕುಗಳನ್ನು ಕೊಡಲು ತಯಾರಿರುತ್ತಾರೆ, ಆದರೆ ಗಂಡು ಶಿಶುಗಳ ತಂದೆಯಂದಿರು ತಮ್ಮ ಗಂಡುಮಕ್ಕಳು ಗೊಂಬೆಗಳನ್ನು ಆಡದಂತೆ ತಡೆಯುತ್ತಾರೆ ಎಂಬುದನ್ನು ಗಮನಿಸಿ (ಸ್ನೋ, ಜಾಕ್ಲಿನ್, ಮತ್ತು ಮ್ಯಾಕಬಿ, 1983). ಲಿಂಗ-ಪ್ರರೂಪಿತ ಆಟಿಕೆಗಳ ಆಯ್ಕೆಗಳನ್ನು ಗಂಡುಮಕ್ಕಳು ಹೆಣ್ಣುಮಕ್ಕಳಿಗಿಂತ ಬೇಗನೇ ಕಲಿತುಕೊಳ್ಳುತ್ತಾರೆ. ಉದಾಹರಣೆಗೆ, ಜ್ಯುಡಿತ್ ಬ್ಲಾಕ್‌ಮೋರ್ ಮತ್ತು ಅವರ ಸಹೋದ್ಯೋಗಿಗಳು (1979) ಕಂಡುಕೊಂಡಂತೆ 2 ವರ್ಷದ ಬಾಲಕರು ಸ್ಪಷ್ಟವಾಗಿಯೇ ಲಿಂಗತ್ವ-ಸೂಕ್ತ ಆಟಿಕೆಗಳಿಗೆ ಆದ್ಯತೆ ನೀಡುತ್ತಾರೆ, ಅದೇ ವಯಸ್ಸಿನ ಕೆಲವು ಬಾಲಕಿಯರು ಹಾಗೆ ಮಾಡದಿರಬಹುದು. 18 ತಿಂಗಳುಗಳಿಂದ 2 ವರ್ಷಗಳಾಗುವ ಹೊತ್ತಿಗೆ ಬಹಳ ಮಕ್ಕಳು (ಬಾಲಕಿಯರಿಗಿಂತ ಬಾಲಕರೇ ಹೆಚ್ಚು) ಹುಡುಗರಿಗೆ ವಾಹನಗಳು ಮತ್ತು ಹುಡುಗಿಯರಿಗೆ ಗೊಂಬೆಗಳು ಅಥವಾ ಅಲಂಕರಿಸಿಕೊಳ್ಳುವುದರಂತಹ ಲಿಂಗತ್ವ-ಪ್ರರೂಪಿತ ವಸ್ತುಗಳು ಮತ್ತು ಚಟುವಟಿಕೆಗಳಲ್ಲಿ *ತೀವ್ರವಾದ* ಆಸಕ್ತಿಗಳನ್ನು ಬೆಳೆಸಿಕೊಳ್ಳುತ್ತಾರೆ (ಡಿಲೋಶ್, ಸಿಮ್‌ಕಾಕ್, ಮಕಾರಿ, 2007). ಮತ್ತು ಅವರಿಗೆ 3 ರಿಂದ 5 ವರ್ಷಗಳಾಗುವ ಹೊತ್ತಿಗೆ ಹುಡುಗರು 1) ವಿರುದ್ಧ ಲಿಂಗದವರಿಗೆ ಸೇರಿದ ಆಟಿಕೆಗಳನ್ನು ತಾವು ಇಷ್ಟಪಡುವುದಿಲ್ಲ ಎಂದು ಹೇಳುವ ಸಾಧ್ಯತೆ ಹುಡುಗಿಯರಿಗಿಂತ ಹೆಚ್ಚು (ಬಸ್ಸೀ ಮತ್ತು ಬ್ಯಾಡುರಾ, 1992; ಐಸೆನ್‌ಬರ್ಗ್, ಮರ್ರೇ, ಮತ್ತು ಹೈಟ್, 1982) ಮತ್ತು 2) ಹುಡುಗಿಯರ ಚಟುವಟಿಕೆಗಳನ್ನು ಇಷ್ಟಪಡುವ ಒಬ್ಬ ಹುಡುಗನಿಗಿಂತ, "ಹುಡುಗರ" ಆಟಿಕೆಗಳನ್ನು ಇಷ್ಟಪಡುವ ಹುಡುಗಿಯರನ್ನು ಆಟಕ್ಕೆ ಕರೆದುಕೊಳ್ಳುವ ಸಾಧ್ಯತೆ ಇದೆ (ಅಲೆಕ್ಸಾಂಡರ್ ಮತ್ತು ಹೈನ್ಸ್, 1994).

4 ರಿಂದ 10 ವರ್ಷಗಳ ನಡುವೆ ಹುಡುಗ ಹುಡುಗಿಯರಿಬ್ಬರಿಗೂ ತಮ್ಮಿಂದ ಏನು ನಿರೀಕ್ಷಿಸಲಾಗುತ್ತದೆ ಎನ್ನುವುದರ ಬಗೆಗೆ ಹೆಚಿನ ಅರಿವು ಮೂಡಿ ಈ ಸಾಂಸ್ಕೃತಿಕ ವಿಧಾಯಕಗಳನ್ನು ಪಾಲಿಸುತ್ತಾರೆ(ಹೂಸ್ಟನ್, 1983). ಆದರೂ ಬೇರೆ ಲಿಂಗದವರಿಗೆ ಸಂಬಂಧಿಸಿದ ಆಟಿಕೆಗಳು, ಆಟಗಳು ಮತ್ತು ಚಟುವಟಿಕೆಗಳಲ್ಲಿ ಹುಡುಗರಿಗಿಂತ

ಹುಡುಗಿಯರಯ ಹೆಚ್ಚು ಆಸಕ್ತಿಯನ್ನು ಹೊಂದಿರುತ್ತಾರೆ. 5 ರಿಂದ 9 ವರ್ಷದ ಒಳಗಿನ 750 ಮಕ್ಕಳು ಸಾಂತಾ ಕ್ಲಾಸನಿಗೆ ತಾವು ಯಾವ ಆಟಿಕೆಗಳನ್ನು ಇಷ್ಟಪಡುತ್ತೇವೆ ಎಂದು ಬರೆದ ಪತ್ರಗಳಲ್ಲಿ ಅವರ ಆಟಿಕೆಗಳ ಆಯ್ಕೆ ಯಾವುದಿತ್ತು ಎಂಬುದನ್ನು ಜಾನ್ ರಿಚರ್ಡ್ಸನ್ ಮತ್ತು ಕಾರ್ಲ್ ಸಿಂಪ್ಸನ್ (1982) ದಾಖಲಿಸುತ್ತಾರೆ. ಹೆಚ್ಚಿನವರು ಲಿಂಗತ್ವ ಪ್ರರೂಪಿತ ಆಟಿಕೆಗಳನ್ನೇ ಬಯಸಿದ್ದರೂ ಸಹಾ, 12.2 ನೇ ಕೋಷ್ಟಕದಲ್ಲಿ ಇರುವ ಹಾಗೆ "ವಿರುದ್ಧ ಲಿಂಗದವರ" ವಸ್ತುಗಳನ್ನು ಗಂಡುಮಕ್ಕಳಿಗಿಂತ ಹೆಣ್ಣುಮಕ್ಕಳೇ ಹೆಚ್ಚು ಕೇಳಿದ್ದರು. ತಮ್ಮ ನಿಜವಾದ ಲಿಂಗ ಪಾತ್ರಗಳ ಆಯ್ಕೆಗಳಿಗೆ ಸಂಬಂಧಿಸಿದಂತೆ ಚಿಕ್ಕ ಹುಡುಗಿಯರು ಹೆಚ್ಚಿನ ಸಲ ತಾವು ಹುಡುಗರಾಗಿರಬೇಕಿತ್ತು ಎಂದು ಅಂದುಕೊಳ್ಳುತ್ತಾರೆ, ಮತ್ತು ಇವತ್ತಿನ ಕಾಲೇಜು ಮಹಿಳೆಯರಲ್ಲಿ ಅರ್ಧದಷ್ಟು ಮಹಿಳೆಯರು ತಾವು ಚಿಕ್ಕವರಿದ್ದಾಗ ಟಾಮ್‌ಬಾಯ್‌ಗಳಾಗಿದ್ದೆವು ಎಂದು ಹೇಳಿಕೊಳ್ಳುತ್ತಾರೆ (ಬರ್ನ್ ಓ' ನೀಲ್ ಮತ್ತು ನೆಡರ್‌ಎಂಡ್, 1996). ಆದರೂ ಒಬ್ಬ ಹುಡುಗ ತಾನು ಹುಡುಗಿಯಾಗಿರಬೇಕಿತ್ತು ಎಂದು ಅಂದುಕೊಳ್ಳುವುದು ಸಾಮಾನ್ಯವಾಗಿ ಕಂಡುಬರುವುದಿಲ್ಲ (ಮಾರ್ಟಿನ್, 1990).

**ಕೋಷ್ಟಕ 12.2**

**"ಪುರುಷತನ" ಮತ್ತು "ಸ್ತ್ರೀತನ"ಕ್ಕೆ ಸಂಬಂಧಿಸಿದ ವಸ್ತುಗಳು ಬೇಕು ಎಂದು ಸಾಂತಾಕ್ಲಾಸನನ್ನು ವಿನಂತಿಸಿಕೊಂಡ ಬಾಲಕರು ಮತ್ತು ಬಾಲಕಿಯರ ಶೇಕಡಾವಾರು ಪ್ರಮಾಣ**

| | **ಹುಡುಗರ ಪ್ರಮಾಣ** | **ಹುಡುಗಿಯರ ಪ್ರಮಾಣ** |
|---|---|---|
| **ಪುರುಷತನದ ವಸ್ತುಗಳು:** | | |
| ವಾಹನಗಳು | 43.5 | 8.2 |
| ಕ್ರೀಡಾ ಸಾಧನಗಳು | 25.1 | 15.1 |
| ಸ್ಥಳ ಮತ್ತು ಸಮಯಕ್ಕೆ ಸಂಬಂಧಿಸಿದ ಆಟಿಕೆಗಳು (ಕಟ್ಟಡ ರಚನೆಯ ಸೆಟ್ಟುಗಳು, ಗಡಿಯಾರಗಳು ಇತ್ಯಾದಿ) | 24.5 | 15.6 |
| **ಸ್ತ್ರೀತನದ ವಸ್ತುಗಳು** | | |
| ಗೊಂಬೆಗಳು (ವಯಸ್ಕ ಸ್ತ್ರೀ) | .6 | 27.4 |
| ಗೊಂಬೆಗಳು (ಪುಟ್ಟ ಮಕ್ಕಳು) | .6 | 23.4 |
| ಮನೆಗೆಲಸದ ಸಾಧನಗಳು (ಅಡುಗೆ ಸೆಟ್ಟು) | 1.7 | 21.7 |

Adapted from "Children, Gender and Social Structure: An Analysis of the Contents of Letters to Santa Claus," by J. G. Richardson & C. H. Simpson, 1982, *Child Development, 53,* 429–436. Copyright © 1982 by The Society for Research in Child Development, Inc. ಅನುಮತಿಯೊಂದಿಗೆ ಲಗತ್ತಿಸಲಾಗಿದೆ.

ಹುಡುಗಿಯರು ತಮ್ಮ ಬಾಲ್ಯದ ಮಧ್ಯ ಹಂತದಲ್ಲಿ ಪುರುಷರ ಚಟುವಟಿಕೆಗಳತ್ತ ಮತ್ತು ಪುರುಷ-ಪಾತ್ರಗಳತ್ತ ಆಕರ್ಷಿತರಾಗುವುದಕ್ಕೆ ಹಲವು ಕಾರಣಗಳಿವೆ. ಒಂದಂತೂ ನಿಜ, ಪುರುಷತನದ ವರ್ತನೆಗಳಿಗೆ ಸಮಾಜದಲ್ಲಿ ಹೆಚ್ಚಿನ ಮೌಲ್ಯವಿದೆ ಎಂಬುದನ್ನಂತೂ ಅವರು ಅರಿಯತೊಡಗುತ್ತಾರೆ, ಮತ್ತು ಹಾಗಾಗಿ ಬಹುಶಃ ಯಾವುದು "ಅತ್ಯುತ್ತಮ"ವೋ ಅದು ತಾವಾಗಬೇಕೆಂದು ಹೆಣ್ಣುಮಕ್ಕಳು ಬಯಸುವುದು ಸಹಜವೇ ಆಗಿದೆ (ಅಥವಾ ಎರಡನೆ ದರ್ಜೆಯ ನಾಗರಿಕರಾಗುವುದಕ್ಕಿಂತ ಮತ್ತೇನೋ ಆಗುವುದು) (ಫ್ರೆ ಮತ್ತು ರೂಬಲ್, 1992). ಅಲ್ಲದೆ, ಅನ್ಯ ಲಿಂಗೀಯ ಚಟುವಟಿಕೆಗಳಲ್ಲಿ ಹೆಣ್ಣುಮಕ್ಕಳಿಗೆ ಗಂಡು ಮಕ್ಕಳಿಗಿಂತ ಹೆಚ್ಚಿನ ಸ್ವಾತಂತ್ರ್ಯ ಸಿಗುತ್ತದೆ; ಗಂಡುಬೀರಿ ("ಟಾಮ್‌ಬಾಯ್) ಆಗುವುದು ಸಮಸ್ಯೆಯಾಗುವುದಿಲ್ಲ, ಆದರೆ ಹುಡುಗನೊಬ್ಬನಿಗೆ 'ಹೆಣ್ಣಿಗ ("ಸಿಸ್ಸೀ) ಎಂಬ ಬಿರುದು ಬಂದರೆ ಅದು  ಅಪಹಾಸ್ಯದ ಮತ್ತು ತಿರಸ್ಕಾರದ ಸಂಕೇತ (ಮಾರ್ಟಿನ್, 1990). ಅದಲ್ಲದೇ ಶೀಘ್ರಗತಿಯ ಪುರುಷರ ಆಟಗಳು ಮತ್ತು "ಚಲನಾತ್ಮಕ' (action) ಆಟಿಕೆಗಳು, ಹೆಣ್ಣುಮಕ್ಕಳಲ್ಲಿ ಪಾಲನೆ-ಪೋಷಣೆಯ ಮತ್ತು ಅಭಿವ್ಯಕ್ತಿಯ ದೃಷ್ಟಿಕೋನವನ್ನು ಬೆಳೆಸಲೆಂದು ನೀಡುವ ಮನೆಬಳಕೆಯ ಆಟಿಕೆಗಳು ಮತ್ತು ಕಾಲಕಳೆಯುವ ವಸ್ತುಗಳಿಗಿಂತ (ಗೊಂಬೆಗಳು, ಗೊಂಬೆ ಮನೆ, ಪಾತ್ರದ ಸೆಟ್ಟುಗಳು, ಸ್ವಚ್ಛ ಮಾಡಲು ಮತ್ತು ಇನ್ನೊಬ್ಬರ ಕಾಳಜಿ ವಹಿಸಲು ಬಳಸುವ ವಸ್ತುಗಳು)  ಹೆಚ್ಚು ಸ್ವಾರಸ್ಯಕರವಾಗಿರುತ್ತವೆ ಎಂಬ ಕಾರಣವೂ ಇರಬಹುದು.

ಪುರುಷತ್ವ ಚಟುವಟಿಕೆಯಲ್ಲಿದ್ದ ಆರಂಭಿಕ ಆಸಕ್ತಿಯ ಹೊರತಾಗಿಯೂ ಅನೇಕ ಹುಡುಗಿಯರು ಆರಂಭಿಕ ಹರೆಯದ ಹೊತ್ತಿಗೆ ಸ್ತ್ರೀತ್ವ ಪಾತ್ರದ ವಿಧಾಯಕಗಳಿಗೆ ಆದ್ಯತೆ ತೋರಲು ಪ್ರಾರಂಭಿಸುತ್ತಾರೆ.  (ಮೆಕ್‌ಹೇಲ್, ಶಾನಹನ್ ಮತ್ತಿತರರು., 2004). ಏಕೆ? ಪ್ರಾಯಶ: ಜೈವಿಕ, ಸಂಜ್ಞಾನಾತ್ಮಕ ಮತ್ತು ಸಾಮಾಜಿಕ ಕಾರಣಗಳಿರಬಹುದು. ಅವರು ಪ್ರಾಯಕ್ಕೆ ಬಂದಾಗ ಅವರ ದೇಹಗಳು ಹೆಚ್ಚು  ಹೆಣ್ಣಿನ ರೂಪವನ್ನು ತಾಳುತ್ತವೆ (ಜೈವಿಕ ಬೆಳವಣಿಗೆ), ಹುಡುಗಿಯರಿಗೆ ತಾವು  ವಿರುದ್ಧ ಲಿಂಗದವರನ್ನು ಆಕರ್ಷಿಸಬೇಕೆಂದರೆ ತಾವು  "ಸ್ತ್ರೀ" ಯರಂತೆ ಆಗುವ ಅಗತ್ಯವು  ಕಂಡುಬರುತ್ತದೆ (ಬರ್ನ್ ಓ'ನೀಲ್, ಮತ್ತು ನೆದರೆಂಡ್, 1996; ಕಾಟ್ಸ್, 1979). ಅಲ್ಲದೇ, ಈ ಹದಿಹರೆಯದವರು ಔಪಚಾರಿಕ ಕಾರ್ಯಾಚರಣೆ ಮತ್ತು ಮುಂದುವರಿದ ಪಾತ್ರ ನಿರ್ವಹಣೆಯ ಕೌಶಲ್ಯಗಳನ್ನು (ಸಂಜ್ಞಾನಾತ್ಮಕ ಬೆಳವಣಿಗೆ),ಪಡೆಯತೊಡಗಿದ್ದು ಇದು ಅವರೇಕೆ  1) ಬದಲಾಗುತ್ತಿರುವ ತಮ್ಮ ದೇಹದ ಬಗ್ಗೆ ಸ್ವ-ಪ್ರಜ್ಞೆ (ಸಂಕೋಚ) ಹೊಂದುತ್ತಾರೆ? (ಜೋನ್ಸ್, 1965; ಮೆಕ್ ಕೇಬ್ ಮತ್ತು ರಿಕಿಯಾರ್ಡೆಲಿ, 2005); 2) ಇತರರು ಅವರ ಬಗ್ಗೆ ಮಾಡುವ ಮೌಲ್ಯಮಾಪನದ ಏಕೆ ಅಷ್ಟು ಕಾಳಜಿ? (ಎಲ್‌ಕಿಂಡ್, 1981; *ಕಲ್ಪಿತ ಪ್ರೇಕ್ಷಕ*ನ ವಿದ್ಯಮಾನವನ್ನು ನೆನಪುಮಾಡಿಕೊಳ್ಳಿ); 3) ಲಿಂಗತ್ವ ಉತ್ಕಟತೆಯ  ಒತ್ತಡಗಳಿಗೆ ಸುಲಭವಾಗಿ ತುತ್ತಾಗುತ್ತಾರೆ, ಮತ್ತು ಅದರಿಂದ ಸ್ತ್ರೀ ಪಾತ್ರಗಳ *ಸಾಮಾಜಿಕ* ವಿಧಾಯಕಗಳ ಪಾಲನೆಯ ಕಡೆ ವಾಲುತ್ತಾರೆ, ಎನ್ನುವುದನ್ನು ವಿವರಿಸಲು ಸಹಾಯ ಮಾಡಬಹುದು.

## ಲಿಂಗತ್ವ ಪ್ರರೂಪಣೆಯಲ್ಲಿ ಉಪಸಾಂಸ್ಕೃತಿಕ ವ್ಯತ್ಯಾಸಗಳು

ಅಷ್ಟು ವ್ಯಾಪಕವಲ್ಲದಿದ್ದರೂ ಲಿಂಗತ್ವ ಪ್ರರೂಪಣೆಯಲ್ಲಿನ ಸಾಮಾಜಿಕ ವರ್ಗ ಮತ್ತು ಜನಾಂಗೀಯ ಭಿನ್ನತೆಗಳ ಮೇಲೆ ನಡೆದಿರುವ ಅಧ್ಯಯನಗಳು 1) ಮಧ್ಯಮವರ್ಗಕ್ಕೆ ಸೇರಿದ ಹದಿಹರೆಯದವರು (ಮಕ್ಕಳಲ್ಲ) ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗಕ್ಕೆ ಸೇರಿದ ತಮ್ಮ ಸಮವಯಸ್ಕರಿಗಿಂತ ಹೆಚ್ಚು ಮುಕ್ತವಾದ ಲಿಂಗತ್ವ- ಪಾತ್ರ ಅಭಿವೃತ್ತಿಗಳನ್ನು ಹೊಂದಿರುತ್ತಾರೆ (ಬಾಡ್ರ್ವೆಲ್, ಕೋಕ್ರನ್, ಮತ್ತು ವಾಕರ್, 1986; ಕ್ಯಾಂಟರ್ ಮತ್ತು ಆಜಿಟನ್, 1984) ಮತ್ತು 2) ಯುರೋಪಿಯನ್ ಮೂಲದ ಅಮೇರಿಕನ್ ಮಕ್ಕಳಿಗಿಂತ ಆಫ್ರಿಕಾ ಮೂಲದ ಅಮೇರಿಕನ್ ಮಕ್ಕಳು, ಮಹಿಳೆಯರ ಬಗ್ಗೆ ಕಡಿಮೆ ರೂಢಮಾದರಿಗಳನ್ನು ಹೊಂದಿರುತ್ತಾರೆ ಎಂದು ತೋರಿಸಿವೆ (ಬಾಡ್ರ್ವೆಲ್, ಕೋಕ್ರನ್, ಮತ್ತು ವಾಕರ್, 1986; ಮತ್ತು ಲೀಪರ್, ಟೆನೆನ್‌ಬಾಮ್ ಮತ್ತು ಶಾಫರ್, 1999 ).

ಲಿಂಗತ್ವ ಪ್ರರೂಪಣೆಯ ಸಾಮಾಜಿಕ ವರ್ಗ ಮತ್ತು ಜನಾಂಗೀಯ ವ್ಯತ್ಯಾಸಗಳಿಗೆ ಅವರ ಶಿಕ್ಷಣ ಮತ್ತು ಕೌಟುಂಬಿಕ ಬದುಕುಗಳಲ್ಲಿನ ವ್ಯತ್ಯಾಸಗಳು ಕಾರಣ ಎಂದು ಸಂಶೋಧಕರು ಅಭಿಪ್ರಾಯ ಪಡುತ್ತಾರೆ. ಉದಾಹರಣೆಗೆ, ಮಧ್ಯಮವರ್ಗದ ಹಿನ್ನೆಲೆಯ ಜನರಿಗೆ ಸಾಮಾನ್ಯವಾಗಿ ವಿಸ್ತೃತ ಹರಹಿನ ಶೈಕ್ಷಣಿಕ ಮತ್ತು ವೃತ್ತಿ ಬದುಕಿನ ಆಯ್ಕೆಗಳಿರುತ್ತವೆ, ಬಹುಶಃ ಇದು ಅವರೇಕೆ ಮುಂದೆ ಪುರುಷರು ಮತ್ತು ಮಹಿಳೆಯರು ನಿರ್ವಹಿಸಬೇಕಾದ ಪಾತ್ರಗಳ ಬಗೆಗೆ ಹೆಚ್ಚು ನಮ್ಯ ಅಭಿವೃತ್ತಿಗಳನ್ನು ಸ್ವೀಕರಿಸುತ್ತಾರೆ ಎನ್ನುವುದನ್ನು ವಿವರಿಸುತ್ತದೆ.

ಇನ್ನು ಆಫ್ರಿಕಾ ಮೂಲದ ಅಮೇರಿಕನ್ ಮಕ್ಕಳಲ್ಲಿ ಕಡಿಮೆ ಲಿಂಗ ರೂಢಮಾದರಿಗಳು ಏಕಿರಬಹುದು?. ಒಂದು ಕಾರಣವೆಂದರೆ, ಚಾರಿತ್ರಿಕವಾಗಿ ಆಫ್ರಿಕನ್ ಅಮೇರಿಕನ್ ಸಮುದಾಯವು ಕುಟುಂಬದ ಜವಾಬ್ದಾರಿಗಳನ್ನು ಹೊರುವುದಕ್ಕೆ ಸಂಬಂಧಿಸಿದಂತೆ ಮೊದಲಿನಿಂದಲೂ ಲಿಂಗ ಸಮತೆಯ ಧೋರಣೆಯನ್ನು ತೋರಿಸುತ್ತ ಬಂದಿದೆ (ಕಿಂಗ್, ಹ್ಯಾರಿಸ್, ಮತ್ತು ಹರ್ಡ್, 2004), ಆದ್ದರಿಂದ ಆಫ್ರಿಕನ್ ಅಮೇರಿಕನ್ ಸಮುದಾಯಗಳಲ್ಲಿ ಮಕ್ಕಳೆಡೆಗಿನ ತಂದೆ-ತಾಯಿಯರ ವರ್ತನೆಗಳಲ್ಲಿ ಇತರ ಜನಾಂಗೀಯ ಸಮುದಾಯಗಳಲ್ಲಿ ಕಂಡು ಬರುವಷ್ಟು ವ್ಯತ್ಯಾಸಗಳಿರುವುದಿಲ್ಲ. ಜೈಪಾಲ್ ರೂಪನರೈನ್ ಮತ್ತು ಅವರ ಸಹೋದ್ಯೋಗಿಗಳು (2005) ನಡೆಸಿದ ಒಂದು ಅಧ್ಯಯನದಲ್ಲಿ ಕಂಡುಬಂದಂತೆ,'ತಾಯಿ-ಪೋಷಣೆ/ತಂದೆ-ಆಟದ ಜೊತೆಗಾರ' ಎಂದು ಯುರೋಪಿಯನ್ ಮೂಲದ ಅಮೇರಿಕನ್ ಕುಟುಂಬಗಳ ಪಾಲಕರಂತೆ ಅಲ್ಲದೆ, ಆಫ್ರಿಕಾ ಮೂಲದ ಅಮೇರಿಕನ್ ಕುಟುಂಬಗಳಲ್ಲಿ ತಂದೆಯರು ನಿಯಮಗಳಿಗೆ ಕಟ್ಟುಬೀಳದೆ, ತಮ್ಮ ಶಿಶುಗಳಿಗೆ ತಾಯಿಯರಿಗಿಂತಾ ಹೆಚ್ಚು ಸಾಂತ್ವನ ನೀಡುವ ಪೋಷಣೆ, ಭಾಷಾ ಪ್ರಚೋದನೆ, ಮತ್ತು ಅಪಾರ ವಾತ್ಸಲ್ಯ ನೀಡುತ್ತಾರೆ. ಪಾಲನೆ-ಪೋಷಣೆಗೆ ಸಂಬಂಧಿಸಿದಂತೆ ತಂದೆಯರ ವರ್ತನೆಗಳು ತಾಯಂದಿರ ವರ್ತನೆಗಳನ್ನು ಬಹಳಷ್ಟು ಹೋಲುತ್ತವೆ. ಅದಲ್ಲದೆ, ಯುರೋಪ್ ಮೂಲದ ಅಮೇರಿಕನ್ ಮಕ್ಕಳಿಗೆ ಹೋಲಿಸಿದರೆ ಆಫ್ರಿಕಾ ಮೂಲದ ಅಮೇರಿಕನ್ ಮಕ್ಕಳು ಹೆಚ್ಚಿನ ಪ್ರಮಾಣದಲ್ಲಿ ಒಬ್ಬರೇ ಪಾಲಕರು ಇರುವ ಮನೆಗಳಲ್ಲಿ ವಾಸಿಸುತ್ತಿದ್ದಾರೆ, ಮತ್ತು/ಅಥವಾ ಮನೆಯಿಂದ ಹೊರಗೆ ದುಡಿಯುವ ತಾಯಂದಿರನ್ನು ಹೊಂದಿರುತ್ತಾರೆ (ಯು. ಎಸ್. ಬ್ಯೂರೋ ಆಫ್ ಸೆನ್ಸಸ್, 2001). ಆದ್ದರಿಂದ ಆಫ್ರಿಕನ್

ಅಮೇರಿಕನ್ ಯುವಕರಲ್ಲಿ ಮಹಿಳೆಯರ ಚಿತ್ರಣಗಳಲ್ಲಿ ಲಿಂಗತ್ವ ರೂಢಮಾದರಿಗಳು ಕಡಿಮೆ ಕಂಡುಬರುತ್ತವೆ ಎನ್ನುವ ಸಂಗತಿಯು ಅವರ ತಾಯಂದಿರು ಒಬ್ಬ ಪಾಲಕರಾಗಿ ಬಹುಶಃ ಯುರೋಪಿಯನ್ ಅಮೇರಿಕನ್ ತಾಯಂದಿರಿಗಿಂತ ಹೆಚ್ಚು ಕಾರಣಭೂತ (ಪುರುಷ) (instrumental) ಮತ್ತು ಅಭಿವ್ಯಂಜಕ (ಸ್ತ್ರೀ) (expressive)– ಎರಡೂ ಕಾರ್ಯಗಳನ್ನು ವಹಿಸಿಕೊಳ್ಳುತ್ತಾರೆ ಎಂಬುದನ್ನು ಬಿಂಬಿಸುತ್ತದೆ (ಲೀಪರ್, ಟೆನೆನ್‌ಬಾಮ್, ಮತ್ತು ಶಾಫರ್, 1999).

ಕೊನೆಯದಾಗಿ, ಸಮಾನ ಲಿಂಗ-ಪಾತ್ರ ಅಭಿವೃತ್ತಿಗಳನ್ನು ಪೋಷಿಸಲು ಪ್ರಯತ್ನಿಸುವ ಪಾಲಕರಿರುವ ಮನೆಗಳಲ್ಲಿ ಬೆಳೆಯುವ ಮಕ್ಕಳು, ಚಟುವಟಿಕೆಗಳು ಮತ್ತು ವೃತ್ತಿಗಳು ಸ್ತ್ರೀ ಮತ್ತು ಪುರುಷರಿಗೆ ತಕ್ಕುದ್ದಾಗಿರಬೇಕು ಎಂದು *ನಂಬುವ* ಸಂಪ್ರದಾಯಸ್ಥ ಕುಟುಂಬಗಳಿಂದ ಬಂದ ಮಕ್ಕಳಿಗಿಂತ ಕಡಿಮೆ ಲಿಂಗತ್ವ ಪ್ರರೂಪಿತರಾಗಿರುತ್ತಾರೆ. (ವೇಯ್ಸ್ನರ್ ಮತ್ತು ವಿಲ್ಸನ್ –ಮಿಚೆಲ್, 1990). ಹಾಗಿದ್ದರೂ, ಈ ಮಕ್ಕಳು ಸಾಂಪ್ರದಾಯಿಕ ಲಿಂಗತ್ವ ರೂಢಮಾದರಿಗಳನ್ನು ತಿಳಿದಿರುತ್ತಾರೆ ಮತ್ತು ಆಟಿಕೆಗಳು ಹಾಗೂ ಚಟುವಟಿಕೆಗಳ ಆಯ್ಕೆಯಲ್ಲಿ ಸಂಪ್ರದಾಯಸ್ಥ ಕುಟುಂಬಗಳಿಂದ ಬಂದ ಮಕ್ಕಳಷ್ಟೇ “ಲಿಂಗತ್ವ ಪ್ರರೂಪಿತ’ ರಾಗಿರುತ್ತಾರೆ.

ಒಟ್ಟಿನಲ್ಲಿ, ಲಿಂಗತ್ವ-ಪಾತ್ರ ವಿಕಾಸ ಗಮನಾರ್ಹ ಗತಿಯಲ್ಲಿ ಮುಂದುವರೆಯುತ್ತದೆ (ರೂಬಲ್, ಮಾರ್ಟಿನ್, ಬೆರೆನ್‌ಬಾಮ್, 1006; ಮತ್ತು ಪರಿಶೀಲನೆಗಾಗಿ 12.3 ನೇ ಕೋಷ್ಟಕವನ್ನು ನೋಡಿ). ಶಾಲೆಯನ್ನು ಪ್ರವೇಶಿಸುವ ಹೊತ್ತಿಗಾಗಲೇ ಮಕ್ಕಳಿಗೆ ತಮ್ಮ ಮೂಲಭೂತ ಲಿಂಗತ್ವ ಅನನ್ಯತೆಗಳ ಅರಿವು ಮೂಡಿದ್ದು ಲಿಂಗಗಳು ಹೇಗೆ ಭಿನ್ನ ಎನ್ನುವುದರ ಬಗ್ಗೆ ಅನೇಕಾನೇಕ ರೂಢಮಾದರಿಗಳನ್ನು ದಕ್ಕಿಸಿಕೊಂಡಿದ್ದು ಲಿಂಗತ್ವ-ಸಮರ್ಪಕ ಚಟುವಟಿಕೆಗಳು ಮತ್ತು ಸ್ವ-ಲಿಂಗದ ಜೊತೆಗಾರರಿಗೆ ಆದ್ಯತೆ ನೀಡುತ್ತಾರೆ. ಮಧ್ಯ ಬಾಲ್ಯದಲ್ಲಿ ಲಿಂಗತ್ವ ಮಾನಸಿಕ ಗುಣವಿಶೇಷಗಳ ರೂಢಮಾದರಿಗಳ ಬಗ್ಗೆ ಕಲಿಯುತ್ತಾ ಅವರ ಜ್ಞಾನವು ವಿಸ್ತಾರವಾದಂತೆ ಲಿಂಗತ್ವ- ಪಾತ್ರಗಳ ಬಗೆಗಿನ ಅವರ ಆಲೋಚನೆಗಳು ಹೆಚ್ಚು ನಮ್ಯವಾಗುತ್ತವೆ. ಆದರೂ ಅವರ *ವರ್ತನೆಗಳು*, ಅದರಲ್ಲೂ ಅವರು ಹುಡುಗರಾಗಿದ್ದರೆ, ಅವರ ವರ್ತನೆಗಳು ಮೊದಲಿಗಿಂತ ಹೆಚ್ಚು ಲಿಂಗತ್ವ ಪ್ರರೂಪಿತವಾಗುತ್ತವೆ ಮತ್ತು ವಿರುದ್ಧ ಲಿಂಗದವರಿಂದ ತಮ್ಮನ್ನು ತಾವು ಮೊದಲಿಗಿಂತ ಹೆಚ್ಚು ಪ್ರತ್ಯೇಕಿಸಿಕೊಳ್ಳುತ್ತಾರೆ. ಈಗ ಒಂದು ಕುತೂಹಲಕಾರಿ ಪ್ರಶ್ನೆ ಏಳುತ್ತದೆ: ಇವೆಲ್ಲ ಅಷ್ಟು ತ್ವರಿತವಾಗಿ ಹೇಗೆ ಆಗುತ್ತವೆ?

**ಕೋಷ್ಟಕ 12.3**
**ಲಿಂಗತ್ವ ಪ್ರರೂಪಣೆಯ ಒಂದು ಸ್ಥೂಲನೋಟ**
**0-2 ವರ್ಷಗಳು**
**ಲಿಂಗತ್ವ ಅನನ್ಯತೆ**

- ಪುರುಷರಿಂದ ಸ್ತ್ರೀಯರು ಭಿನ್ನ ಎಂಬ ಗ್ರಹಿಕೆಯ ಸಾಮರ್ಥ್ಯ ಮೂಡುತ್ತದೆ ಮತ್ತು ಸುಧಾರಿಸುತ್ತದೆ
- ಮಗುವು ತಾನು ಒಬ್ಬ ಹುಡುಗ ಅಥವಾ ಹುಡುಗಿ ಎಂದು ನಿರ್ದಿಷ್ಟವಾಗಿ ಗುರುತಿಸುತ್ತದೆ.

**ಲಿಂಗತ್ವ ರೂಢಮಾದರಿ**

- ಕೆಲವು ಲಿಂಗತ್ವ ರೂಢಮಾದರಿಗಳು ಮೂಡುತ್ತವೆ

**ಲಿಂಗತ್ವ-ಪ್ರರೂಪಿತ ವರ್ತನೆ**

- ಲಿಂಗತ್ವ-ಪ್ರರೂಪಿತ ಆಟಿಕೆಗಳ/ಚಟುವಟಿಕೆಗಳ ಆಯ್ಕೆ ಹುಟ್ಟಿಕೊಳ್ಳುತ್ತದೆ.

- ಆಟಕ್ಕೆ ಸ್ವ-ಲಿಂಗ ಜೊತೆಗಾರರನ್ನು ಆಯ್ದುಕೊಳ್ಳುವ ಪ್ರವೃತ್ತಿ ಕಾಣಿಸಿಕೊಳ್ಳುತ್ತದೆ (ಲಿಂಗತ್ವ ಪ್ರತ್ಯೇಕಿಸುವಿಕೆ)

**3-6 ವರ್ಷಗಳು**

### ಲಿಂಗತ್ವಅನನ್ಯತೆ

- ಲಿಂಗತ್ವದ ಸಂರಕ್ಷಣೆ ಉದಯಿಸುತ್ತದೆ (ಒಬ್ಬರ ಲಿಂಗವು ಶಾಶ್ವತ ಎಂಬ ಅರಿವು)

### ಲಿಂಗತ್ವರೂಢಮಾದರಿ

- ಆಸಕ್ತಿಗಳ, ಚಟುವಟಿಕೆಗಳ ಮತ್ತು ವೃತ್ತಿಗಳ ಲಿಂಗಸಂಬಂಧಿತ ರೂಢಮಾದರಿಯ ಪ್ರಕ್ರಿಯೆ ಆರಂಭವಾಗುತ್ತದೆ ಮತ್ತು ಅದು ಕ್ರಮೇಣ ಗಟ್ಟಿಯಾಗುತ್ತದೆ.

### ಲಿಂಗತ್ವ-ಪ್ರರೂಪಿತ ವರ್ತನೆ

- ಲಿಂಗತ್ವ-ಪ್ರರೂಪಿತ ಆಟಿಕೆಗಳನ್ನು/ಚಟುವಟಿಕೆಗಳನ್ನು ಕುರಿತ ಒಲವು ಬಲಗೊಳ್ಳುತ್ತದೆ, ಮುಖ್ಯವಾಗಿ ಹುಡುಗರಲ್ಲಿ.
- ಲಿಂಗತ್ವ ಪ್ರತ್ಯೇಕತೆಯ ಉತ್ಕಟತೆ.

**7-11 ವರ್ಷಗಳು**

### ಲಿಂಗತ್ವ ಅನನ್ಯತೆ

- ಲಿಂಗತ್ವ ವೈಶಿಷ್ಟ್ಯತೆಯ (gender typicality) ಬಗೆಗಿನ ಮತ್ತು ಲಿಂಗತ್ವ ಸಂತುಷ್ಟತೆಯ (gender contentedness) ಬಗೆಗಿನ ಗ್ರಹಿಕೆಗಳನ್ನು ಒಳಗೊಳ್ಳಲು ಲಿಂಗತ್ವ ಅನನ್ಯತೆಯು ಹಿಗ್ಗುತ್ತದೆ.

### ಲಿಂಗತ್ವ ರೂಢಮಾದರಿ

- ವ್ಯಕ್ತಿತ್ವದ ಲಕ್ಷಣಗಳು ಮತ್ತು ಸಾಧನೆಯ ಕ್ಷೇತ್ರಗಳನ್ನು ಕುರಿತ ಲಿಂಗತ್ವ ರೂಢಮಾದರಿಯ ಪ್ರಕ್ರಿಯೆ ಆರಂಭವಾಗುತ್ತದೆ.
- ಲಿಂಗತ್ವ ರೂಢಮಾದರಿಯು ಕಡಿಮೆ ಬಿಗುವಾಗುತ್ತದೆ.

### ಲಿಂಗತ್ವ-ಪ್ರರೂಪಿತ ವರ್ತನೆ

- ಲಿಂಗತ್ವ ಪ್ರತ್ಯೇಕಿಸುವಿಕೆಯು ಬಲಗೊಳ್ಳುತ್ತ ಹೋಗುತ್ತದೆ.
- ಲಿಂಗತ್ವ-ಪ್ರರೂಪಿತ ಆಟಿಕೆಗಳನ್ನು/ಚಟುವಟಿಕೆಗಳನ್ನು ಕುರಿತ ಒಲವು (ಮುಖ್ಯವಾಗಿ ಹುಡುಗರಲ್ಲಿ) ಬಲಗೊಳ್ಳುವುದು ಮುಂದುವರೆಯುತ್ತದೆ; ಹುಡುಗಿಯರು ಕೆಲವು ಪುರುಷತನದ ಚಟುವಟಿಕೆಗಳಲ್ಲಿ ಆಸಕ್ತಿಯನ್ನು ಬೆಳೆಸಿಕೊಳ್ಳುತ್ತಾರೆ (ಅಥವಾ ಉಳಿಸಿಕೊಳ್ಳುತ್ತಾರೆ).

**12 ಮತ್ತು ಅದರ ನಂತರದ ವರ್ಷಗಳು**

### ಲಿಂಗತ್ವ ಅನನ್ಯತೆ

- ಲಿಂಗತ್ವ ಅನನ್ಯತೆಯು ಲಿಂಗತ್ವ ಉತ್ಕಟತೆಯ ಒತ್ತಡಗಳನ್ನು ಪ್ರತಿಬಿಂಬಿಸುತ್ತ ಇನ್ನೂ ಮಹತ್ವದ ಸ್ಥಾನವನ್ನು ಪಡೆಯುತ್ತದೆ.

### ಲಿಂಗತ್ವ ರೂಢಮಾದರಿ

- ಹರೆಯದಲ್ಲಿ ಬೇರೆ ಲಿಂಗದವರ ವೈಲಕ್ಷಣಗಳ ಮೇಲಿನ ಅಸಹನೆಯು ಹೆಚ್ಚುತ್ತದೆ.
- ಹರೆಯದಲ್ಲಿ ನಂತರ ಲಿಂಗತ್ವ ರೂಢಮಾದರಿಗಳ ಪ್ರಕ್ರಿಯೆಯು ಹೆಚ್ಚು ಸಡಿಲವಾಗುತ್ತದೆ.

### ಲಿಂಗತ್ವ-ಪ್ರರೂಪಿತ ವರ್ತನೆ

- ಹರೆಯದ ಆರಂಭದ ಅವಧಿಯಲ್ಲಿ ಲಿಂಗತ್ವ ಉತ್ಕಟತೆಯನ್ನು ಪ್ರತಿಬಿಂಬಿಸುತ್ತ ಲಿಂಗತ್ವ ಪ್ರರೂಪಿತ ವರ್ತನೆಗಳ ಅನುಸರಣೆ ಹೆಚ್ಚಾಗುತ್ತ ಹೋಗುತ್ತದೆ.
- ಲಿಂಗತ್ವ ಪ್ರತ್ಯೇಕಿಸುವಿಕೆಯು ಎದ್ದುಕಾಣುವುದಿಲ್ಲ.

## ಸಂಕಲ್ಪನೆಯ ಪರೀಕ್ಷೆ: 12.1ಲಿಂಗ ವ್ಯತ್ಯಾಸಗಳು ಮತ್ತು ಲಿಂಗತ್ವ-ಪಾತ್ರ ವಿಕಾಸವನ್ನು ಅರ್ಥಮಾಡಿಕೊಳ್ಳುವುದು

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸುವ ಮೂಲಕ ಲಿಂಗ ವ್ಯತ್ಯಾಸಗಳು ಮತ್ತು **ಲಿಂಗತ್ವ-ಪಾತ್ರ ವಿಕಾಸದ** ಮುಖ್ಯ ಪ್ರಕ್ರಿಯೆಗಳು ನಿಮಗೆಷ್ಟು ಅರ್ಥವಾಗಿವೆ ಎಂದು ಪರೀಕ್ಷಿಸಿ. ಉತ್ತರಗಳನ್ನು ಅನುಬಂಧದಲ್ಲಿ ಕೊಡಲಾಗಿದೆ.

**ಸರಿ ಅಥವಾ ತಪ್ಪು**: ಈ ಕೆಳಗಿನ ವಾಕ್ಯಗಳು ಸರಿ ಇವೆಯೆ ಅಥವಾ ತಪ್ಪಿವೆಯೆ ಎಂದು ಗುರುತಿಸಿ.

1. ಒದಿನ ಗೃಹಣದಲ್ಲಿ ಬಾಲಕರಿಗೆ ಹೋಲಿಸಿದರೆ ಬಾಲಕಿಯರು ಸಣ್ಣ, ಆದರೆ ಸ್ಥಿರವಾದ (ಸತತ ಒಂದೇ ರೀತಿಯ) ಅನುಕೂಲತೆಯನ್ನು ಹೊಂದಿದ್ದಾರೆ. ಸರಿ/ತಪ್ಪು
2. ದೃಶ್ಯ/ದೇಶೀಯ ಸಾಮರ್ಥ್ಯದಲ್ಲಿ ಬಾಲಕರು ಬಾಲಕಿಯರಿಗೆ ಹೋಲಿಸಿದರೆ ಸಣ್ಣ ಆದರೆ ಸುಸಂಗತವಾದ ಆದರೆ) ಅನುಕೂಲತೆಯನ್ನು ಹೊಂದಿದ್ದಾರೆ. ಸರಿ/ತಪ್ಪು.
3. ಸಾಧನೆಯ ಅಭಿಪ್ರೇರಣೆಯಲ್ಲಿ ಬಾಲಕಿಯರು ಬಾಲಕರಿಗಿಂತ ಸಣ್ಣ ಆದರೆ ಸುಸಂಗತವಾದ ಅನುಕೂಲತೆಯನ್ನು ಹೊಂದಿದ್ದಾರೆ. ಸರಿ/ತಪ್ಪು

**ಬಿಟ್ಟ ಸ್ಥಳ ತುಂಬಿರಿ**: ಈ ಕೆಳಗಿನ ವಾಕ್ಯಗಳನ್ನು ಸರಿಯಾದ ಪದಗಳಿಂದ ಪೂರ್ಣಗೊಳಿಸಿ.

1. ಅನ್ಯಲಿಂಗೀಯರ ವೈಲಕ್ಷಣಕ್ಕೆ ಹದಿಹರೆಯದವರಲ್ಲಿ ಮರುಕಳಿಸುವ ಅಸಹನೆಗೆ ಕಾರಣವಾಗುವ ಪ್ರಕ್ರಿಯೆಯನ್ನು __________ ಎಂದು ಕರೆಯುತ್ತಾರೆ.
2. ನಮ್ಮ _________ ನಾವು ಅವಲೋಕಿಸುವ ಲಿಂಗತ್ವ ಅಸಮರ್ಪಕ ವರ್ತನೆಗಳನ್ನು ವಿರೂಪಗೊಳಿಸುವಂತೆ ಅಥವಾ ತಪ್ಪಾಗಿ ಗ್ರಹಿಸುವಂತೆ ಮಾಡುತ್ತದೆ.

**ಹೊಂದಿಸಿ ಬರೆಯಿರಿ**: ಕೆಳಗೆ ಕೊಟ್ಟಿರುವ ಸಂಕಲ್ಪನೆಗಳನ್ನು ಅವುಗಳಿಗೆ ಸರಿಯಾಗಿ ಹೊಂದುವ ವ್ಯಾಖ್ಯಾನಗಳೊಂದಿಗೆ ಹೊಂದಿಸಿ:

ಅ. ಲಿಂಗತ್ವ- ಪಾತ್ರ ಮಾನಕ .

ಬ. ಲಿಂಗತ್ವ ಪ್ರತ್ಯೇಕತೆ

ಕ. ಆಟದ ಶೈಲಿಗಳಲ್ಲಿನ ವ್ಯತ್ಯಾಸ

1. ಒಂದು ಲಿಂಗದ ಸದಸ್ಯರಿಗೆ ಮಾತ್ರ ಸೂಕ್ತ, ಮತ್ತೊಂದು ಲಿಂಗದವರಿಗೆ ಅಲ್ಲ ಎಂದು ಪರಿಗಣಿಸಲ್ಪಡುವ ಒಂದು ಮೌಲ್ಯ, ಒಂದು ಅಭಿಪ್ರೇರಣೆ, ಅಥವಾ ಒಂದು ವರ್ತನೆ,.

2. ಲಿಂಗತ್ವ ಪ್ರತ್ಯೇಕತೆಗೆ ಎಂದು ಸಂಶೋಧಕರು ನಂಬುವ ಒಂದು ಲಕ್ಷಣ.

3. ಬಾಲ್ಯದುದ್ದಕ್ಕೂ ವಯಸ್ಸಿನೊಂದಿಗೆ ದೃಢವಾಗುತ್ತಾ ಒಂದು ಸ್ವೀಕಾರಾತ್ಮಕ ಆಯ್ಕೆ.

**ಬಹು ಆಯ್ಕೆ**: ಕೆಳಗೆ ಕೊಟ್ಟಿರುವ ಪ್ರತಿ ಪ್ರಶ್ನೆಗೂ ಸರಿಯಾದ ಒಂದು ಉತ್ತರವನ್ನು ಆರಿಸಿ.

1. ಹ್ಯಾನಿತಾಳಿಗೆ ತಾನೊಬ್ಬ ಹುಡುಗಿ ಎಂಬ ಬಲವಾದ ಪ್ರಜ್ಞೆ ಇದೆ,. ತಾನು ಯಾವರೀತಿಯ ಚಟುವಟಿಕೆಗಳನ್ನೇ ಮಾಡಲಿ ಅಥವಾ ದೊಡ್ಡವಳಾದ ನಂತರ ಏನೇ ಆಗಲಿ ತಾನು ಇನ್ನು ಮುಂದೆ ಯಾವಾಗಲೂ ಹುಡುಗಿಯಾಗಿಯೇ ಇರುತ್ತೇನೆ ಎಂದು ಅವಳಿಗೆ ಗೊತ್ತಿದೆ. ಹ್ಯಾನಿತಾ ಏನನ್ನು ಪಡೆದಿದ್ದಾಳೆ.
   ಅ. ಲಿಂಗತ್ವದ ಗ್ರಹಿಕೆ.
   ಬ. ಲಿಂಗತ್ವ ಉತ್ಕಟತೆ.
   ಕ. ಲಿಂಗತ್ವ ಅನನ್ಯತೆ.

2. ಹ್ಯಾನನಿಗೆ ಗೊಂಬೆಗಳೊಂದಿಗೆ ಆಡಲು ಇಷ್ಟ. ಆದರೆ ಆತನ ತಂದೆಯು ಮನೆಯೊಳಗೆ ಗೊಂಬೆಗಳನ್ನು ತರಲು ಅನುಮತಿಸುವುದಿಲ್ಲ. ಆತನ ತಂದೆಯು ತನ್ನ ಮಗ ಹುಡುಗರೊಂದಿಗೆ ಆಡಬೇಕು ಮತ್ತು ಪುರುಷತನದ ಲಿಂಗತ್ವ ಅನನ್ಯತೆಯನ್ನು ಸ್ವೀಕರಿಸಬೇಕು ಎಂದು ನಿರೀಕ್ಷಿಸುತ್ತಾನೆ. ಹ್ಯಾನನು ಅಂತಹ ಲಿಂಗತ್ವ ಅನನ್ಯತೆಯನ್ನು ಸ್ವೀಕರಿಸುತ್ತಾನೆ, ಅದಕ್ಕೆ ಈ ಕೆಳಗಿನ ಒತ್ತಡವು ಕಾರಣ,
   ಅ. ಸ್ವಯಂ-ಸಾಧಕ ಭವಿಷ್ಯವಾಣಿ
   ಬ. ಲಿಂಗತ್ವ- ಪಾತ್ರ ಮಾನಕಗಳು.
   ಕ. ಲಿಂಗತ್ವ ಉತ್ಕಟತೆ.

# ಲಿಂಗತ್ವ ಪ್ರರೂಪಣೆ ಮತ್ತು ಲಿಂಗತ್ವ- ಪಾತ್ರ ವಿಕಾಸದ ಸಿದ್ಧಾಂತಗಳು

ಲಿಂಗ ವ್ಯತ್ಯಾಸಗಳು ಮತ್ತು ಲಿಂಗತ್ವ- ಪಾತ್ರಗಳ ವಿಕಾಸವನ್ನು ವಿವರಿಸಲು ಅನೇಕ ಸಿದ್ಧಾಂತಗಳನ್ನು ಮುಂದಿಡಲಾಗಿದೆ. ಕೆಲವು ಸಿದ್ಧಾಂತಗಳು ಲಿಂಗಗಳ ನಡುವಿನ

ಜೈವಿಕ ವ್ಯತ್ಯಾಸಗಳ ಪಾತ್ರಕ್ಕೆ ಒತ್ತು ನೀಡಿದರೆ, ಇನ್ನು ಕೆಲವು ಮಕ್ಕಳ ಮೇಲಿನ ಸಾಮಾಜಿಕ ಪ್ರಭಾವಗಳ ಮೇಲೆ ಒತ್ತು ನೀಡುತ್ತವೆ. ಕೆಲವು ಸಮಾಜ ಮಕ್ಕಳ ಮೇಲೆ ಹೇಗೆ ಪ್ರಭಾವ ಬೀರುತ್ತದೆ ಎನ್ನುವುದಕ್ಕೆ ಮಹತ್ವ ಕೊಟ್ಟರೆ, ಬೇರೆಯವು ಮಕ್ಕಳು ಲಿಂಗತ್ವವನ್ನು ಮತ್ತು ಅದರ ಎಲ್ಲಾ ಸೂಚ್ಯಾರ್ಥಗಳನ್ನು ಅರ್ಥ ಮಾಡಿಕೊಳ್ಳುವ ಪ್ರಯತ್ನದಲ್ಲಿ ಮಾಡುವ ಆಯ್ಕೆಗಳು ಮುಖ್ಯ ಎಂದು ಪರಿಗಣಿಸುತ್ತವೆ. ಈಗ ಸಂಕ್ಷಿಪ್ತವಾಗಿ ಎರಡು ಜೈವಿಕ ವ್ಯತ್ಯಾಸಗಳ ಸಿದ್ಧಾಂತಗಳನ್ನು ಪರಿಶೀಲಿಸಿ ನಂತರ ಮನೋವಿಶ್ಲೇಷಣೆ, ಸಾಮಾಜಿಕ ಕಲಿಕೆ, ಸಂಜ್ಞಾನಾತ್ಮಕ-ವಿಕಾಸ ಮತ್ತು ಲಿಂಗತ್ವ ಮನೋನಕ್ಷೆ ಯಂತಹ ಹೆಚ್ಚು 'ಸಾಮಾಜಿಕ' ಉಪಗಮನಗಳನ್ನು ಗಮನಿಸೋಣ.

**ಜೀವವಿಕಾಸವಾದ**

ಜೀವ ವಿಕಾಸ ವಾದಿಗಳು ( ಉದಾಹರಣೆಗೆ, ಬಸ್, 1995, 2000, , ಗೇರಿ, 1999, 2005 ಇವರನ್ನು ಒಳಗೊಂಡಂತೆ) ಮಾನವ ಇತಿಹಾಸದುದ್ದಕ್ಕೂ ಪುರುಷರು ಮತ್ತು ಸ್ತ್ರೀಯರು ವಿಭಿನ್ನ ಜೀವವಿಕಾಸಾತ್ಮಕ ಒತ್ತಡಗಳನ್ನು ಎದುರಿಸಿದ್ದಾರೆ ಮತ್ತು ನೈಸರ್ಗಿಕ ಆಯ್ಕೆಯ ಪ್ರಕ್ರಿಯೆಯು ಪಿತೂರಿಮಾಡಿ ದುಡಿಮೆಯ ಲಿಂಗತ್ವ ವಿಭಜನೆಯನ್ನು ನಿರ್ಧರಿಸಿದ ಮೂಲಭೂತ ವ್ಯತ್ಯಾಸಗಳನ್ನು ಸೃಷ್ಟಿಮಾಡಿದೆ ಎನ್ನುತ್ತಾರೆ. ಅಧ್ಯಾಯ 2 ರಲ್ಲಿ, ಉದಾಹರಣೆಗೆ, ನಾವು ಜೀವವಿಕಾಸ ವಾದಿಗಳು ತಮ್ಮ ವಂಶವಾಹಿಗಳನ್ನು ಸಂರಕಿಸಿಕೊಳ್ಳಲು ಪುರುಷರು ಮತ್ತು ಸ್ತ್ರೀಯರು ಆದ್ಯತೆ ನೀಡುವ ಸಂಭೋಗದ ತಂತ್ರಗಳನ್ನು ಹೇಗೆ ವಿವರಿಸಿದ್ದಾರೆ ಎಂದು ಗಮನಿಸಿದ್ದೇವೆ. . ಸಂತಾನದ ಉತ್ಪತ್ತಿಗೆ ಕೇವಲ ವೀರ್ಯವನ್ನು ದಯಪಾಲಿಸಬೇಕಾದ ಪುರುಷರು ಬಹು ಸಂಗಾತಿಗಳೊಂದಿಗೆ ಸಮಾಗಮ ಮಾಡುವ ಮೂಲಕ ಮತ್ತು ಹಲವು ಮಕ್ಕಳನ್ನು ಉತ್ಪತ್ತಿ ಮಾಡುವ ಮೂಲಕ ತಮ್ಮ ವಂಶವಾಹಿಗಳನ್ನು ರಕ್ಷಿಸಬಹುದು. ಅದೇ ಉದ್ದೇಶವನ್ನು ಸಾಧಿಸಲು ಸ್ತ್ರೀಯರು ಪುರುಷರಿಗಿಂತ ಹೆಚ್ಚಿನದನ್ನು ತೊಡಗಿಸಬೇಕು, ತಮ್ಮ ವಂಶವಾಹಿಯನ್ನು ಉಳಿಸಿಕೊಳ್ಳಲು ಗರ್ಭಧಾರಣೆಯಿಂದ ಹಿಡಿದು ಮಗುವಿನ ಜನನದವರೆಗೆ 9 ತಿಂಗಳುಗಳು ಹೊತ್ತು, ನಂತರ ವರ್ಷಾನುಗಟ್ಟಲೆ ಪ್ರತಿ ಮಗುವನ್ನೂ ಪೋಷಿಸಬೇಕಾಗುತ್ತದೆ. ಮಕ್ಕಳ ಪಾಲನೆಯಲ್ಲಿ ಯಶಸ್ವಿಯಾಗಲು ಬಹುಶಃ ಸ್ತ್ರೀಯರು ಕರುಣೆ, ವಾತ್ಸಲ್ಯ, ಮೃದುತ್ವ, ಮತ್ತು ಪಾಲನೆ-ಪೋಷಣೆಯ ಸ್ವಭಾವಗಳನ್ನು (ಅಭಿವ್ಯಂಜಕ ಲಕ್ಷಣಗಳು) ಬೆಳೆಸಿಕೊಂಡಿರಬೇಕು, ಹಾಗೂ ದಯೆ-ಅನುಕಂಪವಿರುವ, ಮತ್ತು ಮಕ್ಕಳ ಉಳಿವಿಗೆ (ಆಹಾರ ಮತ್ತು ರಕ್ಷಣೆಯಂತಹ) ಸಂಪನ್ಮೂಲಗಳನ್ನು ಒದಗಿಸುವ ಪುರುಷರಿಗೆ ಆದ್ಯತೆ ನೀಡಬಹುದು. ಅಂತೆಯೇ ಪುರುಷರು ಹೆಚ್ಚು ಸ್ಪರ್ಧಾ ಮನೋಭಾವದವರೂ, ಸ್ವ-ಸಮರ್ಥಕರೂ, ಆಕ್ರಮಣಶೀಲರೂ (ಕಾರಣಭೂತ ಲಕ್ಷಣಗಳು) ಆಗಬೇಕಾಗುತ್ತದೆ, ಏಕೆಂದರೆ, ಈ ಗುಣಗಳಿಂದ ಅವರು ತಮ್ಮ ಸಂಗಾತಿಯನ್ನು ಆಕರ್ಷಿಸಲು ಯಶಸ್ವಿಯಾಗುತ್ತಾರೆ ಮತ್ತು ಸಂಪನ್ಮೂಲಗಳನ್ನೂ ಸಂಪಾದಿಸಬಹುದು.

ಜೀವವಿಕಾಸವಾದಿಗಳ ಪ್ರಕಾರ (ಬಸ್,1995, 2000) ಸ್ತ್ರೀ ಮತ್ತು ಪುರುಷರು ಮಾನಸಿಕವಾಗಿ ಬಹಳ ವಿಧದಲ್ಲಿ ಸಾಮ್ಯತೆಯನ್ನು ಹೊಂದಿರಬಹುದು, ಆದರೆ ವಿಕಾಸದ ಚರಿತ್ರೆಯ ಉದ್ದಕ್ಕೂ ಹಲವು ಬಗೆಯ ಅನುವರ್ತನದ (ಪರಿಸರಕ್ಕೆ ಹೊಂದಿಕೊಳ್ಳುವಿಕೆಯ) ಸಮಸ್ಯೆಗಳನ್ನು ಎದುರಿಸಿದ್ದ ಕ್ಷೇತ್ರಗಳಲ್ಲಿ ಅವರಿಬ್ಬರೂ

ಭಿನ್ನವಾಗಿರಬೇಕು. ದೃಶ್ಯ ಮತ್ತು ಸ್ಥಳವಿಸ್ತಾರದ ಸಾಧನೆಯಲ್ಲಿ ಪುರುಷರು ಮೇಲ್ಮೈ ಸಾಧಿಸುವುದನ್ನು ಪರಿಗಣಿಸಿ. ಬೇಟೆಯಾಡಲು ಸ್ಥಳವಿಸ್ತಾರದ ಕೌಶಲ್ಯಗಳು ಅವಶ್ಯವಾಗಿರುತ್ತವೆ. ಬೇಟೆಗಾರರು ಚಲಿಸುವ ಒಂದು ಪ್ರಾಣಿಗೆ ಗುರಿಯಾಗಿಟ್ಟ ಈಟಿಯ (ಕಲ್ಲುಗಳು, ಬಾಣಗಳು) ಚಲನೆಯ ಪಥವನ್ನು ಮೊದಲೇ ಊಹಿಸಿಕೊಳ್ಳದಿದ್ದರೆ ಬಹಳ ಕಡಿಮೆ ಪ್ರಾಣಿಗಳು ಸಾಯುತ್ತವೆ. ಹೀಗಾಗಿ ಉಳಿವಿಗಾಗಿ ಅವಶ್ಯವಿರುವ ಆಹಾರವನ್ನು ಒದಗಿಸುವ ಒತ್ತಡದಿಂದಾಗಿ, ಬಹುಶಃ ಪುರುಷರು (ಹೆಚ್ಚಿನದಾಗಿ ಬೇಟೆಯಾಡಿ ಸಂಪನ್ಮೂಲ ಒದಗಿಸುವವರಾಗಿದ್ದರಿಂದ) ಸ್ಥಳವಿಸ್ತಾರಕ್ಕೆ ಸಂಬಂಧಿಸಿದಂತೆ ಸ್ತ್ರೀಯರಿಗಿಂತ ಹೆಚ್ಚಿನ ಕೌಶಲ್ಯವನ್ನು ಬೆಳೆಸಿಕೊಂಡರು.

ಲಿಂಗತ್ವಕ್ಕೂ ಜೈವಿಕ ಲಿಂಗಕ್ಕೂ ಹತ್ತಿರದ ಸಂಬಂಧವಿರುತ್ತದೆ ಎಂಬ ಅಭಿಪ್ರಾಯವನ್ನು ಮಕ್ಕಳೂ ಹಂಚಿಕೊಳ್ಳುತ್ತಾರೆ. ಮರಿಯಾನೆ ಟೇಲರ್ (1996) ಈ ಕೆಳಗಿನ ಕತೆಯನ್ನು ಕುರಿತು ಕೆಲವು ಚಿಕ್ಕ ಮಕ್ಕಳನ್ನು ಸಂದರ್ಶಿಸುತ್ತಾರೆ: " ಒಮ್ಮೆ ಕ್ರಿಸ್ ಎಂಬ ಹೆಸರಿನ ಪುಟ್ಟ ಶಿಶು ಇತ್ತು. . .[ಅದು] ಒಂದು ಸುಂದರ ದ್ವೀಪದಲ್ಲಿ ವಾಸಿಸತೊಡಗಿತು. . . [ಅಲ್ಲಿ] ಕೇವಲ ಹುಡುಗರು ಮತ್ತು ಪುರುಷರಿದ್ದರು; ಕ್ರಿಸ್ ಒಬ್ಬಳೇ ಹುಡುಗಿಯಾಗಿದ್ದಳು. ಈ ದ್ವೀಪದಲ್ಲಿ ಕ್ರಿಸ್ ಬಹಳ ಸಂತೋಷದಿಂದ ಬದುಕುತ್ತಿದ್ದಳು, ಆದರೆ ಅವಳು ಮತ್ತೊಬ್ಬ ಹುಡುಗಿ ಅಥವಾ ಮಹಿಳೆಯನ್ನು ಅಲ್ಲಿ ನೋಡಲೇ ಇಲ್ಲ" (ಟೇಲರ್, 1996, ಪು. 1559). ಕ್ರಿಸ್ ಹೇಗಿರುತ್ತಾಳೆ?

.

ಹೀಗೆ, ಕ್ರಿಸ್‌ಳ ಆಟಿಕೆಯ ಆಯ್ಕೆಗಳು, ವೃತ್ತಿಯನ್ನು ಕುರಿತ ಆಕಾಂಕ್ಷೆಗಳು, ಮತ್ತು ಅವಳ ವ್ಯಕ್ತಿತ್ವವಿಶೇಷಕಗಳ ಬಗೆಗೆ ಟೇಲರ್ (1996) ಅವರು 4 ರಿಂದ 10 ವರ್ಷದ ಒಳಗಿನ ಮಕ್ಕಳನ್ನು ಕೇಳಿದಾಗ, ಕ್ರಿಸ್ ಪುರುಷರೇ ಇದ್ದ ಪರಿಸರದಲ್ಲಿ ಬೆಳೆದಿದ್ದರೂ, ಅವಳು ಎಂದೂ ಮತ್ತೊಬ್ಬ ಹುಡುಗಿ ಅಥವಾ ಮಹಿಳೆಯನ್ನು ನೋಡದೇ ಇದ್ದರೂ 4 ರಿಂದ 8 ವರ್ಷದ ಮಕ್ಕಳು ರೂಢಮಾದರಿಯ ಸ್ತ್ರೀತನದ ಲಕ್ಷಣಗಳನ್ನೇ ಕ್ರಿಸ್ ಗೆ ಆರೋಪಿಸಿದರು. ಅಂದರೆ, ಶಾಲಾಪೂರ್ವ ಹಂತದ ಮತ್ತು ಔಪಚಾರಿಕ ತರಗತಿ-ಶಾಲೆಯ ಹಂತದಲ್ಲಿರುವ ಮಕ್ಕಳು ಒಬ್ಬ ಹುಡುಗಿಯಾಗಿ ಕ್ರಿಸ್‌ಳ ಜೈವಿಕ ಸ್ಥಿತಿಯು ಮುಂದೆ ಅವಳು ಏನಾಗುತ್ತಾಳೆ ಎಂಬುದನ್ನು ನಿರ್ಧರಿಸುತ್ತದೆ ಎಂದು ಭಾವಿಸಿ ಒಂದು *ಸಾರಭೂತ ಪಕ್ಷಪಾತವನ್ನು (essentialist bias)* ತೋರಿಸುತ್ತಾರೆ. ಕ್ರಿಸ್‌ಳು ಕೇವಲ ಪುರುಷರೇ ಇದ್ದ ಪರಿಸರದಲ್ಲಿ ಬೆಳೆದಿದ್ದರಿಂದ ಅದು ಅವಳ ಚಟುವಟಿಕೆಗಳು, ಆಕಾಂಕ್ಷೆಗಳು, ಮತ್ತು ವ್ಯಕ್ತಿತ್ವ ಲಕ್ಷಣಗಳ ಮೇಲೆ ಪ್ರಭಾವ ಬೀರಬಹುದು ಎಂಬ ಅಂಶದ ಅರಿವು ಈ ಅಧ್ಯಯನದಲ್ಲಿ ಕೇವಲ 9 ರಿಂದ 10 ವರ್ಷದ ಮಕ್ಕಳಿಗೆ ಮಾತ್ರ ಇತ್ತು.

**ಜೀವವಿಕಾಸವಾದಿ ಉಪಗಮನದ ಟೀಕೆಗಳು**

ಲಿಂಗ ವ್ಯತ್ಯಾಸಗಳು ಮತ್ತು ಲಿಂಗತ್ವ ಪ್ರರೂಪಣೆಯ ಜೀವವಿಕಾಸವಾದಿ ವಿವರಣೆಗಳು ಕಟು ವಿಮರ್ಶೆಗೆ ಒಳಗಾಗಿವೆ. ಇದು ಮುಖ್ಯವಾಗಿ ಎಲ್ಲಾ ಸಂಸ್ಕೃತಿಗಳಲ್ಲೂ ಸುಸಂಬದ್ಧವಾಗಿರುವ ಲಿಂಗ ವ್ಯತ್ಯಾಸಗಳಿಗೆ ಅನ್ವಯವಾಗಿ ನಿರ್ದಿಷ್ಟ ಸಂಸ್ಕೃತಿಗಳು ಅಥವಾ ನಿರ್ದಿಷ್ಟ ಚಾರಿತ್ರಿಕ ಅವಧಿಗಳಿಗೆ ಸೀಮಿತವಾದ ವ್ಯತ್ಯಾಸಗಳನ್ನು ಹೆಚ್ಚಿನದಾಗಿ ಕಡೆಗಣಿಸುತ್ತವೆ (ಬ್ಲೇಕ್ ಮತ್ತಿತರರು., 2009). ಅದಲ್ಲದೆ, ಸಾಮಾಜಿಕ-

ಪಾತ್ರ ಪ್ರಾಕ್ಕಲ್ಪನೆಯ ಪ್ರತಿಪಾದಕರು ಲಿಂಗದ ಮಾನಸಿಕ ವ್ಯತ್ಯಾಸಗಳು ಜೈವಿಕವಾಗಿ ವಿಕಾಸ ಹೊಂದಿದ ಮನೋಧರ್ಮಗಳನ್ನು ಪ್ರತಿಬಿಂಬಿಸುವುದಿಲ್ಲ ಎಂದು ವಾದಿಸಿದ್ದಾರೆ. ಬದಲಿಗೆ, ಅವು 1) ಸಂಸ್ಕೃತಿಗಳು ಸ್ತ್ರೀ ಮತ್ತು ಪುರುಷರಿಗೆ ವಹಿಸುವ ಪಾತ್ರಗಳಲ್ಲಿನ (ಉದಾಹರಣೆಗೆ ಜೀವನೋಪಾಯ ಕಲ್ಪಿಸುವವ / ಗೃಹಿಣಿ) ವ್ಯತ್ಯಾಸಗಳು, ಮತ್ತು 2) ಹುಡುಗ ಮತ್ತು ಹುಡುಗಿಯರಲ್ಲಿ ಗುಣಲಕ್ಷಣಗಳನ್ನು ಪ್ರೋತ್ಸಾಹಿಸಿ ಆ ಪಾತ್ರಗಳನ್ನು ಸಮರ್ಪಕವಾಗಿ ವಹಿಸಲೆಂದು ಒಪ್ಪಿಕೊಂಡಿರುವ ಸಾಮಾಜಿಕೀಕರಣದ ಅಭ್ಯಾಸಗಳಲ್ಲಿನ ವ್ಯತ್ಯಾಸಗಳ (ಉದಾಹರಣೆಗೆ ಸ್ವಸಮರ್ಥನೆ / ಪೋಷಣತ್ವ) ಕಾರಣದಿಂದ ಹುಟ್ಟಿಕೊಳ್ಳುತ್ತವೆ (ಈಗ್ಲಿ, ವುಡ್, ಮತ್ತು ಡೀಕ್‌ಮ್ಯಾನ್, 2000). ಜೈವಿಕ ಸಿದ್ಧಾಂತಕ್ಕೆ ಒಲುವ ಅನೇಕ ಸಿದ್ಧಾಂತಿಗಳೂ ಕೂಡಾ, ಒಬ್ಬ ವ್ಯಕ್ತಿಯ ವರ್ತನೆಗಳು ಮತ್ತು ಪಾತ್ರಗಳ ಆದ್ಯತೆಯಲ್ಲಿ ಜೈವಿಕ ಮತ್ತು ಸಾಮಾಜಿಕ ಪ್ರಭಾವಗಳೆರಡೂ ಕೆಲಸ ಮಾಡುತ್ತವೆ ಎಂಬ ಸೌಮ್ಯವಾದ, ಕಡಿಮೆ ಸಾರಭೂತ ನಿಲುವು ತಾಳುತ್ತಾರೆ.

> **ಸಾಮಾಜಿಕ ಪಾತ್ರ ಪ್ರಾಕ್ಕಲ್ಪನೆ:** ಲಿಂಗಗಳು ಮತ್ತು ಇತರೆ ಲಿಂಗತ್ವ-ಪಾತ್ರ ರೂಢಮಾದರಿಗಳಲ್ಲಿನ ಮಾನಸಿಕ ವ್ಯತ್ಯಾಸಗಳು ಪುರುಷರು ಮತ್ತು ಸ್ತ್ರೀಯರಿಗೆ ಸಾಮಾಜಿಕವಾಗಿ ವಹಿಸಿರುವ ಮತ್ತು ಅವರು ನಿರ್ವಹಿಸುವ ಪಾತ್ರಗಳಿಂದ ಸೃಷ್ಟಿಯಾಗಿ ಉಳಿದುಕೊಂಡು ಬರುತ್ತವೆ ಎನ್ನುವ ಆಲೋಚನೆ (ಜೈವಿಕವಾಗಿ ವಿಕಾಸ ಹೊಂದಿದ ಮನೋಧರ್ಮಗಳಿಗೆ ಆರೋಪಿಸುವುದರ ಬದಲು)

ಲಿಂಗಗಳ ನಡುವಿನ ಯಾವ ಜೈವಿಕ ವ್ಯತ್ಯಾಸಗಳು ಮಹತ್ವದ್ದಿರಬಹುದು? ಪುರುಷರು Y ವರ್ಣತಂತುವನ್ನು ಹೊಂದಿರುತ್ತಾರೆ ಮತ್ತು ಆದ್ದರಿಂದ ಎಲ್ಲಾ ಸ್ತ್ರೀಯರೂ ಕೆಲವು ವಂಶವಾಹಿಗಳನ್ನು ಹೊಂದಿರುವುದಿಲ್ಲ ಎನ್ನುವುದು ಒಂದು. ಮತ್ತೊಂದು, ಹಾರ್ಮೋನ್ ಏರಿಳಿತಗಳಿಗೆ ಸಂಬಂಧಿಸಿದ ವ್ಯತ್ಯಾಸ –ಪುರುಷರಲ್ಲಿ ಆಂಡ್ರೋಜಿನ್ (ಟೆಸ್ಟೋಸ್ಟರೋನ್ ಕೂಡಾ) ಹೆಚ್ಚಿನ ಪ್ರಮಾಣದಲ್ಲಿರುತ್ತದೆ ಮತ್ತು ಸ್ತ್ರೀಯರಿಗಿಂತ ಕಡಿಮೆ ಪ್ರಮಾಣದಲ್ಲಿ ಈಸ್ಟ್ರೋಜಿನ್ ಇರುತ್ತದೆ. ಲಿಂಗತ್ವ ಪ್ರರೂಪಣೆಯ ಪ್ರಸಿದ್ಧವಾದ ಅಂತರಕ್ರಿಯಾ ಸಿದ್ಧಾಂತದ ಪ್ರಕಾರ, ಹೀಗೆ ಜೈವಿಕವಾಗಿ ಲಿಂಗಕ್ಕೆ ಸಂಬಂಧಿಸಿದ ಪೂರಕ ಅಂಶಗಳು ಮಹತ್ವದ ಸಾಮಾಜಿಕ ಪ್ರಭಾವಗಳೊಂದಿಗೆ ಸೇರಿ ಗಂಡು ಮತ್ತು ಹೆಣ್ಣುಮಕ್ಕಳನ್ನು ವರ್ತನೆಗಳ ಬೇರೆ ಬೇರೆ ವಿನ್ಯಾಸಗಳು ಮತ್ತು ಲಿಂಗತ್ವ ಪಾತ್ರಗಳತ್ತ ಎಳೆದುಕೊಂಡು ಹೋಗುತ್ತವೆ. ಈಗ ಈ ಪ್ರಭಾವಶಾಲಿ ಸಿದ್ಧಾಂತವು ಏನು ಹೇಳುತ್ತದೆ ಎನ್ನುವುದನ್ನು ನೋಡೋಣ.

## ಮನಿ ಮತ್ತು ಎರ್‌ಹಾರ್ಡ್ ಅವರ ಲಿಂಗತ್ವ ವಿಭೇದೀಕರಣ ಮತ್ತು ವಿಕಾಸದ ಜೈವಿಕಸಾಮಾಜಿಕ ಸಿದ್ಧಾಂತ


ಮನಿ ಮತ್ತು ಎರ್‌ಹಾರ್ಡ್ (1972), ಒಬ್ಬ ವ್ಯಕ್ತಿಯು ಮುಂದೆ ಪುರುಷ ಅಥವಾ ಸ್ತ್ರೀ ಲಿಂಗತ್ವ-ಪಾತ್ರ ಆಯ್ದುಕೊಳ್ಳುವುದನ್ನು ಅನೇಕ ನಿರ್ಣಾಯಕ ಘಟನೆಗಳು ಪ್ರಭಾವಿಸುತ್ತವೆ ಎಂದು ಪ್ರತಿಪಾದಿಸಿದ್ದಾರೆ. ಅಂತಹ ಮೊತ್ತಮೊದಲ ನಿರ್ಣಾಯಕ ಘಟನೆಯು ಗರ್ಭಧಾರಣೆಯ ಸಮಯದಲ್ಲಿ ಮಗುವು ತಂದೆಯಿಂದ X ಅಥವಾ Y ವರ್ಣತಂತುವನ್ನು ಪಡೆದಾಗ ನಡೆಯುತ್ತದೆ. ಮುಂದಿನ 6 ತಿಂಗಳುಗಳಗಳ ವರೆಗೆ

ಭ್ರೂಣದಲ್ಲಿ ಭೇದಗಳಿಲ್ಲದ ಒಂದು ಜನನಗ್ರಂಥಿ ರೂಪುಗೊಂಡಿರುತ್ತದೆ, ನಂತರ ಈ ಸಂರಚನೆಯು ಪುರುಷರ ವೃಷಣವಾಗುತ್ತದೆಯೋ ಅಥವಾ ಸ್ತ್ರೀಯ ಅಂಡಾಶಯವಾಗುತ್ತದೆಯೋ ಎಂಬುದನ್ನು ಜೈವಿಕ ಲಿಂಗಕ್ಕೆ ಸಂಬಂಧಿಸಿದ ವರ್ಣತಂತುಗಳು ನಿರ್ಧರಿಸುತ್ತವೆ. Y ವರ್ಣತಂತು ಇದ್ದರೆ ಅದು ವೃಷಣವಾಗಿ ಬೆಳೆಯುತ್ತದೆ, ಇಲ್ಲದಿದ್ದರೆ ಅಂಡಾಶಯ ರೂಪುಗೊಳ್ಳುತ್ತದೆ.

ಹೀಗೆ ಹೊಸದಾಗಿ ರೂಪುಗೊಂಡ ಜನನಗ್ರಂಥಿಯು ಎರಡನೆಯ ನಿರ್ಣಾಯಕ ಘಟನೆಯ ಫಲಿತಾಂಶವನ್ನು ನಿರ್ಧರಿಸುತ್ತದೆ. ಪುರುಷ ಭ್ರೂಣದ ವೃಷಣಗಳು ಎರಡು ಹಾರ್ಮೋನುಗಳನ್ನು ಸ್ರವಿಸುತ್ತವೆ: ಒಂದು ಟೆಸ್ಟೊಸ್ಟರೋನ್ –ಪುರುಷರ ದೇಹದೊಳಗಿನ ಆಂತರಿಕ ಸಂತಾನೋತ್ಪತ್ತಿ ವ್ಯವಸ್ಥೆಯ ಬೆಳವಣಿಗೆಯನ್ನು ಇದು ಪ್ರಚೋದಿಸುತ್ತದೆ; ಮತ್ತೊಂದು MIS-mullerian inhibiting substance –ಇದು ಸ್ತ್ರೀ ಅಂಗಗಳು ಬೆಳೆಯದಂತೆ ತಡೆಯುತ್ತದೆ. ಈ ಹಾರ್ಮೋನುಗಳು ಇರದಿದ್ದಲ್ಲಿ ಭ್ರೂಣವು ಸ್ತ್ರೀಯೊಬ್ಬಳ ಸಂತಾನೋತ್ಪತ್ತಿಯ ಆಂತರಿಕ ವ್ಯವಸ್ಥೆಯನ್ನು ಪಡೆದುಕೊಳ್ಳುತ್ತದೆ.

ಮೂರನೆಯ ನಿರ್ಣಾಯಕ ಅವಸ್ಥೆಯಲ್ಲಿ, ಗರ್ಭಧಾರಣೆಯಾಗಿ 3-4 ತಿಂಗಳುಗಳು ಆದ ಮೇಲೆ, ವೃಷಣಗಳಿಂದ ಸ್ರವಿತಗೊಂಡ ಟೆಸ್ಟೊಸ್ಟರೋನ್ ಸಾಮಾನ್ಯವಾಗಿ ಶಿಶ್ನ ಮತ್ತು ವೃಷಣಕೋಶದ ಬೆಳವಣಿಗೆಗೆ ಕಾರಣವಾಗುತ್ತದೆ. ಒಂದು ವೇಳೆ ಟೆಸ್ಟೊಸ್ಟರೋನ್ ಇರದಿದ್ದಲ್ಲಿ (ಸಾಮಾನ್ಯವಾಗಿ ಮಹಿಳೆಯರಲ್ಲಿ ಇರದಿರುವ ಹಾಗೆ), ಅಥವಾ ಗಂಡು ಭ್ರೂಣವು ಆನುವಂಶಿಕವಾಗಿ TFS-testicular feminization syndrome ಎಂಬ ಒಂದು ಅಪರೂಪದ ಅಪ್ರಭಾವಿ (recessive) ಕಾಯಿಲೆಯನ್ನು ಹೊಂದಿದ್ದರೆ, ಆಗ ಆ ಭ್ರೂಣವು ಪುರುಷ ಲಿಂಗ ಹಾರ್ಮೋನುಗಳಿಗೆ ಸ್ಪಂದಿಸುವುದಿಲ್ಲ ಮತ್ತು ಅದರಲ್ಲಿ ಸ್ತ್ರೀಯರ ಬಾಹ್ಯ ಜನನಾಂಗಗಳು (ಯೋನಿಯ ಹೊರತುಟಿ ಮತ್ತು ಭಗಾಂಕುರ) ರೂಪುಗೊಳ್ಳುತ್ತವೆ. ಟೆಸ್ಟೊಸ್ಟರೋನ್ ಮಿದುಳು ಮತ್ತು ನರಮಂಡಲ ವ್ಯವಸ್ಥೆಯ ಬೆಳವಣಿಗೆಯನ್ನೂ ಸಹ ಬದಲಾಯಿಸುತ್ತದೆ ಎಂದು ಹೇಳಲಾಗುತ್ತದೆ. ಉದಾಹರಣೆಗೆ ಅದು ಹಾರ್ಮೋನುಗಳು ಚಕ್ರಗತಿಯಲ್ಲಿ ಸ್ರವಿಸದಂತೆ ಪುರುಷ ಮಿದುಳಿಗೆ ಸಂದೇಶ ಕಳಿಸುತ್ತದೆ, ಹೀಗೆ ಪುರುಷರು ತಮ್ಮ ಜೈವಿಕ ಪ್ರೌಢಾವಸ್ಥೆಯಲ್ಲಿ ಋತುಚಕ್ರಗಳನ್ನು ಅನುಭವಿಸುವುದಿಲ್ಲ.

**TFS-testicular feminization syndrome:** ವೃಷಣದ ನಾರೀಕರಣ ಲಕ್ಷಣ ಸಮಷ್ಟಿ. ಒಂದು ಪುರುಷ ಭ್ರೂಣವು ಪುರುಷ ಲಿಂಗ ಚೋದನಿಕಗಳ ಪ್ರಭಾವಕ್ಕೆ ಸ್ಪಂದಿಸದೇ ಸ್ತ್ರೀ ಬಾಹ್ಯ ಜನನಾಂಗ ಬೆಳೆಯುವ ಒಂದು ಆನುವಂಶಿಕ ವೈಪರಿತ್ಯ.




**ಆಕೃತಿ 12.5**

ಮನಿ ಮತ್ತು ಎರ್‌ಹಾರ್ಡ್ ಅವರ ಲಿಂಗ ಪುರೂಪಣೆಯ ಜೀವಸಾಮಾಜಿಕ ಸಿದ್ಧಾಂತದಲ್ಲಿನ ನಿರ್ಣಾಯಕ ಘಟನೆಗಳು.

ಮೂಲ: Man and Women, Boy and Girl, *by J.Money & A. Ehrhardt, 1972. Copyright © 1972 by Johns Hopkins University Press. Reprinted by permission.*

**ಆರಂಭ – ಅಂತ್ಯ**

ಆನುವಂಶಿಕವಾಗಿ ಲಿಂಗ ವರ್ಣತಂತುಗಳನ್ನು ಪಡೆಯುವುದು
ವೃಷಣಗಳು ಅಥವಾ ಅಂಡಾಶಯಗಳ ಬೆಳವಣಿಗೆ
ಭ್ರೂಣದ ಹಾರ್ಮೋನುಗಳು ಸ್ರವಿಸುವುದು
ಸ್ತ್ರೀ ಅಥವಾ ಪುರುಷ ಜನನಾಂಗಗಳ ಬೆಳವಣಿಗೆ
ಮಗುವಿನ ಭೌತಿಕ ಲಕ್ಷಣಗಳ ಬಗೆಗೆ ಬೇರೆಯವರ ಪ್ರತಿಕ್ರಿಯೆಗಳು
ತಂತಮ್ಮ ದೇಹದ ಬಗೆಗೆ ಅವನು ಅಥವಾ ಅವಳ ಪ್ರತಿಕ್ರಿಯೆಗಳು
ಮೂಲಭೂತ ಲಿಂಗತ್ವ ಅನನ್ಯತೆ
ಮಿದುಳು ಮತ್ತು ನರವ್ಯವಸ್ಥೆಯಲ್ಲಿ ಲಿಂಗ ವ್ಯತ್ಯಾಸಗಳು ರೂಪುಗೊಳ್ಳುವುದು
ಪ್ರಾಯದಲ್ಲಿ ಸ್ತ್ರೀ ಅಥವಾ ಪುರುಷ ಹಾರ್ಮೋನುಗಳ ಸ್ರವಿಸುವಿಕೆ
ಹೆಚ್ಚಿದ ಲೈಂಗಿಕ ಆಸಕ್ತಿ; ದೇಹದ ಚಿತ್ರಣ ಮತ್ತು ಸ್ವ-ಪರಿಕಲ್ಪನೆಗಳಲ್ಲಿನ ಬದಲಾವಣೆಗಳು
ಪ್ರೌಢರ ಲಿಂಗತ್ವ ಅನನ್ಯತೆ

ಒಮ್ಮೆ ಮಗು ಹುಟ್ಟಿದ ಕ್ಷಣದಿಂದ *ಸಾಮಾಜಿಕ* ಅಂಶಗಳು ಕಾರ್ಯ ಆರಂಬಿಸುತ್ತವೆ. ಮಗುವಿನ ಜನನಾಂಗದ ಸ್ವರೂಪವನ್ನು ಆದರಿಸಿ ಪಾಲಕರು ಮತ್ತು ಇತರರು ಮಗುವನ್ನು ಗುರುತಿಸಿ ಅವನು ಅಥವಾ ಅವಳಿಗೆ ಸ್ಪಂದಿಸಲು ಆರಂಭಿಸುತ್ತಾರೆ. ಒಂದು ವೇಳೆ ಮಗುವಿನ ಜನನಾಂಗವು ಅಸ್ವಾಭಾವಿಕವಾಗಿದ್ದು ಅವನು ಅಥವಾ ಅವಳನ್ನು ಬೇರೆ ಲಿಂಗಕ್ಕೆ ಸೇರಿಸಿ ತಪ್ಪು ಹಣೆಪಟ್ಟಿ ನೀಡಿದರೆ, ಇದು ಅವನ ಅಥವಾ ಅವಳ ಭವಿಷ್ಯದ ಬೆಳವಣಿಗೆಯ ಮೇಲೆ ಪರಿಣಾಮ ಬೀರಬಹುದು. ಉದಾಹರಣೆಗೆ, ಜೈವಿಕವಾಗಿ ಗಂಡಾದ ಮಗುವನ್ನು ಹೆಣ್ಣು ಎಂದು ಗುರುತಿಸಿ, ಹೆಣ್ಣು ಮಗುವಿಗೆ ಸ್ಪಂದಿಸುವ ರೀತಿಯಲ್ಲಿ ಸ್ಪಂದಿಸುವುದು (TFS ಕಾಯಿಲೆ ಉಳ್ಳ ಮತ್ತು ಸ್ತ್ರೀಗೆ ಸಂಬಂಧಿಸಿದ ಬಾಹ್ಯ ಜನನಾಂಗಗಳನ್ನು ಹೊಂದಿದ ಗಂಡಾದರೆ) ಮತ್ತು ಆ ಮಗುವು ಎರಡೂವರೆಯಿಂದ ಮೂರು ವರ್ಷದ ಹೊತ್ತಿಗೆ ಹೆಣ್ಣಿನ ಲಿಂಗಸಂಬಂಧಿ ಅನನ್ಯತೆಯನ್ನು (ಜೈವಿಕ ಲಕ್ಷಣಗಳು ಕಾಣಿಸಿಕೊಳ್ಳದೇ ಇದ್ದರೂ) ದಕ್ಕಿಸಿಕೊಳ್ಳುವುದು. ಪ್ರಾಯದಲ್ಲಿ ಅಧಿಕ ಪ್ರಮಾಣದ ಚೋದನಿಕಗಳು ಹೊರಬಿದ್ದು ಸಂತಾನೋತ್ಪತ್ತಿ ವ್ಯವಸ್ಥೆಗೆ ಪ್ರಚೋದನೆಯಾಗಿ, ಅನುಷಂಗಿಕ ಲಿಂಗ ಲಕ್ಷಣಗಳು ಕಾಣಿಸಿಕೊಂಡು ಲೈಂಗಿಕ ಅಂತಃಪ್ರೇರಣೆ ವಿಕಾಸಗೊಂಡಾಗ ಮತ್ತೆ ಜೈವಿಕ ಅಂಶಗಳು ರಂಗವನ್ನು ಪ್ರವೇಶಿಸುತ್ತವೆ. ಈ ಘಟನೆಗಳು ಮತ್ತು ತಾನು ಗಂಡು ಅಥವಾ ಹೆಣ್ಣೆಂಬುದರ ಬಗೆಗೆ ಈ ಮೊದಲು ರೂಪಿತವಾದ ಸ್ವ-ಪರಿಕಲ್ಪನೆ –ಈ ಎರಡೂ ಜೊತೆಗೂಡಿ ವಯಸ್ಕ ಲಿಂಗತ್ವ ಅನನ್ಯತೆ ಮತ್ತು ಲಿಂಗತ್ವ- ಪಾತ್ರಗಳ ಆಯ್ಕೆಗೆ ಬುನಾದಿಯನ್ನೊದಗಿಸುತ್ತವೆ (ಆಕೃತಿ 12. 5 ರಲ್ಲಿ ಚಿತ್ರಿಸಿದಂತೆ). ಆದರೆ ಇದರಲ್ಲಿ ನೈಸರ್ಗಿಕವಾದದ್ದು (ಪ್ರಕೃತಿದತ್ತವಾದದ್ದು) ಎಷ್ಟಿರುತ್ತದೆ, ಪೋಷಿಸಲ್ಪಟ್ಟದ್ದು (ಬೆಳೆಸಲ್ಪಟ್ಟದ್ದು) ಎಷ್ಟಿರುತ್ತದೆ?

## ಲಿಂಗತ್ವ- ಪಾತ್ರಗಳ ವಿಕಾಸದಲ್ಲಿ ಜೈವಿಕ ಪ್ರಭಾವಗಳಿಗೆ ಸಾಕ್ಷ್ಯ

ಸ್ತ್ರೀ ಮತ್ತು ಪುರುಷರ ವರ್ತನೆಗಳ ಮೇಲೆ ಜೈವಿಕ ಅಂಶಗಳು ಎಷ್ಟರಮಟ್ಟಿಗೆ ಪ್ರಭಾವ ಬೀರುತ್ತವೆ? ಈ ಪ್ರಶ್ನೆಗೆ ಉತ್ತರಿಸಲು ನಾವು ಆನುವಂಶಿಕ ಮತ್ತು ಹಾರ್ಮೋನುಗಳ ಪ್ರಭಾವಗಳನ್ನು ಕುರಿತು ನಮ್ಮ ಪರೀಕ್ಷಕರು ಏನು ಕಂಡುಕೊಂಡಿದ್ದಾರೆ ಎನ್ನುವುದನ್ನು ಪರಿಗಣಿಸಬೇಕಾಗುತ್ತದೆ.

## ಆನುವಂಶಿಕ ಪ್ರಭಾವಗಳು

ಆನುವಂಶಿಕ ಅಂಶಗಳು ವ್ಯಕ್ತಿತ್ವ, ಸಂಜ್ಞಾನಾತ್ಮಕ ಸಾಮರ್ಥ್ಯಗಳು, ಮತ್ತು ಸಾಮಾಜಿಕ ವರ್ತನೆಗಳಲ್ಲಿನ ಕೆಲವು ಲಿಂಗವ್ಯತ್ಯಾಸಗಳ ಮೇಲೆ ಪ್ರಭಾವ ಬೀರುತ್ತವೆ. ಕೊರೀನ್ ಹಟ್ (1972) , ಉದಾಹರಣೆಗೆ, ಗಂಡುಮಕ್ಕಳಲ್ಲಿ ಸಾಮನ್ಯವಾಗಿ ಕಾಣುವ ವಿಕಾಸಾತ್ಮಕ ಅವ್ಯವಸ್ಥೆ X ವರ್ಣತಂತುವಿಗೆ ಸಂಬಂಧಿಸಿದ ಅಪ್ರಭಾವಿ ಲಕ್ಷಣಗಳು (ಉದಾ: ಫ್ರಜೈಲ್ X ಸಿಂಡ್ರೋಮ್, ಮಸ್ಕ್ಯುಲರ್ ಡಿಸ್ಟ್ರೋಫಿ, ಹೆಮೋಫೀಲಿಯಾ) ಎಂದು ಅನುಮಾನಿಸುತ್ತಾರೆ. (ಗಂಡುಮಕ್ಕಳಲ್ಲಿ ಈ ಲಕ್ಷಣಗಳು ಕಾಣಿಸಿಕೊಳ್ಳುವುದು ಹೆಚ್ಚು, ಏಕೆಂದರೆ ಅವರು ಕೇವಲ ಒಂದು X ವರ್ಣತಂತುವನ್ನು ಹೊಂದಿರುತ್ತಾರೆ ಮತ್ತು ಒಂದು ಅಪ್ರಧಾನ ವಂಶವಾಹಿಯನ್ನು ಆನುವಂಶಿಕವಾಗಿ ಪಡೆಯಬೇಕಾಗುತ್ತದೆ ಎಂದು ಅಧ್ಯಾಯ 2ರಲ್ಲಿ ಹೇಳಿದ್ದನ್ನು ನೆನಪು ಮಾಡಿಕೊಳ್ಳಿ). ಅಲ್ಲದೆ, ನಮ್ಮ ವಂಶವಾಹಿ ಪ್ರರೂಪಗಳಿಂದ (genotype) ಭಾಗಶಃ ನಿಯಂತ್ರಿತವಾಗುವ ಒಂದು ಜೈವಿಕ ಪರಿವರ್ತ್ಯವಾದ **ಪ್ರಾಯ ಕಾಲಿಕ (**timing of puberty**)** ಕೂಡಾ ದೃಶ್ಯ ಮತ್ತು ದೇಶಿಕ ಸಾಧನೆಗಳ ಮೇಲೆ ಪ್ರಭಾವ ಬೀರುತ್ತದೆ. ತಡವಾಗಿ ಪ್ರಾಯಕ್ಕೆ ಬರುವ ಗಂಡು ಮತ್ತು ಹೆಣ್ಣು ಮಕ್ಕಳು ಕೆಲವು ದೃಶ್ಯ ಮತ್ತು ಸ್ಥಳವಿಸ್ತಾರದ ಚಟುವಟಿಕೆಗಳಲ್ಲಿ ತಮ್ಮದೇ ಲಿಂಗದ ಮತ್ತು ಪ್ರೌಢಾವಸ್ಥೆಗೆ ಬೇಗನೇ ತಲುಪಿದ ಮಕ್ಕಳಿಗಿಂತ ಹೆಚ್ಚು ಸಾಧನೆಯನ್ನು ತೋರುತ್ತಾರೆ. ಏಕೆಂದರೆ ನಿಧಾನವಾಗಿ ಆಗುವ ಪ್ರೌಢಾವಸ್ಥೆಯ ಪ್ರಕ್ರಿಯೆಯು ಮಿದುಳಿನ ಬಲ ವಲಯದ ನೈಪುಣ್ಯ ವೃದ್ದಿಸುತ್ತದೆ ಎಂದು ಹೇಳಲಾಗುತ್ತದೆ, ಆ ವಲಯವು ದೇಶಿಕ ಸ್ಥಳವಿಸ್ತಾರದ ಕಾರ್ಯಗಳನ್ನು ನಿರ್ವಹಿಸುತ್ತದೆ (ನ್ಯೂಕೋಂಬ್ ಮತ್ತು ಡುಬಾಸ್, 1987). ಆದರೆ ನಂತರದ ಸಂಶೋಧನೆಗಳು ಸೂಚಿಸುವಂತೆ ಗಂಡು ಮತ್ತು ಹೆಣ್ಣುಮಕ್ಕಳು ದೇಶಿಕ ಚಟುವಟಿಕೆಗಳಲ್ಲಿ *ಈ ಮೊದಲು ಎಷ್ಟು ತೊಡಗಿಕೊಂಡಿದ್ದರು* ಎನ್ನುವುದು ಮತ್ತು ಅವರ *ಸ್ವ-ಪರಿಕಲ್ಪನೆಗಳು* ಹೇಗಿವೆ ಎನ್ನುವುದು ಅವರ ಸ್ಥಳವಿಸ್ತಾರದ ಸಾಧನೆಗಳ ಮೇಲೆ ಹೆಚ್ಚಿನ ಮಟ್ಟಿಗೆ ಪ್ರಭಾವ ಬೀರುತ್ತವೆ (ಲೆವಿನ್ ಮತ್ತಿತರರು., 1999; ನ್ಯೂಕೊಂಬಿ ಮತ್ತು ಡುಬಾಸ್, 1987; ಸಿಗ್ನೊರೆಲ್ಲಾ, ಜೇಮಿಸನ್, ಮತ್ತು ಕ್ರುಪಾ, 1989). ನಿರ್ದಿಷ್ಟವಾಗಿ ಒಂದು ಬಲವಾದ ಪುರುಷತ್ವದ ಸ್ವ-ಪರಿಕಲ್ಪನೆಯನ್ನು ಹೊಂದಿರುವುದು ಮತ್ತು ಸ್ಥಳವಿಸ್ತಾರದ ಆಟಿಕೆಗಳು ಮತ್ತು ಚಟುವಟಿಕೆಗಳಲ್ಲಿ ಬೇಕಾದಷ್ಟು ಅನುಭವ ಹೊಂದಿರುವುದು ಗಂಡು ಮತ್ತು ಹೆಣ್ಣುಮಕ್ಕಳಿಬ್ಬರಲ್ಲಿಯೂ ಸ್ಥಳವಿಸ್ತಾರದ ಕೌಶಲ್ಯಗಳನ್ನು ಬೆಳೆಸುತ್ತದೆ. ಅದೇ ರೀತಿ, ಸ್ಥಳವಿಸ್ತಾರದ ಆಟಿಕೆಗಳು ಮತ್ತು ಚಟುವಟಿಕೆಗಳಲ್ಲಿ ಸೀಮಿತ ಅನುಭವಗಳನ್ನು ಹೊಂದಿರುವುದು ಮತ್ತು ಸ್ತ್ರೀತ್ವದ ಸ್ವ-ಪರಿಕಲ್ಪನೆಯನ್ನು ಹೊಂದಿರುವುದು ಸ್ಥಳವಿಸ್ತಾರದ ಕೌಶಲ್ಯಗಳ ಬೆಳವಣಿಗೆಯನ್ನು ತಡೆಯುತ್ತದೆ.

ನಮ್ಮ ಪುರುಷತ್ವ ಮತ್ತು ಸ್ತ್ರೀತ್ವದ ಸ್ವಸಂಕಲ್ಪನೆಗಳು ನಾವು ಆನುವಂಶಿಕವಾಗಿ ಪಡೆದುಕೊಂಡ ವಂಶವಾಹಿಗಳೊಂದಿಗೆ ಎಷ್ಟು ಹತ್ತಿರದ ನಂಟನ್ನು ಹೊಂದಿವೆ? ಹದಿಹರೆಯದ ಅವಳಿಗಳ ಮೇಲೆ ನಡೆಸಿದ ಹಲವು ವರ್ತನಾ ತಳಿ ವಿಜ್ಞಾನದ ಅಧ್ಯಯನಗಳಿಂದ (behavioral genetics studies) ತಿಳಿದುಬಂದಿದ್ದೇನೆಂದರೆ, ವಂಶವಾಹಿ ಪುರೂಪವು (genotype) ಜನರ ಪುರುಷತ್ವ ಸ್ವಸಂಕಲ್ಪನೆಗಳಲ್ಲಿ ಕಂಡುಬರುವ ವ್ಯತ್ಯಾಸಗಳ 50 ಪ್ರತಿಶತ ಭಾಗಕ್ಕೆ ಮತ್ತು ಸ್ತ್ರೀತ್ವ ಸ್ವಸಂಕಲ್ಪನೆಗಳ ಕೇವಲ 0-20 ಪ್ರತಿಶತ ಭಾಗಕ್ಕೆ ವಿವರಣೆಯನ್ನು ಒದಗಿಸುತ್ತದೆ (ವರ್ತನಾ ತಳಿ ವಿಜ್ಞಾನದ ಅಧ್ಯಯನಗಳ ಮೇಲಿನ ವಿವರಗಳಿಗೆ ಅಧ್ಯಾಯ 2ನ್ನು ನೋಡಿ; ಲೋಹ್ಲಿನ್, 1992; ಮಿಚೆಲ್, ಬೇಕರ್, ಮತ್ತು ಜಾಕ್ಲಿನ್, 1989). ಆದ್ದರಿಂದ ವಂಶವಾಹಿಗಳು ನಮ್ಮ ಜೈವಿಕ ಲಿಂಗವನ್ನು ನಿರ್ಧರಿಸುತ್ತವೆ ಮತ್ತು ಲಿಂಗತ್ವ ಪುರೂಪಣೆಯ ಮೇಲೆ ಸ್ವಲ್ಪ ಮಟ್ಟಿನ ಪ್ರಭಾವ ಬೀರುತ್ತವೆ ಅಂತಾದರೂ, ಜನರ ಪುರುಷತ್ವ ಮತ್ತು ಸ್ತ್ರೀತ್ವ ಸ್ವಸಂಕಲ್ಪನೆಗಳ ಅರ್ಧದಷ್ಟು ವ್ಯತ್ಯಾಸಗಳು ಪರಿಸರದ ಪ್ರಭಾವಗಳಿಂದ ರೂಪುಗೊಳ್ಳುತ್ತವೆ ಎಂದು ತೋರುತ್ತದೆ.

**ಅಂತಸ್ರಾವ ಚೋದನಿಕಗಳ (ಹಾರ್ಮೋನುಗಳ) ಪ್ರಭಾವ**: ವಿಕಾಸದಲ್ಲಿ ಜೈವಿಕ ಪ್ರಭಾವಗಳು '

ಜನನಪೂರ್ವ ಅವಧಿಯಲ್ಲಿ 'ತಪ್ಪಾದ' ಹಾರ್ಮೋನುಗಳಿಗೆ ಗುರಿಯಾಗಿದ್ದ ಮಕ್ಕಳ ಅಧ್ಯಯನಗಳಲ್ಲಿ. ಸ್ಪಷ್ಟವಾಗಿ ಗೋಚರಿಸಿವೆ (ಎರ್‌ಹಾರ್ಡ್ ಮತ್ತು ಭೇಕರ್, 1974; ಗೇಂದಲ್‌ಮ್ಯಾನ್, 1992; ಮನಿ ಮತ್ತು ಎರ್‌ಹಾರ್ಡ್, 1972). ಗರ್ಭವನ್ನು ಪೂರ್ಣಾವಧಿಯವರೆಗೂ ಉಳಿಸಿಕೊಳ್ಳಲು ಸಮಸ್ಯೆಯಿದ್ದ ಕೆಲವು ತಾಯಿಯರಿಗೆ ಪ್ರೊಜೆಸ್ಟಿನ್ ಇರುವ ಔಷಧಗಳನ್ನು, ಅವುಗಳಿಂದ ಮುಂದಾಗುವ ಪರಿಣಾಮದ ಅರಿವಿಲ್ಲದೆ ಕೊಟ್ಟಿದ್ದು, ಅದನ್ನು ದೇಹ ಪುರುಷ ಚೋದನಿಕವಾದ ಟೆಸ್ಟೋಸ್ಟೆರೋನ್ ಆಗಿ ಪರಿವರ್ತಿಸುತ್ತಿತ್ತು. ಗರ್ಭಸ್ಥ **ಅಡ್ರೀನಲ್ ಹೈಪರ್‌ಪ್ಲಾಸಿಯಾ (CAH)** ಎಂಬ ಅವಸ್ಥೆಯಿರುವ ಮಕ್ಕಳು ವಂಶವಾಹಿ ದೋಷ ಹೊಂದಿದ್ದು ಅಡ್ರಿನಲ್ ಗ್ರಂಥಿಗಳು ಅಸಾಮಾನ್ಯ ಪ್ರಮಾಣದಲ್ಲಿ ಹೆಚ್ಚಿನ ಅಂಡ್ರೋಜನ್ ಅನ್ನು ಜನನಪೂರ್ವ ಅವಧಿಯಲ್ಲಿ ಉತ್ಪಾದಿಸುತ್ತವೆ. ಈ ಸ್ಥಿತಿಗಳು ಸಾಮಾನ್ಯವಾಗಿ ಗಂಡುಮಕ್ಕಳ ಮೇಲೆ ಯಾವ ಪರಿಣಾಮವನ್ನೂ ಉಂಟುಮಾಡುವುದಿಲ್ಲ; ಆದರೆ ಅದರ ಪ್ರಭಾವಕ್ಕೆ ಒಳಗಾಗುವ ಸ್ತ್ರೀ ಭ್ರೂಣಗಳು ಪುರುಷತ್ವಗೊಂಡು ಮಕ್ಕಳು XX ವರ್ಣತಂತುಗಳನ್ನು ಹೊಂದಿ ಸ್ತ್ರೀಯರ ಆಂತರಿಕ ಅಂಗಗಳನ್ನು ಹೊಂದಿದ್ದರೂ ಕೂಡಾ ಪುರುಷರ ಜನನನಾಂಗಗಳನ್ನು ಹೋಲುವ ಬಾಹ್ಯ ಜನನನಾಂಗಗಳೊಂದಿಗೆ (ಉದಾಹರಣೆಗೆ ಶಿಶ್ನದಂತೆ ತೋರುವ ದೊಡ್ಡ ಭಗಾಂಕುರ ಮತ್ತು ವೃಷಣಕೋಶಗಳನ್ನು ಹೋಲುವ ರೀತಿಯಲ್ಲಿ ಯೋನಿಯ ಮೇಲ್ತುಟಿ ಅಂಟಿಕೊಂಡಿರುವುದು) ಹುಟ್ಟುತ್ತಾರೆ.

**ಗರ್ಭಸ್ಥ (ಆಗರ್ಭ) ಅಡ್ರೀನಲ್ ಹೈಪರ್‌ಪ್ಲಾಸಿಯಾ (CAH )** ಜನನಪೂರ್ವ ಅವಧಿಯಿಂದ ಆರಂಭಗೊಂಡು ಅಡ್ರೀನಲ್ ಗ್ರಂಥಿಗಳು ಅಸಾಮಾನ್ಯವಾಗಿ ಹೆಚ್ಚಿನ ಆಂಡ್ರೊಜನ್ ಅನ್ನು ಉತ್ಪತ್ತಿ ಮಾಡತೊಡಗಿ ಸ್ತ್ರೀ ಭ್ರೂಣವನ್ನು ಪುರುಷತ್ವಗೊಳಿಸುವ ಪರಿಣಾಮ ಬೀರುವ ಒಂದು ಆನುವಂಶಿಕ ವೈಪರೀತ್ಯ

**ಆಂಡ್ರೋಜನ್ ಪ್ರಭಾವಕ್ಕೆ ಒಳಗಾದ ಸ್ತ್ರೀಯರು**
ಜನನಪೂರ್ವ ಅವಧಿಯಲ್ಲಿ ಆಂಡ್ರೋಜನ್ ಎಂಬ ಗಂಡು ಹಾರ್ಮೋನಿನ ಕಾರಣದಿಂದ ಪುರುಷರ ಬಾಹ್ಯ ಜನನಾಂಗಗಳೊಂದಿಗೆ ಹುಟ್ಟುವ ಸ್ತ್ರೀಯರು.

ಮನಿ ಮತ್ತು ಎರ್‌ಹಾರ್ಡ್ (1972; ಎರ್‌ಹಾರ್ಡ್ ಮತ್ತು ಬೇಕರ್, 1974) ಆಂಡ್ರೋಜನ್ ಪ್ರಭಾವಕ್ಕೆ ಒಳಗಾಗಿದ್ದ ಸ್ತ್ರೀಯರ ಬಾಹ್ಯ ಜನನಾಂಗಗಳನ್ನು ಆಪರೇಶನ್ ಮೂಲಕ ಬದಲಾಯಿಸಿ ನಂತರ ಹೆಣ್ಣುಮಕ್ಕಳಂತೆ ಬೆಳೆಯಿಸಲ್ಪಟ್ಟವರನ್ನು ಅವಲೋಕಿಸಿದ್ದಾರೆ. ಅವರ ಸಹೋದರಿಯರು ಮತ್ತು ಇತರ ಹೆಣ್ಣುಮಕ್ಕಳಿಗೆ ಹೋಲಿಸಿದರೆ  ಆಂಡ್ರೊಜನ್ನಿನ ಪ್ರಭಾವಕ್ಕೆ ಒಳಗಾದ ಹೆಚ್ಚಿನ ಹುಡುಗಿಯರು ಟಾಮ್‌ಬಾಯ್‌ಗಳಂತಿದ್ದು, ಹುಡುಗರೊಂದಿಗೆ ಆಡಲು, ಮತ್ತು ಹುಡುಗರ ಆಟಿಕೆಗಳು ಮತ್ತು ಚಟುವಟಿಕೆಗಳಿಗೆ, ಸಾಂಪ್ರದಾಯಿಕವಾದ ಸ್ತ್ರೀತ್ವದ ಚಟುವಟಿಕೆಗಳಿಗಿಂತ ಆದ್ಯತೆ ನೀಡುತ್ತಿದ್ದರು. (ಬೆರೆನ್‌ಬಾಮ್ ಮತ್ತು ಸ್ನೈಡರ್, 1995; ಸರ್ಬಿನ್ ಮತ್ತಿತರರು., 2003). ಈ ಹುಡುಗಿಯರ ತಾಯಂದಿರು ಹುಡುಗಿಯರಿಗೆ ಹೆಚ್ಚು ಸೂಕ್ತ ಆಟಗಳನ್ನು ಆಡಲು ಪ್ರೋತ್ಸಾಹಿಸಿದ್ದರೂ, ಸ್ತ್ರೀಯರು ಆಡುವ ಆಟಿಕೆಗಳೊಂದಿಗೆ ಆಡಿದರೆ ಅವರು ಅತಿಯಾಗಿ ಮೆಚ್ಚುಗೆ ವ್ಯಕ್ತಪಡಿಸಿದ್ದರೂ, ಪುರುಷರ ಆಟಿಕೆ ಮತ್ತು ಚಟುವಟಿಕೆಗಳಿಗೆ ಬಲವಾದ ಆಯ್ಕೆ ಕಾಲಾನಂತರವೂ ಮುಂದುವರೆದಿತ್ತು. (ಪ್ಯಾಸ್ಟೆರಸ್ಕಿ ಮತ್ತಿತರರು., 2005). ಹದಿಹರೆಯದಲ್ಲಿ ಈ ಹುಡುಗಿಯರು ಇತರ ಹುಡುಗಿಯರಿಗಿಂತ ತಡವಾಗಿ ಡೇಟಿಂಗ್ ಆರಂಭಿಸಿದ್ದರು ಮತ್ತು ತಮ್ಮ ವೃತ್ತಿಯಲ್ಲಿ ನೆಲೆಯೂರುವವರೆಗೂ ಮದುವೆ ಮುಂದೂಡಬೇಕೆಂದು ಭಾವಿಸಿದ್ದರು. ಇವರಲ್ಲಿ ಹೆಚ್ಚಿನ ಪ್ರಮಾಣದ ಮಹಿಳೆಯರು (37 ಪ್ರತಿಶತ) ತಮ್ಮನ್ನು ತಾವು ಸಲಿಂಗಿಗಳೆಂದೂ ಅಥವಾ ಉಭಯಲಿಂಗಿಗಳೆಂದೂ ವರ್ಣಿಸಿದ್ದರು((ಬೆರೆನ್‌ಬಾಮ್, 1998, 2002; ಮನಿ, 1985)., ಆಂಡ್ರೋಜನ್ನಿನ ಪ್ರಭಾವಕ್ಕೆ ಒಳಗಾದ ಸ್ತ್ರೀಯರು ಸ್ಥಳವಿಸ್ತಾರದ ಸಾಮರ್ಥ್ಯದ ಪರೀಕ್ಷೆಗಳಲ್ಲಿ ಇತರ ಹುಡುಗಿಯರು ಮತ್ತು ಮಹಿಳೆಯರಿಗಿಂತ ಒಳ್ಳೆಯ ಸಾಧನೆಯನ್ನು ತೋರುತ್ತಾರೆ, ಇದು ಪ್ರಸವಪೂರ್ವದ ಅವಧಿಯಿಂದಲೇ ಪುರುಷ ಹಾರ್ಮೋನುಗಳಿಗೆ ಒಡ್ಡಿಕೊಂಡ ಸ್ತ್ರೀ ಭ್ರೂಣದ ಮಿದುಳಿನ ಮೇಲೆಯೂ "ಪುರುಷೀಕರಣ"ದ ಪರಿಣಾಮಗಳು ಕಾಣಿಸಿಕೊಳ್ಳುತ್ತವೆ ಎನ್ನುವುದನ್ನು ಸೂಚಿಸುತ್ತದೆ. ಔಷಧದ-ಪ್ರಮಾಣದ ಪರಿಣಾಮವನ್ನು ಸ್ವೀಡನ್ನಿನ ಒಂದು ಅಧ್ಯಯನವು ತೋರಿಸಿದೆ: ತೀವ್ರ ಸ್ವರೂಪದ CAH (ಗರ್ಭಸ್ಥ ಅಡ್ರೀನಲ್ ಹೈಪರ್‌ಪ್ಲಾಸಿಯಾ)  ದೋಷಗಳಿದ್ದ ಹುಡುಗಿಯರಲ್ಲಿ (ಅಂದರೆ ಅತಿಯಾದ ಜನನಪೂರ್ವ ಗಂಡು ಹಾರ್ಮೋನುಗಳ ಪ್ರಭಾವ) ಪುರುಷರ ಆಟಿಕೆಗಳು ಮತ್ತು ವೃತ್ತಿಗಳ ಬಗೆಗಿನ ಆಸಕ್ತಿ ಬಲವಾಗಿತ್ತು (ಸರ್ಬಿನ್ ಮತ್ತಿತರರು., 2003). ಹುಡುಗಿಯರ ಜನನಾಂಗಗಳು ಎಲ್ಲರಂತಿಲ್ಲ ಎನ್ನುವುದನ್ನು ಗಮನಿಸಿದ ಕುಟುಂಬಸ್ಥರು ಅದರ ಬಗೆಗೆ ಪ್ರತಿಕ್ರಿಯಿಸಿದ್ದರಬಹುದು, ಅಥವಾ ಅವರನ್ನು ಹುಡುಗರಂತೆ ಕಂಡಿರಬಹುದು, ಎಂದು ಒಬ್ಬರು ಅನುಮಾನಿಸಿದರೂ ಕೂಡಾ ಆ ಹುಡುಗಿಯರ ಪಾಲಕರೊಂದಿಗೆ ನಡೆಸಿದ ಸಂದರ್ಶನದಲ್ಲಿ ಪಾಲಕರು ಹಾಗೇನೂ ಮಾಡಿರದೇ ಇದ್ದದ್ದು ಕಂಡುಬಂದಿತ್ತು (ಎರ್‌ಹಾರ್ಡ್ ಮತ್ತು ಬೇಕರ್, 1974).

ತಮ್ಮ ಹುಟ್ಟಿಗೂ ಮೊದಲು ಟೆಸ್ಟಸ್ಟರೋನ್‌ನ ಸಾಮಾನ್ಯ ವ್ಯತ್ಯಯಗಳಿಗೆ (ಅವರ ತಾಯಿಯರು ಉತ್ಪಾದಿಸಿದ್ದದ್ದು) ಹುಡುಗಿಯರು ಗುರಿಯಾಗುವುದು ಅವರು

ಮೂರುವರೆ ವರ್ಷದ ಹೊತ್ತಿಗೆ ಆಟದಲ್ಲಿ ತೋರಿಸುವ ವರ್ತನೆಗಳಿಗೆ ಸಹ ಸಂಬಂಧ ಹೊಂದಿರುತ್ತದೆ. ಹುಟ್ಟುವ ಮೊದಲು ಸಾಮನ್ಯಕ್ಕಿಂತ ಅಧಿಕ ಪ್ರಮಾಣದ ಟೆಸ್ಟೊಸ್ಟರಾನಿಗೆ ಒಡ್ಡಿಕೊಂಡ ಹುಡುಗಿಯರು ಪುರುಷರ ಆಟಿಕೆಗಳು ಮತ್ತು ಚಟುವಟಿಕೆಗಳ ಮೇಲೆ ಟೆಸ್ಟೊಸ್ಟರಾನಿಗೆ ಕಡಿಮೆ ಒಡ್ಡಿಕೊಂಡ ಸ್ತ್ರೀ-ಲಿಂಗದ ಸಹವಯಸ್ಸಿನವರು ತೋರಿಸುವುದಕ್ಕಿಂತಲೂ ಹೆಚ್ಚಿನ ಆಸಕ್ತಿಯನ್ನು ತೋರಿಸುತ್ತಾರೆ (ಹೈನ್ಸ್ ಮತ್ತಿತರರು., 2002; ಆದರೆ ಈ ಫಲಿತಗಳನ್ನು ಮರು-ಉತ್ಪಾದಿಸಲು ವಿಫಲವಾದದ್ದರ ಬಗೆಗೆ ತಿಳಿದುಕೊಳ್ಳಲು ನಿಕ್‌ಮೇಯರ್ ಮತ್ತಿತರರು., 2005 ಅನ್ನೂ ನೋಡಿ). ನಾವು 1) ಸ್ತ್ರೀ ಮತ್ತು ಪುರುಷರ ನಡುವಿನ ಕೆಲ ವ್ಯತ್ಯಾಸಗಳು ಹಾರ್ಮೋನುಗಳ ಮಧ್ಯಸ್ಥಿಕೆಯಿಂದ ಆಗಿರುವ ಸಾಧ್ಯತೆ ಇರುತ್ತದೆ ಮತ್ತು ಮಿದುಳಿನ ವ್ಯವಸ್ಥೆಯ ಮೇಲೂ ಅದರ ಪರಿಣಾಮವಾಗಬಹುದು (ಕಾಹಿಲ್, 2005) ಎಂಬ, ಮತ್ತು ಆ ಮೂಲಕ 2) ಜನನಪೂರ್ವ ಅವಧಿಯಲ್ಲಿ ಪುರುಷ ಲಿಂಗ ಹಾರ್ಮೋನುಗಳಿಗೆ ಅಧಿಕ ಪ್ರಮಾಣದಲ್ಲಿ ಒಡ್ಡಿಕೊಳ್ಳುವುದು ಸ್ತ್ರೀಯರ ಮನೋಧರ್ಮಗಳು, ಆಸಕ್ತಿಗಳು, ಮತ್ತು ಚಟುವಟಿಕೆಗಳ ಮೇಲೆ ಪರಿಣಾಮ ಬೀರುತ್ತದೆ ಎಂಬ ಸಾಧ್ಯತೆಗಳನ್ನು ಗಂಭೀರವಾಗಿ ಪರಿಗಣಿಸಬೇಕು

**ಸಾಮಾಜಿಕ ಹಣೆಪಟ್ಟಿಯ ಪ್ರಭಾವಗಳಿಗೆ ಸಾಕ್ಷ್ಯ**

ಜೈವಿಕ ಬಲಗಳು ಗಂಡು ಮತ್ತು ಹೆಣ್ಣು ಮಕ್ಕಳನ್ನು ವಿಭಿನ್ನ ಚಟುವಟಿಕೆ ಮತ್ತು ಆಸಕ್ತಿಗಳತ್ತ ಹೊರಳಿಸಿದರೂ, ಮನಿ ಮತ್ತು ಎರ್‌ಹಾರ್ಡ್ (1972) ಅವರು ಸಾಮಾಜಿಕ ಹಣೆಪಟ್ಟಿಯ (ಲೇಬಲಿಂಗ್) ಪ್ರಭಾವವೂ ಮುಖ್ಯ- ಎಷ್ಟರಮಟ್ಟಿಗೆ ಎಂದರೆ- ಅವು ಜೈವಿಕ ಪ್ರವೃತ್ತಿಗಳನ್ನು ಮಾರ್ಪಡಿಸುವ ಅಥವಾ ತಿರುವು ಮುರುವು ಮಾಡುವಷ್ಟು ಮುಖ್ಯವಾಗಿವೆ ಎಂದು ಒತ್ತಿ ಹೇಳುತ್ತಾರೆ. ಹಿಂದೆ, ಆಂಡ್ರೊಜನ್ನಿನ ಪ್ರಭಾವದ ಹುಡುಗಿಯರು ಹುಟ್ಟಿದಾಗ ಅವರನ್ನು ಹುಡುಗರೆಂದು ಗುರುತಿಸಲಾಗುತ್ತಿತ್ತು ಮತ್ತು ಅವರ ಅಪಸಾಮಾನ್ಯತೆಯು ಬೆಳಕಿಗೆ ಬರುವ ತನಕ ಅವರನ್ನು ಅದೇ ರೀತಿ ಬೆಳೆಸಲಾಗುತ್ತಿತ್ತು. ಮನಿ ಮತ್ತು ಎರ್‌ಹಾರ್ಡ್ ವರದಿ ಮಾಡುವ ಹಾಗೆ, ಈ ದೋಷವನ್ನು ಪತ್ತೆ ಹಚ್ಚುವುದು ಮತ್ತು ( ಶಸ್ತ್ರಚಿಕಿತ್ಸೆ ಅಥವಾ ಲಿಂಗತ್ವ ಮರುನಿಯೋಜನೆಯಿಂದ) ಅದನ್ನು ಸರಿಪಡಿಸುವುದರಿಂದ, ಬಹಳ ಕಡಿಮೆ ಜನಕ್ಕೆ ಸಮಾಯೋಜನೆಯ ಸಮಸ್ಯೆಯಾಗುತ್ತದೆ, ಆದರೆ ಲಿಂಗ ಬದಲಾವಣೆಯು *18 ತಿಂಗಳ ಒಳಗೆ ಆಗಬೇಕು*. 3 ವರ್ಷದ ನಂತರ ಲಿಂಗತ್ವ ಮರುನಿಯೋಜನೆ ಅತ್ಯಂತ ಕಷ್ಟಕರ ಏಕೆಂದರೆ ಅನುವಂಶಿಕವಾಗಿ ಸ್ತ್ರೀ ಆಗಿರುವವರು ಧೀರ್ಘವಾದ ಪುರುಷ ಲಿಂಗತ್ವ ಪ್ರರೂಪಣೆ ಅನುಭವಿಸಿದ್ದು ತಮ್ಮನ್ನು ಹುಡುಗ ಎಂದು ಗುರುತಿಸಿಕೊಂಡು ಬಿಟ್ಟಿರುತ್ತಾರೆ ಆದ್ದರಿಂದ ಲಿಂಗತ್ವ ಅನನ್ಯತೆಯನ್ನು ಸ್ಥಾಪಿಸಲು 18 ತಿಂಗಳು ಮತ್ತು 3 ವರ್ಷದ ನಡುವೆ ಒಂದು "ನಿರ್ಣಾಯಕ ಅವಧಿ" ಎಂಬುದು ಇರುತ್ತದೆ ಎಂದು ಈ ದತ್ತಾಂಶದ ಮೂಲಕ ಮನಿ ಮತ್ತು ಎರ್‌ಹಾರ್ಡ್ ಅವರು ತೀರ್ಮಾನಿಸಿದರು. 'ಸಂಶೋಧನೆಯ ಲಕ್ಷ್ಯ ಬಾಕ್ಸಿನಲ್ಲಿ (Focus on research box) ಚಿತ್ರಿಸಿದ ಹಾಗೆ ಮೊದಲ 3 ವರ್ಷಗಳನ್ನು *ಸೂಕ್ಷ್ಮ* ಅವಧಿ ಎಂದು ಕರೆಯುವುದು ಹೆಚ್ಚು ಸೂಕ್ತವಾಗುತ್ತದೆ, ಏಕೆಂದರೆ ನಂತರ ಹರೆಯದಲ್ಲಿ ಮತ್ತೊಂದು ಹೊಸ ಅನನ್ಯತೆಯನ್ನು ಹೊಂದುವ ಸಾಧ್ಯತೆ ಇರುತ್ತದೆ ಎಂದು ಬೇರೆ ಸಂಶೋಧಕರು ಪ್ರತಿಪಾದಿಸಿದ್ದಾರೆ. ಅದೇನೇ

ಇದ್ದರೂ, ಮನಿಯವರ ಫಲಿತಾಂಶಗಳು ಆರಂಭಿಕ ಸಾಮಾಜಿಕ ಹಣೆಪಟ್ಟಿ ಮತ್ತು ಲಿಂಗತ್ವ-ಪಾತ್ರ ಸಾಮಾಜಿಕೀಕರಣ ಮಗುವಿನ ಲಿಂಗತ್ವ ಅನನ್ಯತೆ ಮತ್ತು ಪಾತ್ರಗಳ ಆಯ್ಕೆಗಳನ್ನು ನಿರ್ಧರಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ ಎಂದು ಸೂಚಿಸುತ್ತವೆ.

**ಸಾಂಸ್ಕೃತಿಕ ಪ್ರಭಾವಗಳು**

ಹೆಚ್ಚಿನ ಸಮಾಜಗಳು ಗಂಡು ಮಕ್ಕಳಲ್ಲಿ ಕಾರಣಭೂತ ಗುಣಲಕ್ಷಣಗಳನ್ನೂ ಮತ್ತು ಹೆಣ್ಣುಮಕ್ಕಳಲ್ಲಿ ಅಭಿವ್ಯಂಜಕ ಲಕ್ಷಣಗಳನ್ನೂ ಪ್ರೋತ್ಸಾಹಿಸುತ್ತವೆ ಎಂಬ ಸಂಗತಿ, ಕೆಲವು ಸಿದ್ಧಾಂತಿಗಳನ್ನು ಸಾಂಪ್ರದಾಯಿಕ ಲಿಂಗತ್ವ-ಪಾತ್ರಗಳು ನೈಸರ್ಗಿಕ ವ್ಯವಸ್ಥೆಯ ಭಾಗಗಳಾಗಿವೆ– ಅವು ಜೀವವಿಕಾಸ ಚರಿತ್ರೆಯ ಉತ್ಪನ್ನಗಳಾಗಿವೆ ಎಂಬ ತೀರ್ಮಾನಕ್ಕೆ ತಲುಪಿಸಿವೆ (ಆರ್ಚರ್, 1996; ಬಸ್, 1995). ಆದರೂ ಸಂಸ್ಕೃತಿಗಳಲ್ಲಿ ಜನರು ಹುಡುಗರು ಮತ್ತು ಹುಡುಗಿಯರಿಂದ ಏನು ನಿರೀಕ್ಷಿಸುತ್ತಾರೆ ಎನ್ನುವುದರಲ್ಲಿ ಗಣನೀಯ ವ್ಯತ್ಯಾಸಗಳಿವೆ (ವೈಟಿಂಗ್ ಮತ್ತು ಎಡ್ವರ್ಡ್ಸ್, 1988). ಮಾರ್ಗರೆಟ್ ಮೀಡ್ ಅವರ (1935) ಮಾದರಿ ಎನಿಸಿರುವ ನ್ಯೂ ಗಿನಿಯ ಮೂರು ಆದಿವಾಸಿ ಬುಡಕಟ್ಟಿನ ಅಧ್ಯಯನವನ್ನು ಪರಿಗಣಿಸಿ. ಅರಾಪೇಶ್ ನಲ್ಲಿ ಸ್ತ್ರೀ ಮತ್ತು ಪುರುಷರಿಬ್ಬರಿಗೂ ಸಹಕರಿಸುವುದು, ಆಕ್ರಮಣ ಮಾಡದಿರುವುದು, ಮತ್ತು ಇತರರ ಅಗತ್ಯಗಳಿಗೆ ಸಂವೇದನಾಶೀಲತೆ ಕಲಿಸಲಾಗುತ್ತದೆ. ಇಂತಹ ವರ್ತನಾ ವ್ಯಕ್ತಿಚಿತ್ರಣವನ್ನು ಪಾಶ್ಚಾತ್ಯ ಸಂಸ್ಕೃತಿಗಳಲ್ಲಿ "ಅಭಿವ್ಯಂಜಕ" ಅಥವಾ "ಸ್ತ್ರೀತ್ವ ಎಂದು ಪರಿಗಣಿಸಲಾಗುತ್ತದೆ. ಮಂಡುಗುಮರ್ ಬುಡಕಟ್ಟಿನ ಪುರುಷ ಮತ್ತು ಸ್ತ್ರೀಯರಿಬ್ಬರೂ ಸ್ವಸಮರ್ಥನೆ, ಆಕ್ರಮಣಶೀಲತೆ, ಮತ್ತು ಅಂತರವ್ಯಕ್ತೀಯ ಸಂಬಂಧಗಳಲ್ಲಿ ಸಂವೇಗಾತ್ಮಕ ನಿರ್ಭಾವುಕತೆ ಹೊಂದಿರಬೇಕೆಂದು ನಿರೀಕ್ಷಿಸಲಾಗುತ್ತದೆ- ಪಾಶ್ಚಾತ್ಯರ ಮಾನದಂಡಗಳ ಪ್ರಕಾರ ಇದು ಪುರುಷತ್ವ ವರ್ತನೆಗಳ ಮಾದರಿಯಾಗಿದೆ. ಕೊನೆಗೆ ಚಾಂಬುಲಿ ಬುಡಕಟ್ಟಿನಲ್ಲಿ ಪಾಶ್ಚಾತ್ಯ ಸಮಾಜಗಳಲ್ಲಿ ಕಂಡುಬರುವ ಲಿಂಗತ್ವ-ಪಾತ್ರಗಳ ವಿಕಾಸಕ್ಕೆ ವಿರುದ್ಧವಾದ ಮಾದರಿ ಕಂಡುಬಂದಿತ್ತು: ಪುರುಷರು ನಿಷ್ಕ್ರಿಯರು, ಭಾವನಾತ್ಮಕವಾಗಿ ಅವಲಂಬಿತರೂ, ಸಾಮಾಜಿಕವಾಗಿ ಸಂವೇದನಾಶೀಲರೂ ಆಗಿದ್ದರು, ಮತ್ತು ಸ್ತ್ರೀಯರು ಪ್ರಬಲರೂ, ಸ್ವತಂತ್ರರೂ ಮತ್ತು ಸ್ವಸಮರ್ಥನೆ ಮಾಡುವವರೂ ಆಗಿದ್ದರು. ಅಂದರೆ ಈ ಮೂರೂ ಆದಿವಾಸಿ ಬುಡಕಟ್ಟಿನ ಸದಸ್ಯರು ತಮ್ಮ ಸಂಸ್ಕೃತಿಗಳಲ್ಲಿ ಸಾಮಾಜಿಕವಾಗಿ ವಿಧಾಯಕವಾಗಿದ್ದ ಲಿಂಗತ್ವ-ಪಾತ್ರಗಳ ಅನುಸಾರವಾಗಿ ಬೆಳೆದಿದ್ದರು-ಈ ಯಾವವೂ ಪಾಶ್ಚಾತ್ಯ ಸಮಾಜಗಳಲ್ಲಿ ಕಂಡುಬರುವ ಸ್ತ್ರೀ/ಅಭಿವ್ಯಂಜಕ ಮತ್ತು ಪುರುಷ/ಕಾರಣಭೂತ ಮಾದರಿಗಳೊಂದಿಗೆ ಸದೃಶವಾಗಿರಲಿಲ್ಲ. ಇದರರ್ಥ, ಸಾಮಾಜಿಕ ಪ್ರಭಾವಗಳು ಲಿಂಗತ್ವ ಪ್ರರೂಪಣಕ್ಕೆ ಬಲವಾದ ಕೊಡುಗೆ ನೀಡುತ್ತವೆ ಎಂಬುದು ಸ್ಪಷ್ಟವಾಗುತ್ತದೆ.



**ಛಾಯಾಚಿತ್ರ**: ಲಿಂಗತ್ವ- ಪಾತ್ರಗಳ ವರ್ತನೆ ಬಹಳಷ್ಟು ಸಲ ಸಂಸ್ಕೃತಿಗೆ ನಿರ್ದಿಷ್ಟವಾಗಿರುತ್ತವೆ. ಪೆರು ದೇಶದಲ್ಲಿನ ಹೆಚ್ಚಿನ ಬಾಲಕರಂತೆ ಈ ಬಾಲಕನು ನಿತ್ಯವೂ ಬಟ್ಟೆ ತೊಳೆಯುತ್ತಾನೆ ಮತ್ತು ಇತರ ಮನೆಗೆಲಸಗಳಲ್ಲಿ ತೊಡಗಿಕೊಳ್ಳುತ್ತಾನೆ.

ಒಟ್ಟಿನಲ್ಲಿ, ಮನಿ ಮತ್ತು ಎರ್‌ಹಾರ್ಡ್ ರವರ ಜೀವಸಾಮಾಜಿಕ ಸಿದ್ಧಾಂತವು ಪಾಲಕರು ಮತ್ತು ಇತರ ಸಾಮಾಜಿಕ ಕರ್ತೃಗಳು ಒಂದು ಮಗುವು ಜನಿಸಿದಾಗ ಹೇಗೆ ಗುರುತಿಸುತ್ತಾರೆ ಮತ್ತು ಅದು ನೇರವಾಗಿ ವರ್ತನೆಯನ್ನು ಪ್ರಭಾವಿಸಬಹುದು ಎಂದು ಆರಂಭಿಕ ಹಂತದ ಜೈವಿಕ ವಿಕಾಸದ ಮಹತ್ವಕ್ಕೆ ಒತ್ತನ್ನು ನೀಡುತ್ತದೆ. ಆದರೂ. ಮಕ್ಕಳು ಹುಡುಗನೆಂದೋ ಇಲ್ಲ ಹುಡುಗಿಯೆಂದೋ ಸಾಮಾಜಿಕೀಕರಣಗೊಳ್ಳುತ್ತಾರೋ ಎನ್ನುವದೂ ಅವರ ಲಿಂಗತ್ವ-ಪಾತ್ರ ವಿಕಾಸವನ್ನು ಬಲವಾಗಿ ಪ್ರಭಾವಿಸುತ್ತವೆ – ಸಂಕ್ಷಿಪ್ತವಾಗಿ, ಜೈವಿಕ ಮತ್ತು ಸಾಮಾಜಿಕ ಪ್ರಭಾವಗಳು ಪರಸ್ಪರ ಪ್ರತಿಕ್ರಿಯಿಸುತ್ತವೆ. ಆದರೆ, ಈ ಅನ್ಯೋನ್ಯಕ್ರಿಯೆಯು ಹೇಗೆ ನಡೆಯುತ್ತದೆ?

## ಸಂಶೋಧನೆಯ ಲಕ್ಷ್ಯ

### ಜೈವಿಕತೆಯೇ ನಿಯತಿಯೇ? ಲಿಂಗ ಮರುನಿಯೋಜನೆಯ ಅನರ್ಥಗಳು

ಜೈವಿಕ ಲಿಂಗ ಮತ್ತು ಸಾಮಾಜಿಕ ಹಣೆಪಟ್ಟಿಗಳು ಕಾದಾಡಿದಾಗ ಯಾವುದು ಗೆಲ್ಲುತ್ತದೆ? ಸಮರೂಪ ಅವಳಿಗಳಲ್ಲಿ ಒಬ್ಬನ ಶಿಶ್ನವು ಸುನ್ನತಿಯ ಸಂದರ್ಭದಲ್ಲಿ ಸರಿಪಡಿಸಲಾರದಷ್ಟು ಹಾಳಾದ ಪ್ರಕರಣವನ್ನು ಪರಿಗಣಿಸಿ (ಮನಿ ಮತ್ತು ಟಕ್ಕರ್, 1975) ವೈದ್ಯರ ಸಲಹೆಯ ಮೇರೆಗೆ ಮತ್ತು ಪರ್ಯಾಯ ಸಾಧ್ಯತೆಗಳನ್ನು ಪರಿಗಣಿಸಿ ಪಾಲಕರು ಮಗನ ಮಗನ ಪುರುಷತ್ವದ ಎಲ್ಲಾ ಬಾಹ್ಯ ಸಾಕ್ಷ್ಯಗಳನ್ನು ಶಸ್ತ್ರಚಿಕಿತ್ಸೆಯ ಮೂಲಕ ತೆಗೆಸಲು ಒಪ್ಪಿಕೊಂಡರು. ಶಸ್ತ್ರಚಿಕಿತ್ಸೆಯ ನಂತರ ಕುಟುಂಬವು ಆ ಮಗುವನ್ನು ಹೆಣ್ಣು ಮಗುವಿನಂತೆ ಬೆಳೆಸತೊಡಗಿತು, ಅವಳ ಕೂದಲಿನ ಶೈಲಿಯನ್ನು ಬದಲಾಯಿಸಿದರು, ನೆರಿಗೆಗಳಿರುವ ಬೌಸುಗಳನ್ನು ಹಾಕತೊಡಗಿದರು, ಹುಡುಗಿಯಂತೆ ಉಡುಪುಗಳನ್ನು ಹಾಕತೊಡಗಿದರು ಮತ್ತು ಆಟವಾಡಲು ಅವಳಿಗೆ ಹುಡುಗಿಯರ ಆಟಿಕೆಗಳನ್ನು ಕೊಡತೊಡಗಿದರು, ಒಬ್ಬ ಸ್ತ್ರೀಯಂತೆ ಮೂತ್ರ ವಿಸರ್ಜಿಸುವುದು ಇತ್ಯಾದಿ ವರ್ತನೆಗಳನ್ನು ಕಲಿಸಿದರು. ಮಗುವಿಗೆ ಐದು ವರ್ಷಗಳಾಗುವ ಹೊತ್ತಿಗೆ ಅವಳು ತನ್ನಂತೆ ಕಾಣುವ ಅವಳಿ ಸಹೋದರನಿಗಿಂತ ಬಹಳ ಭಿನ್ನವಾಗಿದ್ದಳು ಎಂದು ಮನಿ ವರ್ಣಿಸುತ್ತಾರೆ. ಅವಳಿಗೆ ತಾನು ಹೆಣ್ಣು ಎನ್ನುವುದರ ಅರಿವಿತ್ತು ಎಂದು ಹೇಳಲಾಗುತ್ತದೆ ಮತ್ತು ತನ್ನ ಸಹೋದರನಿಗಿಂತ ಹೆಚ್ಚು ಅಚ್ಚುಕಟ್ಟಾಗಿ, ಕೋಮಲವಾಗಿದ್ದಳು. ಇಲ್ಲಿ ಲಿಂಗಸಂಬಂಧಿತ ಗುರುತು ನೀಡುವಿಕೆಯ ಮತ್ತು ಲಿಂಗತ್ವ ಪಾತ್ರಗಳ ಸಾಮಾಜಿಕೀಕರಣದ ಬಲವು ಜೈವಿಕಪ್ರವೃತ್ತಿಗಳನ್ನು ಮೀರಿಸುತ್ತದೆ ಎನ್ನುವದಕ್ಕೆ ಪುರಾವೆ ಸಿಗುತ್ತದೆ. ಅಥವಾ, ನಿಜಕ್ಕೂ ಈ ಪ್ರಕರಣವು ಹಾಗೆ ಆಯಿತೆ?

“ಬ್ರೂಸ್”ನು “ಬ್ರೆಂಡಾ” ಆಗಿ ಬದಲಾದ ಈ ಕತೆಯ ಜಾಡನ್ನು ಹಿಡಿದು ಅಧ್ಯಯನ ಮಾಡಿದ ಮಿಲ್ಟನ್ ಡೈಮಂಡ್ ಮತ್ತು ಸಿಗ್ಮಂಡ್ಸನ್ (1997) ರವರಿಗೆ ಈ ಕತೆಗೆ ಒಂದು ತಿರುವು ಇದ್ದದ್ದು ಗೋಚರಿಸಿತು. (ಈ ಪ್ರಕರಣವನ್ನು ಕುರಿತು ಕೊಲಾಪಿಂಟೋ ಅವರು 2000 ರಲ್ಲಿ ಪ್ರಕಟಿಸಿದ ಡಾಕ್ಯುಮೆಂಟರಿಯನ್ನು ನೋಡಿ: ಅದರಲ್ಲಿ ಈ ಪ್ರಕರಣಕ್ಕೆ ಸಂಬಂಧಿಸಿದ ಆ ವ್ಯಕ್ತಿ, ಆಕೆಯ ಪಾಲಕರು, ಸಹೋದರ ಮತ್ತು ಸಂಗಡಿಗರೊಂದಿಗೆ ನಡೆಸಿದ ಸಂದರ್ಶನಗಳ ಉದ್ಧೃತಗಳಿವೆ). ಬ್ರೆಂಡಾ ಹೇಳುವ ಹಾಗೆ ಬದಲಾದ ಆರಂಭದಿಂದಲೂ ಆಕೆಗೆ ಸ್ತ್ರೀಯರ ಆಟಿಕೆಗಳು ಮತ್ತು ಉಡುಪುಗಳು ಖುಷಿ ಕೊಟ್ಟಿರಲಿಲ್ಲ. ಆಕೆಗೆ ತನ್ನ ಸಹೋದರನ ಆಟಿಕೆಗಳು ಇಷ್ಟವಾಗುತ್ತಿತ್ತು, ಅವು ಹೇಗೆ ಕೆಲಸ ಮಾಡುತ್ತವೆ ಎಂದು ನೋಡಲು ಅವಳಿಗೆ ಬಹಳ ಆಸೆಯಾಗುತ್ತಿತ್ತು. ತಾನು ಹುಟ್ಟುವಾಗ ಗಂಡಾಗಿದ್ದೆ ಎಂಬುದು ಅರಿವಿಲ್ಲದ ಆಕೆಗೆ 10 ವರ್ಷಗಳಾಗುವ ಹೊತ್ತಿಗೆ ತಾನು ನಿಜಕ್ಕೂ ಹೆಣ್ಣಲ್ಲವೇನೋ ಎಂಬ ಅನುಮಾನ ಬಂದಿತ್ತು. ಆಕೆಗೆ ಹುಡುಗಿಯರ ಮೇಲೆ “ಭಾವನೆಗಳಿದ್ದವು”, ಮಾತ್ರವಲ್ಲ ಹುಡುಗರೊಂದಿಗೆ ಮುಷ್ಟಿಕಾಳಗವನ್ನೂ ಮಾಡುತ್ತಿದ್ದಳು, ಆದರೆ “ನಾನು ಸ್ವಲ್ಪ ವಿಲಕ್ಷಣವಾಗಿದ್ದೇನೆ ಎಂದು ಯೋಚಿಸುತ್ತಿದ್ದೆ. . .ಆದರೆ ಅದನ್ನು ಒಪ್ಪಿಕೊಳ್ಳಲು ತಯಾರಿರಲಿಲ್ಲ” ಎಂದು ಬ್ರೆಂಡಾ ಹೇಳುತ್ತಾಳೆ (ಪು.299-300). ಸ್ವಲ್ಪ-ಸ್ವಲ್ಪ ಪುರುಷನಂತೆ ಕಾಣುತ್ತಿದ್ದುದರಿಂದ ಸಮವಯಸ್ಕರಿಂದ ತಿರಸ್ಕರಿಸಲ್ಪಟ್ಟಿದ್ದು ಮತ್ತು ಇದರೊಂದಿಗೆ ಹೆಣ್ಣಿನಂತೆ ಹೆಚ್ಚು ವರ್ತಿಸಬೇಕು ಹಾಗೂ ಅವಳ ಸಂಪೂರ್ಣ ನಾರೀಕರಣಕ್ಕೆ ಶಸ್ತ್ರಚಿಕಿತ್ಸೆಯ ಮೂಲಕ ಯೋನಿ ರಚನೆಯ ಶಸ್ತ್ರಕ್ರಿಯೆಗೆ ಒಪ್ಪಿಕೋ ಎನ್ನುವ ಒತ್ತಡಗಳು ಭರಿಸಲು ಅಸಾಧ್ಯವಾಗಿದ್ದವು. ಕೊನೆಗೂ ತನ್ನ 14ನೆಯ ವಯಸ್ಸಿನಲ್ಲಿ ಬ್ರೆಂಡಾ, ಹಲವು ವರ್ಷಗಳ ಆಂತರಿಕ ತುಮುಲ ಮತ್ತು ಆತ್ಮಹತ್ಯೆಯ ಯೋಚನೆಗಳ ನಂತರ ಒಂದು ನಿರ್ಧಾರಕ್ಕೆ ಬಂದಳು: ಯೋನಿ ರಚನೆಯ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳಲು ನಿರಾಕರಿಸಿದಳು ಮತ್ತು ಸ್ತ್ರೀತ್ವ ಹಾರ್ಮೋನುಗಳನ್ನು ನಿಲ್ಲಿಸಿದಳು, ಬದಲಿಗೆ ಸ್ತನಛೇದನದ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳಲು ನಿರ್ಧರಿಸಿದಳು, ಪುರುಷತ್ವ ಹಾರ್ಮೋನುಗಳನ್ನು ಸೇವಿಸತೊಡಗಿದಳು ಮತ್ತು ಶಿಶ್ನ ರಚನೆಯ ಶಸ್ತ್ರಚಿಕಿತ್ಸೆಗೆ ಸಿದ್ಧವಾದಳು. ಮುಂದೆ ಹೊರಹೊಮ್ಮಿದ್ದು ಒಬ್ಬ ಸ್ಪುರದ್ರೂಪಿ ಯುವಕ, ಬಹಳ ಜನಪ್ರಿಯನಾಗಿ, ಹುಡುಗಿಯರನ್ನು ಡೇಟ್ ಮಾಡಿ, 25ನೇ ವಯಸ್ಸಿಗೆ ಮದುವೆಯಾಗಿ ತಾನು ಕಠಿಣ ಪ್ರಯತ್ನದಿಂದ ಪಡೆದುಕೊಂಡ ಪುರುಷ ಅನನ್ಯತೆಯ ಬಗ್ಗೆ ಪುಳಕಿತನಾಗಿದ್ದೇನೆ ಎಂದು ವರದಿಮಾಡಿದ್ದ. (ಕೊಲಾಪಿಂಟೋ, 2000). ಆದರೆ, ಆರಂಭದಲ್ಲಿ ಸಿಗುವ ಲಿಂಗ ಪಾತ್ರಗಳ ಸಾಮಾಜಿಕರಣವೇ ಎಲ್ಲಕ್ಕಿಂತ ಮುಖ್ಯವಾದ ಅಂಶ, ಅದೇ ಎಲ್ಲದೂ ಆಗಿದೆ ಎಂಬ ಗ್ರಹಿಕೆಯನ್ನೂ ನಾವು ಇಟ್ಟುಕೊಳ್ಳುವಂತಿಲ್ಲ. ಜೈವಿಕ ಅಂಶಗಳೂ ಮುಖ್ಯವೇ ಆಗುತ್ತವೆ.

ಜೈವಿಕತೆಯೂ ಮುಖ್ಯವಾಗುತ್ತದೆ ಎಂಬುದಕ್ಕೆ ಇರುವ ಸಾಕ್ಷ್ಯದ ಎರಡನೆಯ ಮೂಲವನ್ನು ಡೊಮಿನಿಕನ್ ರಿಪಬ್ಲಿಕ್‌ನಲ್ಲಿ ಜೈವಿಕವಾಗಿ ಪುರುಷರಾದ 18 ಜನರ ಒಂದು ಅಧ್ಯಯನದದಲ್ಲಿ ಕಾಣಬಹುದು. ಈ 18 ಜನರಿಗೆ TFS (Testicular Feminization Syndrome/ಸವೃಷಣ ಸ್ತ್ರೀಪರಿವರ್ತನಾ ಸಿಂಡ್ರೋಮ್) ಎಂಬ ಒಂದು ಆನುವಂಶಿಕ ವಿಶಿಷ್ಟ ಲಕ್ಷಣ ಇತ್ತು ಮತ್ತು ಅದರಿಂದಾಗಿ ಜನನಪೂರ್ವ ಅವಧಿಯಲ್ಲಿ ಪುರುಷತ್ವ ಹಾರ್ಮೋನುಗಳಿಗೆ ಅವರು ಸ್ಪಂದಿಸಲಾಗಿರಲಿಲ್ಲ (ಇಂಪರೇಟೋ-ಮೆಕ್‌ಜಿನ್ಲಿ ಮತ್ತಿತರರು.,1979). ಅನಿಶ್ಚಿತವಾದ ಜನನಾಂಗಗಳೊಂದಿಗೆ ಬದುಕನ್ನು ಆರಂಭಿಸಿದರು ಮತ್ತು ಅವರಿಗೆ ಹೆಣ್ಣುಗಳೆಂದು ಗುರುತು ನೀಡಿ, ಅವರನ್ನು ಹೆಣ್ಣುಮಕ್ಕಳಂತೆ ಬೆಳೆಸಲಾಗಿತ್ತು. ಆದರೆ ಪ್ರಾಯದಲ್ಲಿ ಉತ್ಪತ್ತಿಯಾದ ಪುರುಷ ಹಾರ್ಮೋನುಗಳಿಂದಾಗಿ ಗಡ್ಡ ಮೂಡಿ ಅವರ ಬಾಹ್ಯರೂಪವು ಪುರುಷರಂತಾಯಿತು. ಮನಿ ಮತ್ತು ಎರ್‌ಹಾರ್ಡ್ ರವರ 'ನಿರ್ಣಾಯಕ ಅವಧಿಯ ಪ್ರಾಕ್ಕಲ್ಪನೆಯ ಬೆಳಕಿನಲ್ಲಿ ನೋಡುವುದಾದರೆ, ತಮ್ಮ ಒಂದಿಡೀ ಬಾಲ್ಯವನ್ನು ಹುಡುಗಿಯಂತೆ ಕಳೆದವರು ಗಂಡಸಿನ ಬದುಕಿಗೆ ಹೇಗೆ ಹೊಂದಿಕೊಳ್ಳಲು ಸಾಧ್ಯ?

ಆಶ್ಚರ್ಯಕರವೆಂದರೆ, ಸ್ತ್ರೀಯಿಂದ ಪುರುಷರಾಗಿ ತಡವಾಗಿ ಪರಿವರ್ತನೆಗೊಂಡ ಈ 18 ಜನರಲ್ಲಿ 16 ಜನ ಅನ್ಯ-ಲಿಂಗೀಯ ಸಂಬಂಧಗಳನ್ನೂ ರಚಿಸಿಕೊಂಡು ಪುರುಷರ ಬದುಕಿಗೆ ಹೊಂದಿಕೊಂಡರು. ಉಳಿದ ಇಬ್ಬರಲ್ಲಿ ಒಬ್ಬನು ಸ್ತ್ರೀ ಅನನ್ಯತೆ ಮತ್ತು ಸ್ತ್ರೀ-ಲಿಂಗತ್ವ ಪಾತ್ರವನ್ನು ಉಳಿಸಿಕೊಂಡ, ಮತ್ತು ಇನ್ನೊಬ್ಬನು ಪುರುಷ-ಲಿಂಗ ಅನನ್ಯತೆಯನ್ನು ಒಪ್ಪಿಕೊಂಡರೂ ಸ್ತ್ರೀಯಂತೆ ಉಡುಪು ಧರಿಸುತ್ತಿದ್ದ.. ಈ ಅಧ್ಯಯನವೂ ಸಹ 'ಮಕ್ಕಳ ಮೊದಲ ಮೂರು ವರ್ಷಗಳ ಸಾಮಾಜಿಕೀಕರಣವು ಅವರ ಭವಿಷ್ಯದ

ಲಿಂಗತ್ವ-ಪಾತ್ರಗಳ ವಿಕಾಸಕ್ಕೆ ಸಂಪೂರ್ಣವಾಗಿ ನಿರ್ಣಾಯಕ' ಎಂಬ ಆಲೋಚನೆಯ ಮೇಲೆ ಸ್ಪಷ್ಟವಾಗಿ ಸಂಶಯ ಹರಡುತ್ತದೆ..ಇದು ಸಾಮಾಜಿಕ ಪ್ರಭಾವಗಳಿಗಿಂತ ಹಾರ್ಮೋನುಗಳ ಪ್ರಭಾವವು ಹೆಚ್ಚು ಮುಖ್ಯವಾಗಿರಬಹುದು ಎಂದು ಸೂಚಿಸುತ್ತದೆ.

ಆದರೆ ಇಂಪರೇಟೋ-ಮೆಕ್‌ಜಿನ್ಲೀಯವರ ತೀರ್ಮಾನಗಳನ್ನು ಪ್ರಶ್ನಿಸಲಾಗಿದೆ (ಎರ್‌ಹಾರ್ಡ್, 1985). ಈ ವ್ಯಕ್ತಿಗಳನ್ನು ಹೇಗೆ ಬೆಳೆಸಲಾಯಿತು ಎಂಬುದಕ್ಕೆ ಬಹಳ ಕಡಿಮೆ ವಿವರಗಳನ್ನು ಅವರು ಒದಗಿಸುತ್ತಾರೆ, ಮತ್ತು ಇನ್ನೊಂದು ಸಾಧ್ಯತೆಯೆಂದರೆ, ಡೊಮಿನಿಕಾದ ಪಾಲಕರಿಗೆ ತಮ್ಮ ಸಮಾಜದಲ್ಲಿ TFS ಬಹು ಸಾಮಾನ್ಯ ಎಂಬುದು ಗೊತ್ತಿದ್ದ ಕಾರಣ ಅವರು ಹುಡುಗರಾಗಿ ಪರಿವರ್ತನೆಗೊಂಡ ಈ ಹುಡುಗಿಯರನ್ನು, ಅವರು ಚಿಕ್ಕವರಿದ್ದಾಗ ಇತರ "ಹುಡುಗಿ"ಯರಿಗಿಂತ ಭಿನ್ನವಾಗಿ ನೋಡುತ್ತಿದ್ದರು ಎಂದೂ ಹೇಳಬಹುದು. ಅಷ್ಟೇ ಅಲ್ಲ, ಹುಡುಗರಾದ ಈ ಹುಡುಗಿಯರಿಗೆ ಇದ್ದ ಬಾಹ್ಯ ಜನನಾಂಗಗಳು ಸಾಧಾರಣವಾಗಿ ಕಂಡುಬರುವಂಥದ್ದಲ್ಲವಾಗಿತ್ತು, ಮತ್ತು ನದಿಯಲ್ಲಿ ಸ್ನಾನ ಮಾಡುವ ರೂಢಿಯಿದ್ದ ಡೊಮಿನಿಕಾದ ಸಮಾಜದಲ್ಲಿ ಖಂಡಿತವಾಗಿಯೂ ಈ ಹುಡುಗಿಯರು ಮಾಮೂಲಿನಂತಿರುವ ಇತರ ಹುಡುಗ-ಹುಡುಗಿಯರೊಂದಿಗೆ ತಮ್ಮನ್ನು ಹೋಲಿಸಿಕೊಂಡಿರಲೇಬೇಕು, ಮತ್ತು ತಾವು ಅವರಿಗಿಂತ "ಭಿನ್ನ"ವಾಗಿದ್ದೇವೆ ಎಂಬುದನ್ನು ಕಂಡುಕೊಂಡಿರಬೇಕು. ಆದ್ದರಿಂದ ಈ ಮಕ್ಕಳು ಸಂಪೂರ್ಣವಾಗಿ ಸ್ತ್ರೀ ಸಹಜವಾಗಿ ಬೆಳೆಸಲ್ಪಟ್ಟವರಾಗಿರಲಿಲ್ಲ ಮತ್ತು *ಬಹುಶಃ ಯಾವತ್ತೂ ಹುಡುಗಿಯರಾಗಿಯೇ ಇರುವುದಕ್ಕೆ ಪೂರ್ತಿಯಾಗಿ ಬದ್ಧರಾಗಿರಲೇ ಇಲ್ಲ*. ಹಾಗೆಂದು ನಂತರದ ಅವಧಿಯಲ್ಲಿ ಅವರು ಪುರುಷ-ಲಿಂಗದ ಪಾತ್ರಕ್ಕೆ ತಮ್ಮನ್ನು ಒಗ್ಗಿಸಿಕೊಂಡಿರುವುದಕ್ಕೆ ಹಾರ್ಮೋನುಗಳೇ ಕಾರಣ ಎಂದು ಊಹಿಸಿಲೂ ಆಗುವುದಿಲ್ಲ. ನ್ಯೂ ಗಿನಿ ದೇಶದ ಸಾಂಬಿಯಾ ಸಮುದಾಯದಲ್ಲಿ ಸ್ತ್ರೀಯರಂತೆ ಬೆಳೆಸಲ್ಪಟ್ಟ TFS ಪುರುಷರನ್ನು ಕುರಿತು ಮಾಡಿದ ಒಂದು ಅಧ್ಯಯನದಲ್ಲಿ *ಸಾಮಾಜಿಕ ಒತ್ತಡಗಳು* ಕಾರಣವಾಗಿರುವುದು ಗೊತ್ತಾಗುತ್ತದೆ – ಅವರು ಮಕ್ಕಳನ್ನು ಹೆರಲಾರರು ಎಂಬ ವಾದದ ಪರಿಣಾಮವಾಗಿ ಆ ವ್ಯಕ್ತಿಗಳು ಪ್ರೌಢಾವಸ್ಥೆಯ ನಂತರದ ಲಿಂಗ ಪರಿವರ್ತನೆಗೆ ಸಿದ್ಧವಾದರು (ಹರ್ಡ್ ಮತ್ತು ಡೇವಿಡ್ಸನ್, 1985).

ಅಂತಿಮವಾಗಿ, ಸುನ್ನತಿಯ ಸಂದರ್ಭದಲ್ಲಿ ಶಿಶ್ನ ಹಾಳಾದ ಕೆನಡಾದ ಪುಟ್ಟ ಬಾಲಕನೊಬ್ಬನನ್ನು 7 ತಿಂಗಳ ನಂತರ ಹುಡುಗಿಯಂತೆ ಬೆಳೆಸಲಾಯಿತು. ಈಗ ಅವನು ಪ್ರೌಢಳಾಗಿ ಮತ್ತು ತನ್ನ *ಸ್ತ್ರೀ*-ಲಿಂಗತ್ವ ಅನನ್ಯತೆಯೊಂದಿಗೆ ಸಾಕಷ್ಟು ನೆಮ್ಮದಿಯ ಬದುಕನ್ನು ಸಾಗಿಸುತ್ತಿದ್ದಾಳೆ (ಬ್ರಾಡ್ಲೀ ಮತ್ತಿತರರು., 1998). ಖಂಡಿತವಾಗಿಯೂ ಜೈವಿಕತೆ ನಮ್ಮ ನಿಯತಿಯೇನಲ್ಲ, ಮತ್ತು ವ್ಯಕ್ತಿಗಳ ಲಿಂಗತ್ವ ಅನನ್ಯತೆಯನ್ನು ರೂಪಿಸಲು ಸಾಮಾಜಿಕ ಪ್ರಭಾವಗಳ ಪಾತ್ರಗಳು ಮಹತ್ವದ್ದಾಗಿವೆ.

ಜನನಾಂಗಗಳ ಅಪಸಾಮಾನ್ಯತೆಯುಳ್ಳ ವ್ಯಕ್ತಿಗಳ ಇಂತಹ ಅಧ್ಯಯನಗಳು ನಮಗೆ ಕಲಿಸಿವುದು: ನಮ್ಮ ಜೈವಿಕತೆಯಿಂದ ನಮಗೆ ಸ್ತ್ರೀ ಅಥವಾ ಪುರುಷರಾಗಿ ವಿಕಾಸಹೊಂದುವ ಪ್ರವೃತ್ತಿ ಇರುತ್ತದೆ; ಜೀವನದ ಮೊದಲ ಮೂರು ವರ್ಷಗಳು ಲಿಂಗತ್ವ ಅನನ್ಯತೆಯ ಸ್ಥಾಪನೆಗೆ *ಸೂಕ್ಷ್ಮ*ವಾಗಿರುವ ಅವಧಿ ಆದರೆ ನಿರ್ಣಾಯಕವಲ್ಲ; ಜೈವಿಕತೆಯಾಗಲಿ ಸಾಮಾಜಿಕ ಗುರುತಿಸುವಿಕೆಯಾಗಲಿ ಲಿಂಗತ್ವ-ಪಾತ್ರ ವಿಕಾಸಕ್ಕೆ ಸಂಪೂರ್ಣವಾಗಿ ಕಾರಣ ಎನ್ನಲಾಗುವುದಿಲ್ಲ.

## ಒಂದು ಮನೋ-ಜೀವಸಾಮಾಜಿಕ ದೃಷ್ಟಿಕೋನ

ಡಯಾನೆ ಹಾಲ್ಪರ್ನ್ (1997) ಹೇಗೆ ಪ್ರಕೃತಿ ಮತ್ತು ಪೋಷಣೆ ಒಟ್ಟಾಗಿ ಲಿಂಗತ್ವ ಪ್ರರೂಪಿತ ಗುಣಲಕ್ಷಣಗಳ ವಿಕಾಸವನ್ನು ಪ್ರಭಾವಿಸಬಹುದು ಎಂದು ವಿವರಿಸಲು ಒಂದು **ಮನೋ-ಜೀವಸಾಮಾಜಿಕ ಮಾದರಿ**ಯನ್ನು ಮುಂದಿಟ್ಟರು. ಈ ಮಾದರಿಯ ಪ್ರಕಾರ ಜನನಪೂರ್ವದಲ್ಲಿನ ಸ್ತ್ರೀ ಅಥವಾ ಪುರುಷ ಹಾರ್ಮೋನುಗಳ ಪ್ರಭಾವ ಸ್ತ್ರೀ ಅಥವಾ ಪುರುಷರ ಮಿದುಳಿನ ವ್ಯವಸ್ಥೆಯನ್ನು ಪ್ರಭಾವಿಸಿ ಹುಡುಗರು, ಉದಾಹರಣೆಗೆ, ಹೆಚ್ಚು ದೇಶಿಕ ಚಟುವಟಿಕೆಗಳನ್ನು ಗ್ರಹಿಸುವಂತೆ, ಮತ್ತು ಹುಡುಗಿಯರು ಸೌಮ್ಯವಾದ ಶಾಬ್ದಿಕ ವಿನಿಮಯಕ್ಕೆ ಈಡಾಗುವಂತೆ ಮಾಡುತ್ತದೆ. ಹೀಗೆ ಹೆಚ್ಚಿದ ಸೂಕ್ಷ್ಮತೆಗಳು ಗಂಡು ಮತ್ತು ಹೆಣ್ಣುಮಕ್ಕಳಿಗೆ ಹೆಚ್ಚು ಸೂಕ್ತವಾದ ಅನುಭವಗಳ ಬಗ್ಗೆ ಇತರರ ನಂಬಿಕೆಗಳೊಂದಿಗೆ ಸೇರಿಕೊಂಡರೆ ಅದರರ್ಥ ಹುಡುಗರು ಹುಡುಗಿಯರಿಗಿಂತಾ ಹೆಚ್ಚು ಸಮೃದ್ಧವಾದ ದೇಶಿಕ ಅನುಭವಗಳನ್ನು ಪಡೆಯುವ

ಸಾಧ್ಯತೆ ಇರುತ್ತದೆ (ಪಡೆದುಕೊಳ್ಳುತ್ತಾರೆ ಕೂಡಾ), ಅದೇ ಹುಡುಗಿಯರು ಹೆಚ್ಚಾಗಿ ಶಾಬ್ದಿಕ ಆಟದ ಚಟುವಟಿಕೆಗಳಿಗೆ ಒಡ್ಡಲ್ಪಡುತ್ತಾರೆ (ಬಾರ್ನ್‌ಸ್ಟೇನ್ ಮತ್ತಿತರರು., 1999). ಸಂಜ್ಞಾನಾತ್ಮಕ ನರವಿಜ್ಞಾನದ ಪ್ರಗತಿಯನ್ನು ಆಧರಿಸಿ ಹಾಲ್ಪರ್ನ್ ಅವರು, ಹುಡುಗರು ಮತ್ತು ಹುಡುಗಿಯರ ಆರಂಭಿಕ ವಿಭಿನ್ನ ಅನುಭವಗಳು ಅವರ ಅಪಕ್ವ ಮತ್ತು ತೀವ್ರವಾಗಿ ಬದಲಾಗುವ (plastic) ಮಿದುಳುಗಳಲ್ಲಿನ ನರವ್ಯೂಹದ ಪಥಗಳನ್ನು ಪ್ರಭಾವಿಸುತ್ತವೆ ಎಂದು ಪ್ರತಿಪಾದಿಸುತ್ತಾರೆ. ಮಿದುಳಿನ ಬೆಳವಣಿಗೆಗೆ ಆನುವಂಶಿಕ ಸಂಕೇತಭಾಷೆಯು (genetic code) ಕೆಲವು ಮಿತಿಗಳನ್ನು ಹೇರುತ್ತದೆಯಾದರೂ ಅದು ಮಿದುಳಿನೊಳಗಿನ "ನರತಂತುಗಳ ವ್ಯವಸ್ಥೆ" ಗೆ ಸಂಬಂಧಿಸಿದ ನಿರ್ದಿಷ್ಟ ಸೂಚನೆಗಳನ್ನು ಕೊಡುವುದಿಲ್ಲ, ಮತ್ತು ಮಿದುಳಿನ ನಿಖರವಾದ ರಚನಾ ವಿನ್ಯಾಸ ಒಬ್ಬರ ಹೊಂದುವ ಅನುಭವಗಳಿಂದ ಪ್ರಭಾವಿತವಾಗುತ್ತದೆ (ಜಾನ್ಸನ್, 1998). ಹಾಲ್ಪರ್ನ್ ಅವರ ಪ್ರಕಾರ (1997), ಆರಂಭಿಕ ದೇಶಿಕ (spatial) ಅನುಭವಗಳನ್ನು ಹೆಣ್ಣುಮಕ್ಕಳಿಗಿಂತ ಹೆಚ್ಚು ಪಡೆಯುವ ಹುಡುಗರು ದೇಶಿಕ ಕಾರ್ಯ ಮಾಡುವ ಮಿದುಳಿನ ಬಲಭಾಗದಲ್ಲಿರುವ ಪ್ರಮಸ್ತಿಷ್ಕದ ನರವ್ಯೂಹದ ಪಥಗಳು ಸಮೃದ್ಧವಾಗಿ ಬೆಳೆಸಿಕೊಳ್ಳಬಹುದು ಮತ್ತು ಆ ಮೂಲಕ ಅವರು ದೇಶಿಕ ಚಟುವಟಿಕೆಗಳು ಹಾಗೂ ಕೌಶಲ್ಯಗಳನ್ನು ಹೆಚ್ಚು ಶೀಘ್ರವಾಗಿ ಗ್ರಹಿಸಬಹುದು. ಹುಡುಗಿಯರು ಸಮೃದ್ಧವಾದ ನರಗಳ ಅಂತರಸಂಬಂಧವನ್ನು ಶಾಬ್ದಿಕ ಕಾರ್ಯನಡೆಸುವ ಎಡ ಪ್ರಮಸ್ತಿಷ್ಕ ಗೋಳದ ಪ್ರದೇಶಗಳಲ್ಲಿ ಬೆಳೆಸಿಕೊಳ್ಳುವುದರ ಮೂಲಕ ಶಾಬ್ದಿಕ ಚಟುವಟಿಕೆಗಳು ಮತ್ತು ಶಾಬ್ದಿಕ ಕೌಶಲ್ಯಗಳಿಗೆ ಹೆಚ್ಚು ಗ್ರಹಿಕೆ ತೋರಬಹುದು. ಮನೋಜೀವ ಸಾಮಾಜಿಕ ದೃಷ್ಟಿಕೋನದಿಂದ ಪ್ರಕೃತಿ ಮತ್ತು ಪರಿಸರ ಒಂದನ್ನೊಂದು ಪೋಷಿಸುತ್ತವೆ ಮತ್ತು ವಾಸ್ತವವಾಗಿ ಅವುಗಳನ್ನು ಪ್ರತ್ಯೇಕಿಸಲು ಸಾಧ್ಯವಿಲ್ಲ. . ಹಾಲ್ಪರ್ನ್ ಅವರ ಮಾತುಗಳಲ್ಲೇ ಹೇಳುವುದಾದರೆ, "ಜೈವಿಕತೆ ಮತ್ತು ಪರಿಸರ ಒಂದೇ ಹೃದಯವನ್ನು ಹಂಚಿಕೊಂಡು ಬೆಸೆದುಕೊಂಡಿರುವ ಅವಳಿಗಳಂತೆ ಅವಿಚ್ಛಿನ್ನವಾದದ್ದು" (ಪು.1097).

ಜೈವಿಕಸಾಮಾಜಿಕ ಸಿದ್ಧಾಂತ ಮತ್ತು ಮನೋಜೀವ ಸಾಮಾಜಿಕ ಮಾದರಿಗಳೆರಡೂ ಮಾಡದಿರುವುದು ಏನೆಂದರೆ, ಮಕ್ಕಳಲ್ಲಿ ಹೊರಹೊಮ್ಮುವ ಲಿಂಗತ್ವ ಅನನ್ಯತೆ ಮತ್ತು ಲಿಂಗತ್ವ-ಪ್ರರೂಪಿತ ವರ್ತನೆಯನ್ನು ಬಹಳ ಗಾಢವಾಗಿ ಪ್ರಭಾವಿಸುವ ನಿಖರವಾದ ಸಾಮಾಜಿಕ ಪ್ರಕ್ರಿಯೆಗಳನ್ನು ಖಚಿತಗೊಳಿಸುವುದಿರುವುದು. ಈಗ ನಾವು ಲಿಂಗತ್ವ ಪ್ರರೂಪಣದ ಸಾಮಾಜಿಕ ಸಿದ್ಧಾಂತಗಳತ್ತ ತಿರುಗೋಣ, ಅವುಗಳಲ್ಲಿ ಸಿಗ್ಮಂಡ್ ಫ್ರಾಯ್ಡ್ ರವರ ಮನೋವಿಶ್ಲೇಷಣಾ ಮಾರ್ಗವು ಮೊದಲನೆಯದು.

> **ಮನೋ-ಜೀವಸಾಮಾಜಿಕ ಮಾದರಿ**: ಕೆಲವು ಆರಂಭಿಕ ಅನುಭವಗಳು ಮಿದುಳಿನ ಸಂಘಟನೆಯನ್ನು ಪ್ರಭಾವಿಸಿ ಅದರಿಂದ ಭವಿಷ್ಯದಲ್ಲಿ ಅವನ್ನೇ ಹೋಲುವ ಅನುಭವಗಳಿಗೆ ಸಂವೇದನಾಶೀಲತೆ ಹುಟ್ಟಿಸುತ್ತದೆ ಎನ್ನುವ ಒಂದು ಪ್ರಕೃತಿ-ಪೋಷಣೆ ಅಂತರಕ್ರಿಯೆಯ ದೃಷ್ಟಿಕೋನ.

## ಫ್ರಾಯ್ಡ್‌ನ ಮನೋವಿಶ್ಲೇಷಣಾ ಸಿದ್ಧಾಂತ

ಸಿಗ್ಮಂಡ್ ಫ್ರಾಯ್ಡ್ ಲೈಂಗಿಕತೆ (ಕಾಮೇಚ್ಛೆ) ಜನ್ಮಜಾತವಾದದ್ದು ಎಂದು ಆಲೋಚಿಸಿದ್ದ. ಆದರೆ ಒಬ್ಬರ ಲಿಂಗತ್ವ ಅನನ್ಯತೆ ಮತ್ತು ಒಂದು ಲಿಂಗತ್ವ-ಪಾತ್ರಕ್ಕೆ ಆದ್ಯತೆ ಶಿಶ್ನ ಹಂತದಲ್ಲಿ ಮಕ್ಕಳು ಸಮ-ಲಿಂಗೀಯ ಪಾಲಕರ ಮೇಲ್ಪಂಕ್ತಿಯ ಅನುಕರಣೆ ಮತ್ತು ಅವರೊಡನೆ ಗುರುತಿಸಿಕೊಳ್ಳಲು ಪ್ರಾರಂಭಿಸಿದಾಗ ಹೊರಹುಮ್ಮುತ್ತದೆ. ನಿರ್ದಿಷ್ಟವಾಗಿ, 3 ರಿಂದ 6 ವರ್ಷದ ಒಳಗಿನ ಬಾಲಕನು ಯಾವ ಹಂತದಲ್ಲಿ ತನ್ನ ತಾಯಿಯೆಡೆಗಿನ ಅಗಮ್ಯ ಇಚ್ಛೆಯನ್ನು ತ್ಯಜಿಸುವ ಒಂದು ಮಾರ್ಗವಾಗಿ ತನ್ನ ತಂದೆಯೊಂದಿಗೆ ತನ್ನನ್ನು **ಗುರುತಿಸಿಕೊಳ್ಳುವ** ಒತ್ತಡಕ್ಕೆ ಸಿಲುಕುತ್ತಾನೋ, ಮತ್ತು ತನ್ನ **ಶಿಶ್ನಲೋಪ ಆತಂಕ ವ**ನ್ನು ತಗ್ಗಿಸಿಕೊಂಡು ಆ ಮೂಲಕ ತನ್ನ **ಈಡಿಪಸ್ **ಭಾವಗ್ರಂಥಿ**ಯನ್ನು ಪರಿಹರಿಸಿಕೊಳ್ಳುತ್ತಾನೋ, ಆ ಹಂತದಲ್ಲಿ ಪುರುಷ ಗುಣಲಕ್ಷಣಗಳು ಮತ್ತು ವರ್ತನೆಗಳನ್ನು ಅವನು ಆಂತರೀಕರಣ ಮಾಡಿಕೊಳ್ಳುತ್ತಾನೆ. ಆದರೆ ಚಿಕ್ಕ ಬಾಲಕಿಗೆ ಲಿಂಗತ್ವ ಪ್ರರೂಪಣದ ಪ್ರಕ್ರಿಯೆಯು ಕಷ್ಟವಾಗುತ್ತದೆ ಎಂದು ಫ್ರಾಯ್ಡ್ ನಂಬಿದ್ದ –ಬಾಲಕಿಗೆ ಮೊದಲೇ ಶಿಶ್ನವಿರುವುದಿಲ್ಲ, ಈಗಾಗಲೇ ಶಿಶ್ನಲೋಪವಾಗಿರುವುದರಿಂದ ಯಾವುದೇ ಪ್ರಮುಖವಾದ ಭಯ ಅವಳನ್ನು ತನ್ನ ತಾಯಿಯೊಂದಿಗೆ ಗುರುತಿಸಿಕೊಳ್ಳಲು ಒತ್ತಾಯಿಸಿ **ಎಲೆಕ್ಟ್ರಾ ಭಾವಗ್ರಂಥಿ**ಯನ್ನು ಪರಿಹರಿಸಿಕೊಳ್ಳುವಂತೆ ಮಾಡುವುದಿಲ್ಲ. ಅಂದಮೇಲೆ ಒಂದು ಹೆಣ್ಣು ಮಗುವು ಸ್ತ್ರೀತ್ವ ಪಾತ್ರವನ್ನು ಬೆಳೆಸಿಕೊಳ್ಳಲು ಆಯ್ದುಕೊಳ್ಳುವುದು ಏಕೆ? ಇದಕ್ಕೆ ಫ್ರಾಯ್ಡ್ ಹಲವು ಸೂಚನೆಗಳನ್ನು ಮುಂದಿಡುತ್ತಾನೆ. ಅವುಗಳಲ್ಲಿ ಒಂದು – ಹುಡುಗಿಯ ವಾತ್ಸಲ್ಯದ ವಸ್ತುವಾದ ಅವಳ ತಂದೆ ಅವಳಲ್ಲಿ ಹೆಣ್ಣಿನ ವರ್ತನೆಯನ್ನು ಪ್ರೋತ್ಸಾಹಿಸುತ್ತಾನೆ – ಇದು ಹುಡುಗಿಗೆ ಸ್ತ್ರೀತ್ವದ ಮಾದರಿಯಾಗಿರುವ ತಾಯಿಯತ್ತ ಆಕರ್ಷಣೆ ಹೆಚ್ಚಿಸುತ್ತದೆ. ತಂದೆಯನ್ನು ಮೆಚ್ಚಿಸಲು ( ಅಥವಾ ತಂದೆಯನ್ನು ಹೊಂದುವುದು ಅಸಾಧ್ಯವೆಂದು ಮನಗಂಡಮೇಲೆ, ಇತರ ಪುರುಷರೊಡನೆ ಸಂಬಂಧಗಳಿಗೆ ಸಿದ್ಧಳಾಗಲು) ಹುಡುಗಿ ತನ್ನ ತಾಯಿಯ ಸ್ತ್ರೀತನದ ಗುಣಲಕ್ಷಣಗಳನ್ನು ಅಳವಡಿಸಿಕೊಳ್ಳಲು ಪ್ರೇರೇಪಿತಳಾಗುತ್ತಾಳೆ ಮತ್ತು ಲಿಂಗತ್ವ ಪ್ರರೂಪಿತಳಾಗುತ್ತಾಳೆ. (ಫ್ರಾಯ್ಡ್, 1924/1961).

ಮಕ್ಕಳು ಲಿಂಗತ್ವ ರೂಢಮಾದರಿಗಳನ್ನು ತ್ವರಿತವಾಗಿ ಕಲಿಯತೊಡಗುವುದು, ಲಿಂಗತ್ವ ಪ್ರರೂಪಿತ ಜೊತೆಗಾರರನ್ನು ಮತ್ತು ಚಟುವಟಿಕೆಗಳ ಆಯ್ಕೆಗಳನ್ನು ರೂಪಿಸಿಕೊಳ್ಳತೊಡಗುವುದು ಹೆಚ್ಚುಕಡಿಮೆ ಫ್ರಾಯ್ಡ್ ಸೂಚಿಸಿದ ವಯೋಮಿತಿಯಲ್ಲಿಯೇ ಎನ್ನುವುದು ನಿಜವಾದರೂ ಲಿಂಗತ್ವ ಪ್ರರೂಪಣೆಯ ಮೇಲಿನ ಆತನ ಮನೋವಿಶ್ಲೇಷಣಾ ಸಿದ್ಧಾಂತವು ಯಶಸ್ವಿಯಾಗಲಿಲ್ಲ. 4 ರಿಂದ 6 ವರ್ಷದ ಹೆಚ್ಚಿನ ಮಕ್ಕಳು ಸ್ತ್ರೀ ಮತ್ತು ಪುರುಷ ಜನನಾಂಗಗಳ ನಡುವಿನ ವ್ಯತ್ಯಾಸಗಳ ಬಗ್ಗೆ ಎಷ್ಟು ಅಜ್ಞಾನಿಗಳಾಗಿರುತ್ತಾರೆ ಎಂದರೆ ಫ್ರಾಯ್ಡ್ ಹೇಳುವ ಹಾಗೆ ಹುಡುಗರು ಶಿಶ್ನಲೋಪವಾಗುವ ಭಯಪಡುತ್ತಾರೆ ಅಥವಾ ಬಹಳಷ್ಟು ಹುಡುಗಿಯರು ತಮಗೆ ಶಿಶ್ನಲೋಪವಾಗಿದೆ ಎಂದು ಭಾವಿಸುತ್ತಾರೆ ಎಂದು ನಂಬುವುದು ಕಷ್ಟ (ಬೆಮ್, 1989; ಕ್ಯಾಚರ್, 1955). ಅಲ್ಲದೇ, ಫ್ರಾಯ್ಡ್ ತಂದೆಯೊಡನೆ ಹುಡುಗ ಗುರುತಿಸಿಕೊಳ್ಳುವುದಕ್ಕೆ ಭಯವೇ ಆಧಾರ ಎಂದು ಭಾವಿಸಿದ್ದ, ಆದರೆ ಹೆಚ್ಚಿನ ಸಂಶೋಧಕರು ಗಂಡುಮಕ್ಕಳು ಅತಿಯಾಗಿ ದಂಡಿಸುವ ಮತ್ತು ಬೆದರಿಸುವ ತಂದೆಗಿಂತ, ಆಪ್ತವೆನಿಸುವ,

ವಾತ್ಸಲ್ಯಮಯಿ ತಂದೆಯೊಂದಿಗೆ ಗುರುತಿಸಿಕೊಳ್ಳಲು ಹೆಚ್ಚು ಬಯಸುತ್ತಾರೆ ಎಂದು ಕಂಡುಕೊಂಡಿದ್ದಾರೆ(ಹೆದರಿಂಗ್ಟನ್ ಮತ್ತು ಫ್ರಾಂಕೀ, 1967). ಕೊನೆಯಲ್ಲಿ, ಶಾಲೆಗೆ ಹೋಗುವ ವಯಸ್ಸಿನ ಮಕ್ಕಳು ಸ್ವ-ಲಿಂಗೀಯ ಪಾಲಕರೊಂದಿಗೆ ಮಾನಸಿಕವಾಗಿ ವಿಶಿಷ್ಟ ರೀತಿಯಲ್ಲಿ ಸದೃಶರಾಗಿರುವುದಿಲ್ಲ (ಮ್ಯಾಕಬಿ ಮತ್ತು ಜಾಕ್ಲಿನ್, 1974).

ಈ ಫಲಿತಗಳು ಮಕ್ಕಳು ಭಯದಿಂದ ಪ್ರೇರಿತರಾಗಿ ಸ್ವ-ಲಿಂಗೀಯ ಪಾಲಕರೊಂದಿಗೆ ಗುರುತಿಸಿಕೊಳ್ಳುವ ಮೂಲಕ ಲಿಂಗತ್ವ ಪುರೂಪಿತ ಗುಣಲಕ್ಷಣಗಳನ್ನು ದಕ್ಕಿಸಿಕೊಳ್ಳುತ್ತಾರೆ ಎಂಬ ಫ್ರಾಯ್ಡನ ಆಲೋಚನೆಗೆ ಧಕ್ಕೆಯನ್ನುಂಟುಮಾಡುತ್ತವೆ. ಈಗ ನಾವು ಲಿಂಗತ್ವ ಪುರೂಪಣೆಯ ಸಾಮಾಜಿಕ ಕಲಿಕಾ ಗ್ರಹಿಕೆಯನ್ನು, ಅದೇನಾದರೂ ಹೆಚ್ಚು ಭರವಸೆದಾಯಕವಾಗಿ ಕಾಣುತ್ತದೆಯೇ, ಎಂದು ಪರಿಶೀಲಿಸೋಣ.

> **ಶಿಶ್ನ ಹಂತ (phallic stage):** ಫ್ರಾಯ್ಡ್ ಪ್ರತಿಪಾದಿಸುವ ಮೂರನೆಯ ಮನೋಲೈಂಗಿಕವಿಕಾಸದ ಹಂತದಲ್ಲಿ 3 ರಿಂದ 6 ವರ್ಷದ ಒಳಗಿನ ಮಕ್ಕಳು ತಮ್ಮೊಳಗಿನ ಕಾಮೇಚ್ಛೆಯನ್ನು ತಮ್ಮ ಜನನಾಂಗಗಳನ್ನು ನೇವರಿಸುವ ಮೂಲಕ ಈಡೇರಿಸಿಕೊಳ್ಳುತ್ತಾರೆ ಮತ್ತು ವಿರುದ್ಧ ಲಿಂಗದ ಪಾಲಕರೆಡೆಗೆ ಅಗಮ್ಯ ಕಾಮೇಚ್ಛೆಯನ್ನು ಬೆಳೆಸಿಕೊಳ್ಳುತ್ತಾರೆ.
>
> **ಗುರುತಿಸುವಿಕೆ (identification):** ಮಗುವು ಇನ್ನೊಬ್ಬ ವ್ಯಕ್ತಿ, ಸಾಮಾನ್ಯವಾಗಿ ಸ್ವ-ಲಿಂಗೀಯ ಪಾಲಕರನ ಮೇಲ್ಪಂಕ್ತಿ ಅನುಕರಿಸುವ ಪ್ರವೃತ್ತಿಗೆ ಫ್ರಾಯ್ಡ್ ನ ಪರಿಭಾಷೆ.
>
> **ಶಿಶ್ನಲೋಪ ಆತಂಕ (castration anxiety):** ಫ್ರಾಯ್ಡನ ಸಿದ್ಧಾಂತದಲ್ಲಿ ಇದು ಒಬ್ಬ ಚಿಕ್ಕ ಬಾಲಕನಿಗೆ ತನ್ನ ಪ್ರತಿಸ್ಪರ್ಧಾತ್ಮಕ ವರ್ತನೆಗೆ ಶಿಕ್ಷೆ ಎಂದು ತಂದೆ ತನ್ನ ಶಿಶ್ನವನ್ನು ಕತ್ತರಿಸುತ್ತಾನೆ ಎಂಬ ಭಯ.
>
> **ಈಡಿಪಸ್ ಭಾವಗ್ರಂಥಿ (Oedipus complex):** 3 ರಿಂದ 4 ವರ್ಷದ ಹುಡುಗರು ತಮ್ಮ ತಾಯಂದಿರೆಡೆಗೆ ಅಗಮ್ಯ ಕಾಮೇಚ್ಛೆಯನ್ನು ಮತ್ತು ತಮ್ಮ ತಂದೆಯರೆಡೆಗೆ ಮತ್ಸರದ ಮತ್ತು ದ್ವೇಷಪೂರಿತ ಸ್ಪರ್ಧೆ ಬೆಳೆಸಿಕೊಂಡಾಗ ಅನುಭವಿಸುತ್ತಾರೆ ಎನ್ನಲಾಗುವ ತುಮುಲಕ್ಕೆ ಫ್ರಾಯ್ಡ್ ಬಳಸುವ ಪದ.
>
> **ಎಲೆಕ್ಟ್ರಾ ಭಾವಗ್ರಂಥಿ (Electra complex):** ಈಡಿಪಸ್ **ಭಾವಗ್ರಂಥಿಯ ಸ್ತ್ರೀರೂಪದಲ್ಲಿ** 3 ರಿಂದ 6 ವರ್ಷದ ಒಳಗಿನ ಬಾಲಕಿಯು ತನ್ನ ತಂದೆ ಶಿಶ್ನ ಹೊಂದಿರುವ ಕಾರಣಕ್ಕೆ ಆತನ ಬಗೆಗೆ ಮತ್ಸರ ಹೊಂದಿ, ಅವನು ತನ್ನಲ್ಲಿ ಇಲ್ಲದ ಅಮೂಲ್ಯ ಅಂಗವನ್ನು ಕೊಡಬಹುದು ಎಂಬ ಆಸೆಯಿಂದ ಅವನನ್ನು ಲೈಂಗಿಕ ವಸ್ತುವಿನಂತೆ ಆರಿಸಿಕೊಳ್ಳುತ್ತಾಳೆ ಎಂಬ ಆಲೋಚನೆ.

**ಛಾಯಾಚಿತ್ರ**: ಫ್ರಾಯ್ಡನ ಪ್ರಕಾರ ಮಕ್ಕಳು ಸ್ವ-ಲಿಂಗೀಯ ಪಾಲಕರೊಂದಿಗೆ ತಮ್ಮನ್ನು ಗುರುತಿಸಿಕೊಳ್ಳುವ ಮೂಲಕ ಸೂಕ್ತ "ಪುರುಷ" ಅಥವಾ "ಸ್ತ್ರೀ" ಎಂದಾಗುತ್ತಾರೆ.

.

## ಸಾಮಾಜಿಕ ಕಲಿಕಾ ಸಿದ್ಧಾಂತ

ಆಲ್ಬರ್ಟ್ ಬಂಡುರಾರವರಂತಹ (1989; ಬಸಿ ಮತ್ತು ಬಂಡುರಾ, 1992, 1999) ಸಾಮಾಜಿಕ ಕಲಿಕಾ ಸಿದ್ಧಾಂತಿಗಳ ಪ್ರಕಾರ ಮಕ್ಕಳು ತಮ್ಮ ಲಿಂಗತ್ವ ಅನನ್ಯತೆಗಳನ್ನು ಮತ್ತು ಲಿಂಗತ್ವ-ಪಾತ್ರ ಆದ್ಯತೆಗಳನ್ನು ಎರಡು ವಿಧಗಳಲ್ಲಿ ಪಡೆಯುತ್ತಾರೆ. ಮೊದಲನೆಯದು **ನೇರ ಪಾಠ**ದ ಮೂಲಕ: ಲಿಂಗತ್ವ-ಸೂಕ್ತ ವರ್ತನೆಗಳನ್ನು ತೋರಿದರೆ ಮಕ್ಕಳಿಗೆ ಬಹುಮಾನ ನೀಡುವುದು, ಪ್ರೋತ್ಸಾಹಿಸುವುದು ಹಾಗೂ ಅನ್ಯ ಲಿಂಗೀಯರಿಗೆ ಸೂಕ್ತ ಎನಿಸಿದ ವರ್ತನೆಯನ್ನು ದಂಡಿಸುವುದು ಮತ್ತು

ನಿರುತ್ತೇಜಿಸುವುದು. ಎರಡನೆಯದು **ಅವಲೋಕನಾ ಕಲಿಕೆ**: ಮಕ್ಕಳು ಅನೇಕ ಸ್ವ-ಲಿಂಗೀಯ ಮಾದರಿಗಳ ಅಭಿವೃತ್ತಿಗಳು ಮತ್ತು ವರ್ತನೆಗಳನ್ನು ಅವಲೋಕಿಸಿ ಅಳವಡಿಸಿಕೊಳ್ಳುತ್ತಾರೆ.

## ಲಿಂಗತ್ವ- ಪಾತ್ರಗಳ ನೇರ ಪಾಠ

ಪಾಲಕರು ಹುಡುಗರು ಹೇಗೆ ಹುಡುಗರಂತಿರಬೇಕು, ಹುಡುಗಿಯರು ಹೇಗೆ ಹುಡುಗಿಯರಂತಿರಬೇಕು ಎಂದು ಕಲಿಸಲು ಸಕ್ರಿಯವಾಗಿ ಪಾಲ್ಗೊಳ್ಳುತ್ತಾರೆಯೆ? ಖಂಡಿತವಾಗಿಯೂ (ಲೀಪರ್, ಆಂಡರ್ಸ್‌ನ್ ಮತ್ತು ಸ್ಯಾಂಡರ್ಸ್, 1998; ಲಿಟನ್ ಮತ್ತು ರೋಮ್ನಿ, 1991), ಮತ್ತು ಮಕ್ಕಳ ಲಿಂಗತ್ವ ಪುರೂಪಿತ ವರ್ತನೆಗಳ ರೂಪಣೆಯು ಬಹಳ ಮುಂಚಿತವಾಗಿಯೇ ಆರಂಭಗೊಳ್ಳುತ್ತದೆ. ಬೆವರ್ಲಿ ಫ್ಯಾಗಟ್ ಮತ್ತು ಲೈನ್‌ಬಾ (1989) ಉದಾಹರಣೆಗೆ, ಮಕ್ಕಳು ಮೂಲಭೂತ ಲಿಂಗತ್ವ ಅನನ್ಯತೆಯನ್ನೂ ಇನ್ನೂ ಪಡೆಯದೆ ಅಥವಾ ಪುರುಷ ಅಥವಾ ಸ್ತ್ರೀ ಚಟುವಟಿಕೆಗಳಿಗೆ ಸ್ಪಷ್ಟ ಆದ್ಯತೆ ಪ್ರದರ್ಶಿಸದೇ ಇದ್ದ ಎರಡನೇ ವಯಸ್ಸಿನಲ್ಲೇ ಆಗಲೇ ಪಾಲಕರು ಲಿಂಗತ್ವ-ಸೂಕ್ತ ಚಟುವಟಿಕೆಗಳನ್ನು ಪ್ರೋತ್ಸಾಹಿಸಿ ವಿರುದ್ಧ-ಲಿಂಗೀಯ ಆಟಗಳನ್ನು ನಿರುತ್ತೇಜಿಸುವುದನ್ನು ತಮ್ಮ ಅಧ್ಯಯನದಲ್ಲಿ ಕಂಡುಕೊಂಡರು.. ಹೆಣ್ಣುಮಕ್ಕಳಿಗೆ 20ರಿಂದ 24 ತಿಂಗಳು ತುಂಬುವ ಹೊತ್ತಿಗೆ ಅವರು ನರ್ತಿಸುವುದು, ಅಲಂಕರಿಸಿಕೊಳ್ಳುವುದು ( ಮಹಿಳೆಯರಂತೆ) ಪಾಲಕರನ್ನು ಹಿಂಬಾಲಿಸುವುದು, ಸಹಾಯ ಕೇಳುವುದು ಮತ್ತು ಗೊಂಬೆಗಳೊಂದಿಗೆ ಆಡುವುದನ್ನು ಸತತವಾಗಿ ಪುನರ್ಬಲನಗೊಳಿಸಲಾಗುತ್ತದೆ, ಮತ್ತು ಸಾಧಾರಣವಾಗಿ ಅವರು ವಸ್ತುಗಳನ್ನು ಮನಸ್ಸಿಗೆ ಬಂದಂತೆ ಆಡಿಸುವುದು, ಓಡುವುದು, ಜಿಗಿಯುವುದು ಮತ್ತು ಹತ್ತುವುದಕ್ಕೆ ಅಸಮ್ಮತಿ ಸೂಚಿಸಲಾಗುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ, ಗಂಡುಮಕ್ಕಳಿಗೆ, ಗೊಂಬೆಗಳೊಂದಿಗೆ ಆಡುವುದು, ಸಹಾಯ ಕೇಳುವುದು ಮುಂತಾದ "ಹೆಣ್ಣಿನಂತಹ" ವರ್ತನೆಗೆ ಬಹಳ ವೇಳೆ ಛೀಮಾರಿ ಹಾಕಲಾಗುತ್ತದೆ, ಮತ್ತು ಟ್ರಕ್ಕುಗಳು, ಬಿಲ್ಡಿಂಗ್ ಬ್ಲಾಕ್‌ಗಳೊಂದಿಗೆ ಆಡುವುದು, ನೂಕುವ-ಎಳೆಯುವ (ಹೆಚ್ಚಿನ ಸ್ನಾಯುಬಲದ ಬಳಕೆಯಾಗುವ) ಆಟಿಕೆಗಳೊಂದಿಗೆ ಆಡುವುದರಂತಹ "ಹುಡುಗರ" ಚಟುವಟಿಕೆಗಳನ್ನು ಉತ್ತೇಜಿಸಲಾಗುತ್ತದೆ (ಫ್ಯಾಗಟ್, 1978).

ಮನೆಯಲ್ಲಿ ತಮ್ಮ ಪಾಲಕರು ಒದಗಿಸುವ "ಲಿಂಗತ್ವ ಪಠ್ಯಕ್ರಮ"ದಿಂದ ಮಕ್ಕಳು ಪ್ರಭಾವಿತರಾಗುತ್ತಾರೆಯೆ? ಖಂಡಿತವಾಗಿಯೂ! ಯಾವ ಪಾಲಕರು ಭೇದಾತ್ಮಕ ಬಲವರ್ಧನೆಗಳ ಸ್ಪಷ್ಟ ಮಾದರಿಯನ್ನು ತೋರಿಸುತ್ತಾರೆಯೋ ಅಂಥವರ ಮಕ್ಕಳು (1) ತಮ್ಮನ್ನು ಹುಡುಗ ಅಥವಾ ಹುಡುಗಿಯೆಂದು ಗುರುತಿಸಿಕೊಳ್ಳುವುದರಲ್ಲಿ, (2) ಲಿಂಗತ್ವ-ಪುರೂಪಿತ ಆಟಿಕೆಗಳು ಮತ್ತು ಚಟುವಟಿಕೆಗಳ ಬಲವಾದ ಆಯ್ಕೆಗಳನ್ನು ರೂಪಿಸಿಕೊಳ್ಳುವುದರಲ್ಲಿ, ಮತ್ತು (3) ಲಿಂಗತ್ವ ರೂಢಮಾದರಿಗಳನ್ನು ಗ್ರಹಿಸುವುದರಲ್ಲಿ ತುಲನಾತ್ಮಕವಾಗಿ ಶೀಘ್ರವಾಗಿರುತ್ತಾರೆ (ಫ್ಯಾಗಟ್ ಮತ್ತು ಲೈನ್‌ಬಾ, 1989; ಫ್ಯಾಗಟ್, ಲೈನ್‌ಬಾ ಮತ್ತು ಓ'ಬಾಯ್ಲ್, 1992). ಅದರಲ್ಲೂ, ತಾಯಂದಿರಿಗಿಂತ ತಂದೆಯಂದಿರು "ಲಿಂಗತ್ವ-ಪುರೂಪಿತ" ವರ್ತನೆಗಳನ್ನು ಉತ್ತೇಜಿಸುವುದು ಮತ್ತು ಬೇರೆ ಲಿಂಗದವರಿಗೆ ಉಚಿತವಾದದ್ದು ಎಂದು ಪರಿಗಣಿಸಲಾಗುವ ವರ್ತನೆಗಳನ್ನು ಅಡ್ಡಿಪಡಿಸುವುದು ಜಾಸ್ತಿ (ಲೆವ್ ಮತ್ತು ಫ್ಯಾಗಟ್, 1997; ಲಿಟನ್ ಮತ್ತು ರೋಮ್ನಿ,

1991). ಅಂದರೆ ಲಿಂಗತ್ವ-ಪ್ರರೂಪಿತ ಆಟಿಕೆಗಳು ಮತ್ತು ಚಟುವಟಿಕೆಗಳನ್ನು ಕುರಿತ ಮಕ್ಕಳ ಆರಂಭಿಕ ಆಯ್ಕೆಗಳು, ಈ ಆಸಕ್ತಿಗಳನ್ನು ತಮ್ಮ ಮಕ್ಕಳಲ್ಲಿ ಬೆಳೆಸಲು ಅವರ ಪಾಲಕರು (ನಿರ್ದಿಷ್ಟವಾಗಿ ತಂದೆ) ಮಾಡುವ ನಿರಂತರ ಪ್ರಯತ್ನಗಳ ಪರಿಣಾಮ ಎಂದು ತೋರುತ್ತದೆ.

ಶಾಲಾಪೂರ್ವ ಅವಧಿಯುದ್ದಕ್ಕೂ ಮಕ್ಕಳನ್ನು ಜಾಗರೂಕತೆಯಿಂದ ಮೇಲ್ವಿಚಾರಣೆ ಮಾಡುವುದು ಮತ್ತು ಭೇದಾತ್ಮಕವಾಗಿ ಲಿಂಗತ್ವ-ಪ್ರರೂಪಿತ ಚಟುವಟಿಕೆಗಳಿಗೆ ಪುಷ್ಟಿ ನೀಡುವುದನ್ನು ಪಾಲಕರು ಕಡಿಮೆ ಮಾಡುತ್ತಾ ಹೋಗುತ್ತಾರೆ (ಫ್ಯಾಗಟ್ ಮತ್ತು ಹೇಗನ್, 1991; ಲಿಟನ್ ಮತ್ತು ರೋಮ್ನಿ, 1991). ಬದಲಿಗೆ ಈ ಲಿಂಗತ್ವ-ಪ್ರರೂಪಿತ ಆಸಕ್ತಿಗಳನ್ನು ಹಾಗೆಯೇ ಮುಂದುವರೆಸಿಕೊಂಡು ಹೋಗಲು ಒಡಹುಟ್ಟಿದವರ ಹಾಗೂ ಸ್ವ-ಲಿಂಗೀಯ ಸಮವಯಸ್ಕರ ವರ್ತನೆಗಳು ಸೇರಿದಂತೆ ಇನ್ನೂ ಅನೇಕ ಅಂಶಗಳು ಪಿತೂರಿಹೂಡುತ್ತವೆ.(ಬೀಲ್, 1994; ಮೆಕ್‌ಹೇಲ್, ಕ್ರೂಟರ್, ಮತ್ತು ಟಕರ್, 1999). ಮುಖ್ಯವಾಗಿ ಸಮವಯಸ್ಕ ಸಂಗಡಿಗರ ಪ್ರಭಾವಗಳು ಶಕ್ತಿಶಾಲಿಯಾಗಿರುತ್ತವೆ: ಇನ್ನೂ ತಮ್ಮ ಮೂಲಭೂತ ಲಿಂಗತ್ವ ಅನನ್ಯತೆಗಳನ್ನು ಸ್ಥಾಪಿಸಿಕೊಳ್ಳುವ ಮೊದಲೇ 2 ವರ್ಷದ ಚಿಕ್ಕ ಬಾಲಕರು ತಮ್ಮ ತಮ್ಮಲ್ಲೇ ಹುಡುಗಿಯರ ಆಟಿಕೆಗಳೊಂದಿಗೆ ಆಡುವುದು ಅಥವಾ ಬಾಲಕಿಯರೊಂದಿಗೆ ಆಡಿದರೆ ಅದನ್ನು ಧಿಕ್ಕರಿಸುವುದು ಮತ್ತು ಆಟಕ್ಕೆ ಅಡ್ಡಪಡಿಸುವುದನ್ನು ಗಮನಿಸಬಹುದು, ಹಾಗೆಯೇ 2 ವರ್ಷದ ಬಾಲಕಿಯರು ಬಾಲಕರೊಂದಿಗೆ ಆಡುವ ಹುಡುಗಿಯರನ್ನು ಟೀಕಿಸುತ್ತಾರೆ (ಫ್ಯಾಗಟ್, 1985ಅ). ಹೀಗೆ ಪಾಲಕರು ಸ್ವಲ್ಪ ಕಡಿಮೆ ಮಾಡತೊಡಗಿದಾಗ ಸಮವಯಸ್ಕರು ಭೇದಾತ್ಮಕವಾಗಿ ಲಿಂಗತ್ವ-ಪ್ರರೂಪಿತ ಅಭಿವೃತ್ತಿಗಳು ಮತ್ತು ವರ್ತನೆಗಳ ಪುನರ್ಬಲನ ಮಾಡಲು ಪ್ರಾರಂಭಿಸುತ್ತಾರೆ,. ಮಕ್ಕಳ ಸಮವಯಸ್ಕ ಸಂಗಡಿಗರು ಈ ಲಿಂಗತ್ವ ಪ್ರರೂಪಣೆಯ ಬಲವರ್ಧನೆಯನ್ನು ಬಾಲ್ಯದುದ್ದಕ್ಕೂ ಮುಂದುವರೆಸಿಕೊಂಡು ಹೋಗುತ್ತಾರೆ (ಮಾರ್ಟಿನ್ ಮತ್ತು ಫೇಬ್ಸ್, 2001).

> **ನೇರ ಪಾಠ**: “ಪುಟ್ಟ ಮಕ್ಕಳಿಗೆ ಹೇಗೆ ವರ್ತಿಸಬೇಕು ಎನ್ನುವುದನ್ನು “ಸೂಕ್ತ” ವರ್ತನೆಗಳನ್ನು ಬಲಗೊಳಿಸಿ, ಸೂಕ್ತವಲ್ಲದ ನಡತೆಯನ್ನು ಶಿಕ್ಷಿಸಿ ಇಲ್ಲವೇ ಇನ್ಯಾವ ರೀತಿಯಲ್ಲೋ ನಿರುತ್ತೇಜನಗೊಳಿಸಿ ಕಲಿಸುವುದು.

.

**ಅವಲೋಕನ ಕಲಿಕೆ**: ಇತರರ ವರ್ತನೆಯ ಅವಲೋಕನದ ಪರಿಣಾಮದಿಂದ ಉಂಟಾಗುವ ಕಲಿಕೆ.

**ಛಾಯಾಚಿತ್ರ**: ಪಾಲಕರು ರೂಢಮಾದರಿಗೆ ವಿರುದ್ಧವಾದ ಚಟುವಟಿಕೆಗಳಲ್ಲಿ ಮಕ್ಕಳನ್ನು ಪ್ರೋತ್ಸಾಹಿಸುವುದು ಮತ್ತು ತೊಡಗಿಸುವ ಮೂಲಕ ತಮ್ಮ ಮಕ್ಕಳು ಗಡುಸಾದ ಲಿಂಗತ್ವ ರೂಢಮಾದರಿಗಳನ್ನು ಬೆಳೆಸಿಕೊಳ್ಳದಂತೆ ತಡೆಗಟ್ಟಬಹುದು.

## ಅವಲೋಕನಾ ಕಲಿಕೆ

ಸಾಮಾಜಿಕ ಕಲಿಕೆಯ ಸಿದ್ಧಾಂತದ ಪ್ರಕಾರ ಮಕ್ಕಳು ತಮ್ಮ ಅನೇಕ ಲಿಂಗತ್ವ ಪ್ರರೂಪಿತ ಗುಣಲಕ್ಷಣಗಳು ಮತ್ತು ಆಸಕ್ತಿಗಳನ್ನು ಬೆಳೆಸಿಕೊಳ್ಳುವ ಎರಡನೆಯ ವಿಧವೆಂದರೆ ಹಲವು ಬಗೆಯ ಸ್ವಲಿಂಗೀಯ ಮಾದರಿಗಳನ್ನು ಅವಲೋಕಿಸುವುದು ಮತ್ತು ಅನುಕರಿಸುವುದು (ಬಂಡುರಾ, 1989). ಇದರ ಹಿಂದಿನ ಊಹೆಯೆಂದರೆ, ಯಾವ

ಆಟಿಕೆಗಳು, ಚಟುವಟಿಕೆಗಳು, ವರ್ತನೆಗಳು "ಗಂಡುಮಕ್ಕಳಿಗೆ ಸಂಬಂಧಿಸಿದ್ದು" ಎಂದು ಗಂಡುಮಕ್ಕಳು ಗಮನಿಸುತ್ತಿರುತ್ತಾರೆ, ಮತ್ತು ಹಾಗೆಯೇ ಹೆಣ್ಣುಮಕ್ಕಳು ಸಹಾ "ಹೆಣ್ಣುಮಕ್ಕಳಿಗಾಗಿ" ಇರುವ ಚಟುವಟಿಕೆಗಳು ಮತ್ತು ವರ್ತನೆಗಳನ್ನು ಹಲವು ಬಗೆಯ ಸ್ವ-ಲಿಂಗ ಮಾದರಿಗಳನ್ನು ಆಯ್ಕೆಯ ಪ್ರಕಾರ ಅವಲೋಕಿಸಿ, ಅನುಕರಣೆ ಮಾಡುವ ಮೂಲಕ ಕಲಿಯುತ್ತಾರೆ; ಸಮವಯಸ್ಕ ಸಂಗಡಿಗರು, ಶಿಕ್ಷಕರು, ಅವರಿಗಿಂತ ದೊಡ್ಡವರಾದ ಸಹೋದರ-ಸಹೋದರಿಯರು, ಮಾಧ್ಯಮದಲ್ಲಿ ಕಂಡುಬರುವ ವ್ಯಕ್ತಿಗಳು, ಜೊತೆಗೆ ಅವರ ತಂದೆ ಮತ್ತು ತಾಯಿಯರನ್ನೂ ಒಳಗೊಂಡ ಹಲವು ಬಗೆಯ ಲಿಂಗ ಮಾದರಿ ಗಳು ಅವರ ಮುಂದಿರುತ್ತವೆ (ಫ್ಯಾಗಟ್, ರೋಜರ್ಸ್, ಮತ್ತು ಲೈನ್‌ಬಾ, 2000).

ಆದರೂ ಮಕ್ಕಳ ಶಾಲಾಪೂರ್ವ ಅವಧಿಯಲ್ಲಿ ಸ್ವ-ಲಿಂಗ ಮಾದರಿಗಳು ಎಷ್ಟು ಮುಖ್ಯವಾಗಿವೆ ಎಂಬುದರ ಬಗೆಗೆ ಪ್ರಶ್ನೆ ಏಳುತ್ತದೆ, ಏಕೆಂದರೆ ಬಹಳಷ್ಟು ಸಲ 3 ರಿಂದ 6 ವರ್ಷದ ಒಳಗಿನ ಮಕ್ಕಳು ಹೆಚ್ಚಿನ ಸ್ತ್ರೀ ಮತ್ತು ಪುರುಷರ ವಿಶಿಷ್ಟ ವರ್ತನಾ ವಿನ್ಯಾಸಗಳನ್ನು ಪ್ರತೀ ಲಿಂಗಕ್ಕೆ ಸಂಬಂಧಿಸಿದ ಮಾದರಿಗಳನ್ನು ಎಚ್ಚರಿಕೆಯಿಂದ ಅವಲೋಕಿಸುವ ಮೂಲಕ ಕಲಿಯುತ್ತವೆ ಎಂಬುದನ್ನು ಸಂಶೋಧಕರು ಕಂಡುಕೊಂಡಿದ್ದಾರೆ (ಲೀಪರ್, 2000; ರೂಬಲ್ ಮತ್ತು ಮಾರ್ಟಿನ್, 1998). ಉದಾಹರಣೆಗೆ ಉದ್ಯೋಗಸ್ಥ ಮಹಿಳೆಯರ (*ಪುರುಷರಿಗೆ ಸಂಬಂಧಿಸಿದ* ಕಾರಣಭೂತ ಪಾತ್ರಗಳನ್ನು ವಹಿಸಿಕೊಳ್ಳುವ ತಾಯಂದಿರು) ಮಕ್ಕಳು ಅಥವಾ ಅಡುಗೆ ಮಾಡುವ, ಮನೆ ಸ್ವಚ್ಛಗೊಳಿಸುವ, ಮಕ್ಕಳನ್ನು ನೋಡಿಕೊಳ್ಳುವಂತಹ ನಿತ್ಯದ *ಸ್ತ್ರೀಯರಿಗೆ ಸಂಬಂಧಿಸಿದ* ಮನೆಗೆಲಸಗಳನ್ನು ಮಾಡುವ ತಂದೆಯರನ್ನು ಹೊಂದಿರುವ ಮಕ್ಕಳು ಲಿಂಗತ್ವ ರೂಢಮಾದರಿಗಳ ಬಗೆಗೆ ಸಂಪ್ರದಾಯಸ್ಥ ಪಾಲಕರನ್ನು ಹೊಂದಿದ ಮಕ್ಕಳಿಗಿಂತ ಕಡಿಮೆ ಅರಿತಿರುತ್ತಾರೆ (ಸರ್ಬಿನ್, ಪೌಲಿಸ್ಸಾ, ಮತ್ತು ಗುಲ್ಕೊ, 1993; ಟರ್ನರ್ ಮತ್ತು ಜೇರ್ವೈ, 1995). ಅದೇ ರೀತಿ ಸಹೋದರಿಯರನ್ನು ಹೊಂದಿರುವ ಬಾಲಕರು ಮತ್ತು ಸಹೋದರರನ್ನು ಹೊಂದಿರುವ ಬಾಲಕಿಯರು ಸ್ವಲಿಂಗೀಯ ಒಡಹುಟ್ಟಿದವರನ್ನು ಹೊಂದಿದವರಿಗೆ ಹೋಲಿಸಿದರೆ ಲಿಂಗತ್ವ-ಪ್ರರೂಪಿತ ಚಟುವಟಿಕೆಗಳನ್ನು ಇಷ್ಟಪಡುವುದು ಕಡಿಮೆ (ಕೋಲಿ ಮತ್ತಿತರರು., 1996; ರಸ್ಟ ಮತ್ತಿತರರು., 2000). ಅದಕ್ಕಿಂತ ಹೆಚ್ಚಾಗಿ, ಜಾನ್ ಮಾಸ್ಟರ್ಸ್ ಮತ್ತು ಅವರ ಸಹಭಾಗಿಗಳು ಕಂಡುಕೊಂಡಂತೆ (1979) ಶಾಲಾಪೂರ್ವದ ಮಕ್ಕಳು ಲಿಂಗ ಮಾದರಿ ಯೊಂದರ ಮೇಲೆ ಗಮನವಿಡುವಾಗ, ಅವರ ಗಮನವು ಆ ಮಾದರಿಯ ಜೈವಿಕ ಲಿಂಗಕ್ಕಿಂತ ಆ ಮಾದರಿಯ ವರ್ತನೆಗಳು ಹೇಗೆ ಅವರವರ ಜೈವಿಕ ಲಿಂಗಕ್ಕೆ ಯುಕ್ತವಾದಂಥವು ಎಂಬುದರ ಮೇಲೆ ಇರುತ್ತದೆ. ಉದಾಹರಣೆಗೆ, 4 ರಿಂದ 5 ವರ್ಷದ ಮಕ್ಕಳು ಹುಡುಗಿಯೊಬ್ಬಳು ಆಟಿಕೆಗಳೊಂದಿಗೆ ಆಡಿದ್ದನ್ನು ನೋಡಿದರೂ ಸಹ "ಹುಡುಗರ ಆಟಿಕೆಗಳು" ಎಂದು ಗುರುತಿನ ಚೀಟಿ ಅಂಟಿಸಿದ ಕಾರಣದಿಂದ ಆ ವಸ್ತುಗಳೊಂದಿಗೆ ಆಡುತ್ತಾರೆ. ಆದರೆ ಇದೇ ಚಿಣ್ಣರು ಗಂಡು ಮಾದರಿಗಳು ಆಡಿದ "ಹುಡುಗಿಯರ ಆಟಿಕೆ"ಗಳೊಂದಿಗೆ ಆಡಲು ಹಿಂಜರಿಯುತ್ತಾರೆ, ಮತ್ತು ಇತರ ಬಾಲಕರೂ ಸಹ ಹುಡುಗಿಯರ ಆಟಿಕೆಗಳು ಎಂಬ ಗುರುತಿನ ಚೀಟಿ ಇದ್ದ ವಸ್ತುಗಳನ್ನು ತಿರಸ್ಕರಿಸುತ್ತಾರೆ ಎಂದು ನಂಬುತ್ತಾರೆ ಮಾರ್ಟಿನ್, ಈಸೆನ್‌ಬಡ್ ಮತ್ತು

ರೋಸ್, 1995). ಅಂದರೆ ಇದರಿಂದ, ಆಟಿಕೆಗಳನ್ನು ಕುರಿತ ಮಕ್ಕಳ ಆಯ್ಕೆಗಳನ್ನು ಅಲ್ಲಿ ಲಿಂಗ ಮಾದರಿ ಯಾಗಿದ್ದ ಮಗುವಿನ ಜೈವಿಕ ಲಿಂಗಕ್ಕಿಂತ ಆಟಿಕೆಗಳಿಗೆ ಅಂಟಿಸಿದ ಗುರುತಿನ ಚೀಟಿಗಳು ಹೆಚ್ಚು ಪ್ರಭಾವಿಸುತ್ತವೆ ಎಂಬುದು ತಿಳಿದುಬರುತ್ತದೆ. ಆದರೆ, ಯಾವಾಗ ಮಕ್ಕಳಿಗೆ ಲಿಂಗತ್ವವು ತಮ್ಮ ವ್ಯಕ್ತಿತ್ವದ ಬದಲಾಗದ ಆಯಾಮ ಎಂಬುದು ಅರಿವಾಗುತ್ತದೆಯೋ (5ರಿಂದ 7 ವರ್ಷದ ಮಕ್ಕಳು) ಆವಾಗಿನಿಂದ ಮಕ್ಕಳು ಸ್ವ-ಲಿಂಗೀಯ ಮಾದರಿಗಳನ್ನು ಆಯ್ದುಕೊಂಡು ಗಮನಕೊಡುವುದನ್ನು ಪ್ರಾರಂಭಿಸುವುದಲ್ಲದೆ ಅನ್ಯ-ಲಿಂಗೀಯ ಮಾದರಿಗಳು ಇಷ್ಟಪಡುವ ಆಟಿಕೆಗಳು ಮತ್ತು ಚಟುವಟಿಕೆಗಳನ್ನು ದೂರವಿಡುವ ಸಾಧ್ಯತೆ ಹೆಚ್ಚುತ್ತದೆ.
(ಫ್ರೇ ಮತ್ತು ರೂಬಲ್, 1992; ರೂಬಲ್, ಬಲಾಬಾನ್, ಮತ್ತು ಕೂಪರ್, 1981).

## ಕ್ಹೋಲ್‌ಬರ್ಗ್‌ರವರ ಸಂಜ್ಞಾನಾತ್ಮಕ ವಿಕಾಸ ಸಿದ್ಧಾಂತ

ಲಾರೆನ್ಸ್ **ಕ್ಹೋ**ಲ್‌ಬರ್ಗ್‌ರವರು (1966) ಈವರೆಗೆ ನಾವು ಪರಿಗಣಿಸಿದ ಸಿದ್ಧಾಂತಗಳಿಗಿಂತ ಭಿನ್ನವಾದ ಲಿಂಗತ್ವ ಪುರೂಪಣೆಯ ಒಂದು ಸಂಜ್ಞಾನಾತ್ಮಕ ಸಿದ್ಧಾಂತವನ್ನು ಮುಂದಿಟ್ಟಿದ್ದು, ಅದು ಹುಡುಗ ಹುಡುಗಿಯರು ಅವರ ಪಾಲಕರಿಗೆ ಅದು ಇಷ್ಟವಿಲ್ಲದಿದ್ದರೂ, ಏಕೆ ಸಾಂಪ್ರದಾಯಿಕ ಲಿಂಗತ್ವ ಪಾತ್ರಗಳನ್ನು ಅಳವಡಿಸಿಕೊಳ್ಳುತ್ತಾರೆ ಎಂಬುದನ್ನು ಅದು ವಿವರಿಸುತ್ತದೆ. **ಕ್ಹೋ**ಲ್‌ಬರ್ಗ್‌ರವರ ಸಿದ್ಧಾಂತದ ಮುಖ್ಯ ಅಂಶಗಳು ಹೀಗಿವೆ:

- ಲಿಂಗತ್ವ-ಪಾತ್ರದ ವಿಕಾಸ ಸಂಜ್ಞಾನಾತ್ಮಕ ವಿಕಾಸವನ್ನು ಅವಲಂಬಿಸಿರುತ್ತದೆ; ಮಕ್ಕಳು ತಮ್ಮ ಸಾಮಾಜಿಕ ಅನುಭವಗಳಿಂದ ಪ್ರಭಾವಿತರಾಗುವದಕ್ಕೂ ಮೊದಲು ಲಿಂಗತ್ವದ ಬಗೆಗೆ ಕೆಲವು ಜ್ಞಾನ ದಕ್ಕಿಸಿಕೊಂಡಿರಬೇಕಾಗುತ್ತದೆ.
- ಮಕ್ಕಳು *ಸಕ್ರಿಯವಾಗಿ ತಮ್ಮನ್ನು ತಾವು ಸಾಮಾಜಿಕೀಕರಣಗೊಳಿಸಿಕೊಳ್ಳುತ್ತಾರೆ*; ಅವರು ಸಾಮಾಜಿಕ ಪ್ರಭಾವದ ಕೇವಲ ನಿಷ್ಕ್ರಿಯ ದಾಳಗಳಲ್ಲ.

ಮನೋವಿಶ್ಲೇಷಣೆಯ ಸಿದ್ಧಾಂತ ಮತ್ತು ಸಾಮಾಜಿಕ ಕಲಿಕಾ ಸಿದ್ಧಾಂತಗಳೆರಡರ ಪ್ರಕಾರ ಮಕ್ಕಳು “ಹುಡುಗ” ಅಥವಾ “ಹುಡುಗಿ” ಯರ ಕಾರ್ಯ ಮಾಡಲು ಮೊದಲು ಕಲಿಯುವುದು ಏಕೆಂದರೆ ಅವರ ಪಾಲಕರು ಅಂತಹ ಚಟುವಟಿಕೆಗಳನ್ನು ಪ್ರೋತ್ಸಾಹಿಸುತ್ತಾರೆ. ನಂತರ ಅವರು ಸ್ವ-ಲಿಂಗೀಯ ಮಾದರಿ ಗಳೊಂದಿಗೆ ತಮ್ಮನ್ನು ಗುರುತಿಸಿಕೊಳ್ಳಲು ಅಥವಾ ಅಭ್ಯಾಸಬಲದಿಂದ ಅವರನ್ನು ಅನುಕರಿಸಲು ತೊಡಗುವುದರಿಂದ ಒಂದು ಸ್ಥಿರ ಲಿಂಗತ್ವ ಅನನ್ಯತೆ ಪಡೆಯುತ್ತಾರೆ. ಆದರೆ **ಕ್ಹೋ**ಲ್‌ಬರ್ಗ್ ಇದಕ್ಕೆ ವಿರುದ್ಧವಾದ ವಾದವನ್ನು ಮುಂದಿಡುತ್ತಾರೆ. ಮಕ್ಕಳು ಮೊದಲು ಒಂದು ಸ್ಥಿರವಾದ ಲಿಂಗತ್ವ ಅನನ್ಯತೆಯನ್ನು ಸ್ಥಾಪಿಸಿಕೊಳ್ಳುತ್ತಾರೆ ಮತ್ತು ನಂತರ, *ಸಕ್ರಿಯವಾಗಿ* ಸ್ವಲಿಂಗೀಯ ಮಾದರಿ ಗಳನ್ನು ಮತ್ತು ಒಬ್ಬ ಹುಡುಗ ಅಥವಾ ಹುಡುಗಿಯಂತೆ ಹೇಗೆ ವರ್ತಿಸುವುದು ಎಂಬುದನ್ನು ಕಲಿಯಲು ಬೇಕಾದ ಇತರ ಮಾಹಿತಿಗಳನ್ನು ಹುಡುಕಿಕೊಳ್ಳುತ್ತಾರೆ. **ಕ್ಹೋ**ಲ್‌ಬರ್ಗ್ ಪ್ರಕಾರ “ನನ್ನನ್ನು ಒಬ್ಬ ಹುಡುಗನಂತೆ ನಡೆಸಿಕೊಳ್ಳಲಾಗುತ್ತಿದೆ, ಆದ್ದರಿಂದ ನಾನು ಹುಡುಗನೇ ಇರಬೇಕು” (ಸಾಮಾಜಿಕ ಕಲಿಕಾ ದೃಷ್ಟಿಕೋನ) ಎಂಬುದಲ್ಲ. ಅದು “ ಹೇ, ನಾನು ಒಬ್ಬ ಹುಡುಗ,

ಆದ್ದರಿಂದ  ನಾನು ಒಬ್ಬ ಹುಡುಗನಂತೆ ಹೇಗೆ ವರ್ತಿಸುವುದು ಎನ್ನುವದನ್ನು ತಿಳಿದುಕೊಳ್ಳಲು ಪ್ರತಿಯೊಂದನ್ನೂ ಮಾಡುವುದು ಒಳ್ಳೆಯದು" (ಸಂಜ್ಞಾನಾತ್ಮಕ - ವಿಕಾಸ ದೃಷ್ಟಿಕೋನ) ಎನ್ನುವುದು . ಮಕ್ಕಳು ಪುರುಷ ಅಥವಾ ಸ್ತ್ರೀ ಎಂದರೆ ಏನು ಎನ್ನುವ ಒಂದು ಪಕ್ವವಾದ ಜ್ಞಾನ ಪಡೆಯಲು ಕೆಳಗಿನ ಮೂರು ಹಂತಗಳನ್ನು ಹಾದುಹೋಗುತ್ತಾರೆ ಎಂದು **ಕ್ಹೋ**ಲ್‌ಬರ್ಗ್ ನಂಬುತ್ತಾರೆ.

:

**ಮೂಲಭೂತ ಲಿಂಗತ್ವ ಅನನ್ಯತೆ**. ಮಕ್ಕಳು 3 ವರ್ಷಗಳಾಗುವ ಹೊತ್ತಿಗೆ ತಮ್ಮನ್ನು ತಾವು ಹುಡುಗ ಅಥವಾ ಹುಡುಗಿ ಎಂದು ಗುರುತಿಸಿಕೊಳ್ಳಲು ಆರಂಭಿಸುತ್ತಾರೆ.

**ಲಿಂಗತ್ವ ಸ್ತಿಮಿತ.** ನಂತರ *ಲಿಂಗತ್ವವು ಕಾಲಕಳೆದರೂ ಸ್ಥಿರ* ಎಂಬುದನ್ನು ಗ್ರಹಿಸುತ್ತಾರೆ. ಹುಡುಗರು ಬೆಳೆದು ತಪ್ಪದೆ ಪುರುಷರಾಗುತ್ತಾರೆ ಮತ್ತು ಹುಡುಗಿಯರು ಬೆಳೆದು ತಪ್ಪದೆ ಮಹಿಳೆಯರಾಗುತ್ತಾರೆ..

**ಲಿಂಗತ್ವ ಸುಸಂಗತತೆ**. ಬರಿಯ ಕಾಲ ಕಳೆದಂತಲ್ಲ, *ವಿಭಿನ್ನ ಸನ್ನಿವೇಶಗಳಲ್ಲಿಯೂ ಲಿಂಗತ್ವವು ಸ್ಥಿರ* ಎಂಬುದನ್ನು ಮಗುವು ಅರಿಯುವ ಮೂಲಕ ಲಿಂಗತ್ವದ ಪರಿಕಲ್ಪನೆಯು ಪೂರ್ಣಗೊಳ್ಳುತ್ತದೆ. ಈ ಹಂತವನ್ನು ತಲುಪಿದ 5 ರಿಂದ 7 ವರ್ಷದ ಮಕ್ಕಳನ್ನು ಈಗ ಯಾರೂ ಹೊರನೋಟದಿಂದ ಮೂರ್ಖರಾಗುವುದಿಲ್ಲ. ಉದಾಹರಣೆಗೆ, ಅನ್ಯ-ಲಿಂಗದವರಂತೆ ಉಡುಪು ಧರಿಸಿದರೆ ಅಥವಾ ಅನ್ಯ-ಲಿಂಗೀಯ ಚಟುವಟಿಕೆಯಲ್ಲಿ ತೊಡಗಿದ ಮಾತ್ರಕ್ಕೆ ಒಬ್ಬರ ಲಿಂಗತ್ವ ಬದಲಾಗುವುದಿಲ್ಲ ಎಂಬುದು ಈಗ ಮಕ್ಕಳಿಗೆ ಗೊತ್ತಾಗುತ್ತದೆ.

ಮಕ್ಕಳು ತಮ್ಮನ್ನು ತಾವು ಸಾಮಾಜಿಕೀಕರಣಗೊಳಿಸಿಕೊಳ್ಳಲು ಪ್ರೇರಿತರಾಗುವುದು ಯಾವಾಗ-ಅಂದರೆ, ಸ್ವ-ಲಿಂಗ ಮಾದರಿಗಳನ್ನು ಹುಡುಕಿಕೊಂಡು ಮತ್ತು ಸ್ತ್ರೀ ಮತ್ತು ಪುರುಷರಂತೆ ವರ್ತಿಸುವುದನ್ನು ಕಲಿಯುವುದು ಯಾವಾಗ? **ಕ್ಹೋ**ಲ್‌ಬರ್ಗ್ ಪ್ರಕಾರ ಮಕ್ಕಳು *ಲಿಂಗತ್ವ ಸುಸಂಗತತೆ*ಯನ್ನು ತಲುಪಿದ ನಂತರವೇ ಸ್ವ-ಸಾಮಾಜಿಕೀಕರಣವು ಆರಂಭವಾಗುತ್ತದೆ. **ಕ್ಹೋ**ಲ್‌ಬರ್ಗ್ ಪ್ರಕಾರ ಲಿಂಗತ್ವದ ಒಂದು ಪರಿಪಕ್ವ ತಿಳಿವು ನಿಜವಾದ ಲಿಂಗತ್ವ ಪ್ರರೂಪಣೆಯ ಪ್ರಕ್ರಿಯೆಯನ್ನು ಪ್ರಚೋದಿಸುತ್ತದೆ.

20 ಕ್ಕೂ ಹೆಚ್ಚು ವಿಭಿನ್ನ ಸಂಸ್ಕೃತಿಗಳಲ್ಲಿ ನಡೆಸಿದ ಅಧ್ಯಯನಗಳು ಶಾಲಾಪೂರ್ವ ಹಂತದ ಮಕ್ಕಳು ಕೋಲ್‌ಬರ್ಗ್ ಹೇಳಿದಂತೆ ಲಿಂಗತ್ವ ಅನನ್ಯತೆಯ ಮೂರು ಹಂತಗಳ ಅದೇ ಕ್ರಮದಲ್ಲಿ ಬೆಳೆಯುತ್ತಾರೆ ಮತ್ತು ಲಿಂಗತ್ವ ಸುಸಂಗತತೆಯನ್ನು ತಲುಪುವುದು (ಅಥವಾ ಲಿಂಗತ್ವದ ಸ್ಥಿರತೆ/ಸ್ಥಾಯಿತ್ವ) ದ್ರವಗಳು ಮತ್ತು ದ್ರವ್ಯರಾಶಿಯ ಸ್ಥಾಯಿತ್ವದಂತಹ ಸಂಜ್ಞಾನಾತ್ಮಕ ವಿಕಾಸದಲ್ಲಿ ಪ್ರಸ್ತುತವಾಗುವ ಇತರ ಅಂಶಗಳೊಂದಿಗೆ ಸಂಬಂಧಪಟ್ಟಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ ಎಂದು ಹೊರಗೆಡಹುತ್ತವೆ (ಮಾರ್ಕಸ್ ಮತ್ತು ಓವರ್ಟನ್, 1978; ಮುನ್ರೋ, ಶಿಮಿನ್, ಮತ್ತು ಮುನ್ರೋ 1984; ಸ್ಕಿಬಾಲೋ ಮತ್ತು ರೂಬಲ್, 1999).  ಜೊತೆಗೆ ಲಿಂಗತ್ವ ಸುಸಂಗತತೆಯನ್ನು ತಲುಪಿದ ಗಂಡುಮಕ್ಕಳು ಲಿಂಗತ್ವ ರೂಢಮಾದರಿಗಳನ್ನು ಆಧರಿಸಿ ಆಟದ ಆಯ್ಕೆಗಳನ್ನು ಮಾಡುವುದು, ಮತ್ತು (ವಾರಿನ್, 2000), ಟೀವಿಯಲ್ಲಿ ಮಹಿಳಾ ಪಾತ್ರಗಳಿಗಿಂತ ಪುರುಷ ಪಾತ್ರಗಳ ಮೇಲೆ ಹೆಚ್ಚು ಗಮನ

ನೀಡುತ್ತಾರೆ(ಲ್ಯೂಕ್-ಅಲೆಸ್ಕಾ ಮತ್ತಿತರರು., 1995), ಮತ್ತು ಮಹಿಳಾ ಮಾದರಿಗಳು ಆಯ್ದುಕೊಳ್ಳುವ ನವೀನ ಆಟಿಕೆಗಳಿಗಿಂತ (ಆ ಆಟಿಕೆಗಳು *ಹೆಚ್ಚು ಆಕರ್ಷಕವಾಗಿದ್ದರೂ* ಸಹ) ಪುರುಷ ಮಾದರಿಗಳು ಆಯ್ದುಕೊಳ್ಳುವ ಹೊಸ ಆಟಿಕೆಗಳನ್ನು ಇಷ್ಟಪಡುತ್ತಾರೆ (ಫ್ರೇ ಮತ್ತು ರೂಬಲ್, 1992). ಹೀಗಾಗಿ ಪಕ್ವವಾದ ಲಿಂಗತ್ವ ಅನನ್ಯತೆಯುಳ್ಳ ಮಕ್ಕಳು (ಮುಖ್ಯವಾಗಿ ಗಂಡುಮಕ್ಕಳು) ಜಾಗರೂಕತೆಯಿಂದ ಆಡುತ್ತಾರೆ ಮತ್ತು ತಮ್ಮ ಲಿಂಗತ್ವದ ಇತರ ಸದಸ್ಯರು ಅವರಿಗೆ ಯಾವುದು ಹೆಚ್ಚು ಸೂಕ್ತ ಎಂದು ಕಾಣುತ್ತಾರೋ ಅಂತಹ ಆಟಿಕೆಗಳು ಅಥವಾ ಚಟುವಟಿಕೆಗಳನ್ನು ಆಯ್ದುಕೊಳ್ಳುತ್ತಾರೆ.

**ಮೂಲಭೂತ ಲಿಂಗತ್ವ ಅನನ್ಯತೆ**: ಒಂದು ಮಗುವು ತನ್ನನ್ನು ತಾನು ಒಂದು ಹುಡುಗ ಅಥವಾ ಹುಡುಗಿಯೆಂದು ಗುರುತಿಸಿಕೊಳ್ಳುವ ಲಿಂಗತ್ವ ಅನನ್ಯತೆಯ ಮೊದಲ ಹಂತ.

**ಲಿಂಗತ್ವ ಸ್ತಿಮಿತ**: ಲಿಂಗತ್ವವು ಕಾಲಾನಂತರವೂ ಸ್ಥಿರ ಎಂದು ಮಗುವು ಅರಿಯುವ ಲಿಂಗತ್ವ ಅನನ್ಯತೆಯ ಹಂತ

.

**ಲಿಂಗತ್ವ ಸುಸಂಗತತೆ**: ಮಗುವು ವ್ಯಕ್ತಿಯೊಬ್ಬನ ಚಟಿವಟಿಕೆಗಳು ಅಥವಾ ವೇಷಭೂಷಣದಲ್ಲಿ ಬದಲಾವಣೆಯಾದರೂ ವ್ಯಕ್ತಿಯ ಲಿಂಗತ್ವವು ಮಾತ್ರ ಬದಲಾಗದು ಎಂಬುದನ್ನು ಅರಿತುಕೊಳ್ಳುವ ಲಿಂಗತ್ವ ಅನನ್ಯತೆಯ ಹಂತ ( ಲಿಂಗತ್ವ ಸ್ಥಿರತೆ ಎಂದೂ ಕರೆಯಲಾಗುತ್ತದೆ)

## ಕ್ಹೋಲ್‌ಬರ್ಗ್ ರವರ ಸಿದ್ಧಾಂತದ ಮೇಲಿನ ಟೀಕೆಗಳು

ಕೋಲ್‌ಬರ್ಗ್ ಅವರ ಸಿದ್ಧಾಂತದ ಒಂದು ಮುಖ್ಯ ಸಮಸ್ಯೆಯನ್ನು ನೀವು ಈಗಾಗಲೇ ಗಮನಿಸಿರಬಹುದು: ಮಗುವಿನ ಲಿಂಗತ್ವ ಅನನ್ಯತೆಯು ಪಕ್ವಗೊಳ್ಳುವ ಮೊದಲೇ ಲಿಂಗತ್ವ ಪುರೂಪಣೆಯ ಪ್ರಕ್ರಿಯೆಯು ನಡೆಯುತ್ತಿರುತ್ತದೆ. 2 ವರ್ಷದ ಹುಡುಗರು ಒಂದು ಮೂಲಭೂತ ಲಿಂಗತ್ವ ಅನನ್ಯತೆಯನ್ನು ಸಾಧಿಸಿಕೊಳ್ಳುವ ಮೊದಲೇ ಪುರುಷತನದ ಆಟಿಕೆಗಳನ್ನು ಇಷ್ಟಪಡುತ್ತಾನೆಂಬ ಉದಾಹರಣೆಯನ್ನು ಮತ್ತು ಎರಡೂ ಲಿಂಗಗಳಿಗೆ ಸೇರಿದ 3 ವರ್ಷದ ಮಕ್ಕಳು ಸ್ವಲಿಂಗೀಯ ಮಾದರಿಗಳನ್ನು ಅವುಗಳ ನಡುವಿನ ನಿರ್ದಿಷ್ಟ ವ್ಯತ್ಯಾಸಗಳನ್ನು ಗುರುತಿಸುವ ಮೂಲಕ ಅನುಸರಿಸಲು ಶುರು ಮಾಡುವ ಬಹಳ ಮೊದಲೇ ಲಿಂಗತ್ವ ಪಾತ್ರಗಳಿಗೆ ಸಂಬಂಧಿಸಿದ ರೂಢಮಾದರಿಗಳನ್ನು ಅರಿತಿರುತ್ತಾರೆ ಮತ್ತು ಸ್ವಲಿಂಗೀಯ ಚಟುವಟಿಕೆಗಳು ಹಾಗೂ ಜೊತೆಗಾರರೆಡೆಗಿನ ಆಯ್ಕೆಗಳು ರೂಪುಗೊಂಡಿರುತ್ತವೆ ಎಂಬುದನ್ನೂ ನೆನಪು ಮಾಡಿಕೊಳ್ಳಿ. ಜೊತೆಗೆ, ಮಕ್ಕಳು 3 ವರ್ಷಗಳನ್ನು ತಲುಪಿದ ನಂತರ ಆರಂಭದಲ್ಲಿ ತಮ್ಮನ್ನು ತಾವು ಹುಡುಗ ಅಥವಾ ಹುಡುಗಿಯೆಂದು ವರ್ಗೀಕರಿಸಿಕೊಂಡಿರುತ್ತಾರೆ. ಆದುದರಿಂದ ಅವರ ಲಿಂಗತ್ವದ ಪುನರ್‌ನಿಯೋಜನೆ ತೀರಾ ಕಷ್ಟ (ಇದು **ಕ್ಹೋ**ಲ್‌ಬರ್ಗ್ ಅವರ ಮೂಲಭೂತ ಅನನ್ಯತೆಯ ಹಂತ) ಮತ್ತು ಅಷ್ಟೇ ಅಲ್ಲ, ಲಿಂಗತ್ವ ಮತ್ತು ಲಿಂಗತ್ವ ಪಾತ್ರಗಳಿಗೆ ಸಂಬಂಧಿಸಿದ ರೂಢಮಾದರಿಗಳ ಬಗೆಗೆ ಮಕ್ಕಳ ಆಲೋಚನೆಗಳು ಎಷ್ಟು ಪೆಡಸಾಗಿರುತ್ತದೆಯೆಂದರೆ ಅವು ಲಿಂಗತ್ವ ಸ್ತಿಮಿತ ಹಂತದ ಆಲೋಚನೆಗಳೆಂಬಂತೆ ತೋರುತ್ತವೆ (ಲಿಂಗತ್ವ ಸುಸಂಗತೆಯಲ್ಲ); ಮತ್ತು ಒಮ್ಮೆ ಲಿಂಗತ್ವ ಸುಸಂಗತೆಯನ್ನು ತಲುಪಿದ ನಂತರ ಲಿಂಗತ್ವ ರೂಢಮಾದರಿಗಳ ಬಗೆಗಿನ ಅವರ ಆಲೋಚನೆಗಳು ವಾಸ್ತವದಲ್ಲಿ ಹೆಚ್ಚು ಮುಕ್ತವಾಗುತ್ತ ಹೋಗುತ್ತವೆ (ರೂಬಲ್,

ಮಾರ್ಟಿನ್, ಮತ್ತು ಬೆರೆನ್‌ಬಾಮ್, 2006); ರೂಬಲ್ ಮತ್ತಿತರರು., 2007). ಆದ್ದರಿಂದ ಲಿಂಗತ್ವ ಪ್ರರೂಪಣೆಯು ಆರಂಭವಾಗುವ ಮೊದಲು ಲಿಂಗತ್ವದ ಬಗೆಗಿನ ಪರಿಕಲ್ಪನೆಯು ಪರಿಪಕ್ವವಾಗಿರಬೇಕಾಗುತ್ತದೆ ಎಂಬ ವಿಚಾರಕ್ಕೆ ಕೋಲ್‌ಬರ್ಗ್ ಅತಿಯಾದ ಪ್ರಾಶಸ್ತ್ಯ ನೀಡುತ್ತಾರೆ. ಲಿಂಗತ್ವ ರೂಢಮಾದರಿಗಳನ್ನು ದಕ್ಕಿಸಿಕೊಳ್ಳಲು ಮತ್ತು ಬಲವಾದ ಲಿಂಗತ್ವ ಪ್ರರೂಪಿತ ಆಟಿಕೆಗಳು ಮತ್ತು ಚಟುವಟಿಕೆಗಳ ಆಯ್ಕೆಯನ್ನು ರೂಪಿಸಿಕೊಳ್ಳಲು ಮಕ್ಕಳಿಗೆ ಲಿಂಗತ್ವದ ಬಗೆಗಿನ ಒಂದು ಸೀಮಿತ ಗ್ರಹಿಕೆ ಇದ್ದರೆ ಸಾಕು ಎನ್ನುವುದನ್ನು ನಾವು ಮುಂದಿನ ವಿಭಾಗದಲ್ಲಿ ನೋಡಲಿದ್ದೇವೆ.

## ಲಿಂಗತ್ವ ಮನೋನಕ್ಷಾ ಸಿದ್ಧಾಂತ (Gender schema theory)

**ಲಿಂಗತ್ವ ಮನೋನಕ್ಷೆ**: ಮಾಹಿತಿ ಸಂಸ್ಕರಣಕ್ಕೆ ಮಾರ್ಗದರ್ಶನ ಮಾಡುವ ಸ್ತ್ರೀ ಮತ್ತು ಪುರುಷರ ಬಗೆಗಿನ ನಂಬಿಕೆಗಳು ಮತ್ತು ನಿರೀಕ್ಷೆಗಳ ವ್ಯವಸ್ಥಿತ ಸಂಚಯಗಳು

**"ಒಳ-ಗುಂಪು / ಹೊರ ಗುಂಪು" ಮನೋನಕ್ಷೆ**: ಸ್ತ್ರೀ ಮತ್ತು ಪುರುಷರ ಲಕ್ಷಣಗಳನ್ನು ನಿರ್ಧರಿಸುವ ವಿಶಿಷ್ಟ ನಡವಳಿಕೆಗಳು, ಪಾತ್ರಗಳು, ಚಟುವಟಿಕೆಗಳು ಮತ್ತು ವರ್ತನೆಗಳ ಬಗೆಗೆ ವ್ಯಕ್ತಿಯೊಬ್ಬನು ಹೊಂದಿರುವ ಸಾಮಾನ್ಯ ಜ್ಞಾನ.

ಕ್ಯಾರಲ್ ಮಾರ್ಟಿನ್ ಮತ್ತು ಚಾರ್ಲ್ಸ್ ಹಾಲ್ವರ್ಸನ್ (1981, 1987) ಲಿಂಗತ್ವ ಪ್ರರೂಪಣೆಯನ್ನು ಕುರಿತು ಭರವಸೆದಾಯಕವಾಗಿರುವ ಒಂದು ವಿಭಿನ್ನ ಸಂಜ್ಞಾನಾತ್ಮಕ ಸಿದ್ಧಾಂತವನ್ನು (ವಾಸ್ತವದಲ್ಲಿ ಅದು ಮಾಹಿತಿ-ಸಂಸ್ಕರಣದ ಸಿದ್ಧಾಂತ) ಮಂಡಿಸಿದ್ದಾರೆ,. ಮಕ್ಕಳು ತಮ್ಮ "ಹುಡುಗ" ಅಥವಾ "ಹುಡುಗಿ"ಯ ಸ್ವ-ಚಿತ್ರಣದೊಂದಿಗೆ ಹೊಂದಿಕೊಳ್ಳುವ ಆಸಕ್ತಿಗಳು, ಮೌಲ್ಯಗಳು, ಮತ್ತು ವರ್ತನೆಗಳನ್ನು ಪಡೆದುಕೊಳ್ಳುವುದಕ್ಕೆ ದೊಡ್ಡ ಪ್ರಮಾಣದಲ್ಲಿ ಪ್ರಚೋದಿತರಾಗುತ್ತಾರೆ ಎಂಬುದನ್ನು **ಕ್ಹೋ**ಲ್‌ಬರ್ಗ್ ರವರ ಹಾಗೆ ಮಾರ್ಟಿನ್ ಮತ್ತು ಹಾಲ್ವರ್ಸನ್ ಕೂಡಾ ಒಪ್ಪಿಕೊಳ್ಳುತ್ತಾರೆ. ಆದರೆ **ಕ್ಹೋ**ಲ್‌ಬರ್ಗ್ ರವರಿಗೆ ವ್ಯತಿರಿಕ್ತವಾಗಿ ಈ "ಸ್ವ-ಸಾಮಾಜಿಕೀಕರಣ"ವು ಮಗುವಿಗೆ ಎರಡೂವರೆಯಿಂದ ಮೂರು ವರ್ಷಗಳಾಗುವ ಹೊತ್ತಿಗೆ, ಅಂದರೆ ಮಗುವು ಒಂದು ಮೂಲಭೂತ ಲಿಂಗತ್ವ ಅನನ್ಯತೆಯನ್ನು ಪಡೆದುಕೊಳ್ಳುತ್ತಿದ್ದ ಹಾಗೆ ಶುರುವಾಗುತ್ತದೆ, ಮತ್ತು ಮಗುವಿಗೆ 6 ಅಥವಾ 7 ವರ್ಷವಾಗುತ್ತಿದ್ದ ಹಾಗೆ , ಅಂದರೆ ಮಗುವು ಲಿಂಗತ್ವ ಸುಸಂಗತತೆಯ ಹಂತವನ್ನು ತಲುಪುವ ಹೊತ್ತಿಗೆ ಅದು ಚೆನ್ನಾಗಿ ರೂಪುಗೊಳ್ಳುತ್ತಿರುತ್ತದೆ ಎಂದು ಮಾರ್ಟಿನ್ ಮತ್ತು ಹಾಲ್ವರ್ಸನ್ ವಾದಿಸುತ್ತಾರೆ.

ಮಾರ್ಟಿನ್ ಮತ್ತು ಹಾಲ್ವರ್ಸನ್‌ರವರ **ಲಿಂಗತ್ವ ಮನೋನಕ್ಷಾ ಸಿದ್ಧಾಂತದ** ಪ್ರಕಾರ ಒಂದು ಮೂಲಭೂತ ಲಿಂಗತ್ವ ಅನನ್ಯತೆಯನ್ನು ಸ್ಥಾಪಿಸಿಕೊಳ್ಳುವುದು ಮಗುವನ್ನು ಲಿಂಗಗಳ ಬಗ್ಗೆ ತಿಳಿದುಕೊಳ್ಳಲು ಮತ್ತು ಈ ಮಾಹಿತಿಯನ್ನು ಲಿಂಗತ್ವ ಮನೋನಕ್ಷೆಯಲ್ಲಿ ಅಳವಡಿಸಿಕೊಳ್ಳಲು ಪ್ರೇರೇಪಿಸುತ್ತದೆ. – **ಲಿಂಗತ್ವ ಮನೋನಕ್ಷೆ ಎಂದರೆ** - ಯಾವ ರೀತಿಯ ಮಾಹಿತಿಗೆ ಗಮನ ನೀಡುವುದು, ವಿಸ್ತರಿಸುವುದು ಮತ್ತು ನೆನೆಪಿಟ್ಟುಕೊಳ್ಳುವುದನ್ನು ಪ್ರಭಾವಿಸುವ ಸ್ತ್ರೀ-ಪುರುಷರ ಬಗೆಗಿನ ನಂಬಿಕೆಗಳು ಮತ್ತು ನಿರೀಕ್ಷೆಗಳ ಸಂಘಟಿತ ಸಂಚಯಗಳು. ಮೊದಲಿಗೆ ಮಕ್ಕಳು "ಒಳಗುಂಪು/ ಹೊರಗುಂಪು" ಎಂದು **ಒಂದು ಸರಳ** ಸಂರಚನೆ ಪಡೆಯುತ್ತಾರೆ, ಇದು ಅವರಿಗೆ

ಕೆಲವು ವಸ್ತುಗಳು, ವರ್ತನೆಗಳು, ಮತ್ತು ಪಾತ್ರಗಳನ್ನು ಅವು "ಹುಡುಗರಿಗಾಗಿ" ಎಂದು ವರ್ಗೀಕರಿಸಲು, ಮತ್ತು ಹಾಗೆಯೇ ಆ ಗುಂಪಿಗೆ ಸೇರದ ಇತರ ವಸ್ತುಗಳು, ವರ್ತನೆಗಳು, ಮತ್ತು ಪಾತ್ರಗಳನ್ನು "ಹುಡುಗಿಯರಿಗಾಗಿ" ಎಂದು ವರ್ಗೀಕರಿಸಲು (ಉದಾಹರಣೆಗೆ ಟ್ರಕ್ಕುಗಳು ಹುಡುಗರಿಗೆ, ಹುಡುಗಿಯರು ಅಳಬಹುದು, ಆದರೆ ಹುಡುಗರು ಅಳುವಂತಿಲ್ಲ, ಹೀಗೆ) ಅನುವು ಮಾಡಿಕೊಡುತ್ತದೆ. ಈ ಮಾಹಿತಿಯನ್ನೇ ಸಂಶೋಧಕರು ಸಾಮಾನ್ಯವಾಗಿ ಮಕ್ಕಳ ಲಿಂಗತ್ವ ರೂಢಮಾದರಿಗಳ ಜ್ಞಾನವನ್ನು ಅಧ್ಯಯನ ಮಾಡುವಾಗ ಬಳಸಿಕೊಳ್ಳುವುದು. ವಸ್ತುಗಳು ಮತ್ತು ಚಟುವಟಿಕೆಗಳ ಬಗೆಗಿನ ಈ ಆರಂಭಿಕ ವರ್ಗೀಕರಣವು ಮಕ್ಕಳ ಆಲೋಚನೆಯ ಮೇಲೆ ಪರಿಣಾಮ ಬೀರುವುದು ಸ್ಪಷ್ಟ. ಒಂದು ಅಧ್ಯಯನದಲ್ಲಿ 4 ರಿಂದ 5 ರ ಒಳಗಿನ ಮಕ್ಕಳಿಗೆ ಅವರಿಗೆ ಪರಿಚಿತವಲ್ಲದ ಕೆಲವು ಲಿಂಗ-ತಾಟಸ್ಥ್ಯ (gender-neutral) ಆಟಿಕೆಗಳನ್ನು ನೀಡಿ (ತಿರುಗುವ ಗಂಟೆಗಳು, ಆಯಸ್ಕಾಂತದ ಸ್ಟ್ಯಾಂಡ್). ಆ ವಸ್ತುಗಳು "ಹುಡುಗರಿಗೆ" ಅಥವಾ "ಹುಡುಗಿಯರಿಗೆ" ಎಂದು ಹೇಳಿ, ಅವರು ಮತ್ತು ಇತರ ಹುಡುಗರು ಅಥವಾ ಹುಡುಗಿಯರು ಅವುಗಳನ್ನು ಇಷ್ಟಪಡುತ್ತಾರೆಯೆ ಎಂದು ಪ್ರಶ್ನಿಸಲಾಯಿತು.. ಮಕ್ಕಳು ಯೋಚಿಸಲು ವಸ್ತುಗಳ ಮೇಲಿದ್ದ ಗುರುತಿನ ಚೀಟಿಗಳ ನೆರವು ಪಡೆದರು. ಉದಾಹರಣೆಗೆ, ಬಾಲಕರು "ಹುಡುಗ"ರದ್ದು ಎಂದಿದ್ದ ವಸ್ತುಗಳನ್ನು ಇಷ್ಟಪಟ್ಟರು, ಮತ್ತು ತಮ್ಮಂತೆ ಇತರ ಬಾಲಕರೂ ಸಹ ಈ ವಸ್ತುಗಳನ್ನು ಬಾಲಕಿಯರಿಗಿಂತ ಹೆಚ್ಚು ಇಷ್ಟಪಡುತ್ತಾರೆ ಎಂದು ಭಾವಿಸಿದರು. ಇದೇ ವಸ್ತುಗಳಿಗೆ "ಹುಡುಗಿಯರದ್ದು" ಎಂಬ ಗುರುತಿನ ಚೀಟಿ ಅಂಟಿಸಿದಾಗ ಮೊದಲಿನದಕ್ಕೆ ವಿರುದ್ಧವಾದ ತರ್ಕವನ್ನು ಮಕ್ಕಳು ಮಾಡಿದ್ದರು. ಮಾರ್ಟಿನ್ ಮತ್ತು ರೂಬಲ್ (2004) ಹೇಳುವ ಹಾಗೆ, "ಮಕ್ಕಳು ಲಿಂಗ-ಪತ್ತೇದಾರರಂತೆ -ನಿರ್ದಿಷ್ಟ ಚಟುವಟಿಕೆಯಲ್ಲಿ ಯಾರು ತೊಡಗಿಕೊಳ್ಳಬೇಕು, ಯಾರು ತೊಡಗಿಕೊಳ್ಳಬಾರದು, ಯಾರು ಯಾರೊಂದಿಗೆ ಆಡಬಹುದು, ಮತ್ತು ಏಕೆ ಹುಡುಗರು ಮತ್ತು ಹುಡುಗಿಯರು ಪರಸ್ಪರ ಭಿನ್ನ, ಇತ್ಯಾದಿ ಲಿಂಗತ್ವ ಸೂಚನೆಗಳನ್ನು ಹುಡುಕುತ್ತಾರೆ" (ಪು 67). ಅತ್ಯಂತ ಆಕರ್ಷಕವಾಗಿದ್ದ ಆಟಿಕೆಗಳೂ ಅವುಗಳು ಇತರ ಲಿಂಗತ್ವದವರಿಗೆ ಎಂದು ಗುರುತಿಸಲ್ಪಟ್ಟಾಗ ತಮ್ಮ ಆಕರ್ಷಣೆ ಕಳೆದುಕೊಂಡಿದ್ದವು. (ಮಾರ್ಟಿನ್, ಈಸೆನ್‌ಬಡ್, ಮತ್ತು ರೋಸ್, 1995).

ಈ ಸಿದ್ಧಾಂತದ ಪ್ರಕಾರ ಮಕ್ಕಳು ಮುಂದೆ ಅವರು ಲಿಂಗತ್ವ ಸಾಂಗತ್ಯ ಇರುವ ವರ್ತನೆಗಳನ್ನು ನಿರ್ವಹಿಸಲು ಅಗತ್ಯವಾದ ವಿಸ್ತೃತ ಮಾಹಿತಿ ಹೊಂದಿದ ಸ್ವ-ಲಿಂಗ ಮನೋನಕ್ಷೆಯನ್ನೂ ರಚಿಸಿಕೊಳ್ಳುತ್ತಾರೆ. ಮೂಲಭೂತ ಲಿಂಗತ್ವ ಅನನ್ಯತೆಯುಳ್ಳ ಒಬ್ಬ ಬಾಲಕಿಯು ಹೊಲಿಯುವುದು "ಹುಡುಗಿಯರ" ಕೆಲಸ ಮತ್ತು ವಿಮಾನಗಳನ್ನು ರಚಿಸುವುದ "ಹುಡುಗರ" ಕೆಲಸ ಎಂದು ಮೊದಲು ಕಲಿಯುತ್ತಾಳೆ. ನಂತರ, ಆಕೆ ಹುಡುಗಿಯಾಗಿರುವುದರಿಂದ, ಮತ್ತು ಸ್ವ-ಸಂಕಲ್ಪನೆಗೆ ತಕ್ಕಂತೆ ವರ್ತಿಸಲು ಬಯಸುವುದರಿಂದ ಅವಳು ಹೊಲಿಯುವುದನ್ನು ಕುರಿತ ಹೆಚ್ಚಿನ ಮಾಹಿತಿಯನ್ನು ಕಲೆ ಹಾಕಿ ತನ್ನ ಸ್ವ-ಲಿಂಗ ಮನೋನಕ್ಷೆಯಲ್ಲಿ, ಜೊತೆಗೆ ವಿಮಾನಗಳನ್ನು ರಚಿಸುವ ಮಾಹಿತಿಗಳನ್ನು ಹೆಚ್ಚಿನದಾಗಿ ಕಡೆಗಣಿಸುತ್ತಾಳೆ.

ಒಮ್ಮೆ ನಿರ್ಮಾಣವಾದ ನಂತರ ಈ ಲಿಂಗತ್ವ ಮನೋನಕ್ಷೆ ಸಾಮಾಜಿಕ ಮಾಹಿತಿಯನ್ನು ಸಂಸ್ಕರಿಸಲು ಕಥಾಲೇಖಗಳ (script) ಹಾಗೆ ಕೆಲಸ ಮಾಡುತ್ತವೆ.

ತಮ್ಮ ನಿತ್ಯದ ಘಟನೆಗಳಿಗೆ ಸಂಬಂಧಿಸಿದ ಜ್ಞಾನ ಸೂಚಿಗಳಿಂದ ಭಿನ್ನವಾದ ಯಾವುದೋ ಮಾಹಿತಿಯನ್ನು ನೆನಪಿಸಿಕೊಳ್ಳುವಾಗ ಮಕ್ಕಳಿಗೆ ಕಷ್ಟವಾಗುತ್ತದೆಯೆಂಬ ಸಂಗತಿಯನ್ನು 7ನೆಯ ಅಧ್ಯಾಯದಿಂದ ನೆನಪಿಸಿಕೊಳ್ಳಿ. ಅದು ಲಿಂಗತ್ವ ಜ್ಞಾನಕ್ಕೂ ಅನ್ವಯಿಸುತ್ತದೆ: ಮಕ್ಕಳು ತಮ್ಮ ಲಿಂಗತ್ವ ಮನೋನಕ್ಷೆಗೆ ಹೊಂದಿಕೊಳ್ಳುವ ಮಾಹಿತಿಗಳನ್ನು ಸಂಕೇತೀಕರಿಸಿಕೊಳ್ಳುತ್ತಾರೆ ಮತ್ತು ಹಾಗೆ ನೆನಪಿಟ್ಟುಕೊಳ್ಳುತ್ತಾರೆ ಮತ್ತು ಲಿಂಗತ್ವ ಮನೋನಕ್ಷೆಗೆ ಹೊಂದಿಕೊಳ್ಳದ ಮಾಹಿತಿಗಳನ್ನು ಮರೆಯುತ್ತಾರೆ ಅಥವಾ ತಮ್ಮ ರೂಢಮಾದರಿಗಳೊಂದಿಗೆ ಅದು ಹೊಂದಿಕೊಳ್ಳುವ ರೀತಿಯಲ್ಲಿ ಅದನ್ನು ಮಾರ್ಪಡಿಸಿಕೊಳ್ಳುತ್ತಾರೆ (ಲಿಬೆನ್ ಮತ್ತು ಸಿಗನೊರೆಲ್ಲಾ, 1993; ಮಾರ್ಟಿನ್ ಮತ್ತು ಹಾಲ್ವರ್ಸನ್, 1983). ಇದು ಮಕ್ಕಳು 6 ರಿಂದ 7 ವರ್ಷ ತಲುಪಿದ್ದರಂತೂ ವಿಶೇಷವಾಗಿ ಸತ್ಯವಾಗಿರುತ್ತದೆ, ಆ ಹೊತ್ತಿಗೆ ಅವರ ಸ್ವಂತದ ರೂಢಮಾದರಿಯ ಜ್ಞಾನ ಮತ್ತು ಆಯ್ಕೆಗಳು ಹರಳುಗಟ್ಟಿರುತ್ತವೆ ಮತ್ತು ವಿಶೇಷವಾಗಿ ಬಲಗೊಂಡಿರುತ್ತವೆ (ವೆಲ್ಚ್-ರೋಸ್ ಮತ್ತು ಶ್ಮಿಟ್, 1996). ಈ ಹಿಂದೆ ಪ್ರಸ್ತುತ ಪಡಿಸಿದ '**ಸಂಶೋಧನೆಯ ಲಕ್ಷ್ಯ**'ದ ಬಾಕ್ಸ್ ನಲ್ಲಿ ಈ ವಿಷಯಕ್ಕೆ ಪುರಾವೆ ಒದಗಿಸಲಾಗಿದೆ; ಪಾತ್ರಗಳು ಲಿಂಗತ್ವ-ಅನುಚಿತ ವರ್ತನೆಗಳನ್ನು ತೋರಿಸಿದ ಕತೆಗಳನ್ನು (ಉದಾಹರಣೆಗೆ, ಬಾಲಕಿಯೊಬ್ಬಳು ಕಟ್ಟಿಗೆಯನ್ನು ಕಡಿಯುವುದು) ಕೇಳಿದ ಮಕ್ಕಳು ಕತೆಯಲ್ಲಿ ನಡೆದ ಘಟನೆಯನ್ನು ನೆನಪಿಸಿಕೊಂಡರಾದರೂ, ತಮ್ಮ ಲಿಂಗತ್ವ ರೂಢಮಾದರಿಗಳಿಗೆ ಹೊಂದಿಕೊಳ್ಳುವ ರೀತಿಯಲ್ಲಿ ದೃಶ್ಯವನ್ನು (ಬಾಲಕನೊಬ್ಬ ಕಟ್ಟಿಗೆ ಕಡಿಯುತ್ತಿದ್ದ ಎಂದು ಹೇಳುವ ಮೂಲಕ) ತಿರುಚಿದ್ದರು. ಖಂಡಿತವಾಗಿಯೂ, ಸ್ತ್ರೀ ಮತ್ತು ಪುರುಷರ ಬಗೆಗಿನ ಆಧಾರವಿಲ್ಲದ ನಂಬಿಕೆಗಳು ಏಕೆ ಅಷ್ಟು ನಿಧಾನವಾಗಿ ಸಾಯುತ್ತವೆ ಎಂಬುದಕ್ಕೆ ರೂಢಮಾದರಿಗೆ ವಿರುದ್ಧವಾದ ಮಾಹಿತಿಯನ್ನು ಮರೆಯುವ ಅಥವಾ ಮಾರ್ಪಡಿಸುವ ಈ ಬಲವಾದ ಪ್ರವೃತ್ತಿಯು ಕಾರಣವನ್ನು ಒದಗಿಸುತ್ತದೆ.

ಒಟ್ಟಿನಲ್ಲಿ ಮಾರ್ಟಿನ್ ಮತ್ತು ಹಾಲ್ವರ್ಸನ್‌ರವರ ಲಿಂಗತ್ವ ಮನೋನಕ್ಷೆ ಸಿದ್ಧಾಂತವು ಲಿಂಗತ್ವ ಪ್ರರೂಪಣದ ಪ್ರಕ್ರಿಯೆಯ ಮೇಲೆ ಒಂದು ಆಸಕ್ತಿದಾಯಕ ದೃಷ್ಟಿಕೋನವನ್ನು ನೀಡುತ್ತದೆ. ಲಿಂಗತ್ವ ಪಾತ್ರಗಳಿಗೆ ಸಂಬಂಧಿಸಿದ ರೂಢಮಾದರಿಗಳು ಹೇಗೆ ಹುಟ್ಟಿಕೊಳ್ಳುತ್ತವೆ ಮತ್ತು ಅವು ಹೇಗೆ ಮುಂದುವರೆದುಕೊಂಡು ಬರುತ್ತವೆ ಎಂಬುದನ್ನಷ್ಟೇ ಅಲ್ಲದೆ, ಲಿಂಗತ್ವವು ಒಂದು ಶಾಶ್ವತವಾದ ಲಕ್ಷಣ ಎನ್ನುವುದನ್ನು ಮಗುವು ಅರಿಯುವ ಬಹಳ ಮೊದಲೇ ನಡೆಯುವ ಲಿಂಗತ್ವ-ಪಾತ್ರಗಳ ಆಯ್ಕೆಗಳು ಮತ್ತು ಲಿಂಗತ್ವ ಪ್ರರೂಪಿತ ವರ್ತನೆಗಳ ಬೆಳವಣಿಗೆಗೆ, ಮಕ್ಕಳಲ್ಲಿ ಉದಯಿಸುವ ಈ ಸಂರಚನೆಗಳು ಹೇಗೆ ಸಹಾಯ ಮಾಡುತ್ತವೆ ಎನ್ನುವುದನ್ನೂ ಈ ಮಾದರಿಯು ವಿವರಿಸುತ್ತದೆ.

**ಸ್ವ-ಲಿಂಗೀಯ- ಮನೋನಕ್ಷೆ** : ಒಂದು ವ್ಯಕ್ತಿಯು ಲಿಂಗತ್ವ-ಸಾಂಗತ್ಯ ಚಟುವಟಿಕೆಗಳನ್ನು ಮಾಡಲು ಮತ್ತು, ಲಿಂಗತ್ವ-ಪಾತ್ರಗಳನ್ನು ನಿರ್ವಹಿಸಲು ಸಹಾಯ ಮಾಡುವ ವಿಸ್ತೃತ ಜ್ಞಾನ ಅಥವಾ ಕಾರ್ಯಯೋಜನೆಗಳು.

## ಒಂದು ಏಕೀಕೃತ ಸಿದ್ಧಾಂತ

ಜೈವಿಕ, ಸಾಮಾಜಿಕ ಕಲಿಕಾ ಸಂಜ್ಞಾನಾತ್ಮಕ ವಿಕಾಸ, ಮತ್ತು ಲಿಂಗತ್ವ ಮನೋನಕ್ಷೆ ದೃಷ್ಟಿಕೋನಗಳಲ್ಲಿ ಪ್ರತಿಯೊಂದೂ ದೃಷ್ಟಿಕೋನವು ಲಿಂಗ ವ್ಯತ್ಯಾಸಗಳು ಮತ್ತು ಲಿಂಗತ್ವ-ಪಾತ್ರಗಳ ವಿಕಾಸದ ಬಗೆಗಿನ ನಮ್ಮ ಗ್ರಹಿಕೆಯನ್ನು ಉತ್ತಮಗೊಳಿಸಲು ತಮ್ಮ ಕೊಡುಗೆಗಳನ್ನು ನೀಡಿವೆ (ರೂಬಲ್, ಮಾರ್ಟಿನ್ ಮತ್ತು ಬೆರೆನ್‌ಬಾಮ್, 2006; ಸರ್ಬಿನ್, ಪೌಲಿಸ್ಟಾ, ಮತ್ತು ಗುಲ್ಕೊ, 1993). ವಾಸ್ತವದಲ್ಲಿ, ಈ ವಿಭಿನ್ನ ಸಿದ್ಧಾಂತಗಳು ಒತ್ತು ನೀಡುವ ಪ್ರಕ್ರಿಯೆಗಳು ಬೇರೆ ಬೇರೆ ಅವಧಿಗಳಲ್ಲಿ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತವೆ. ಜೈವಿಕ ಸಿದ್ಧಾಂತಗಳು ಮಗುವನ್ನು ಗಂಡು ಅಥವಾ ಹೆಣ್ಣೆಂದು ಗುರುತಿಸಿ  ಅದಕ್ಕನುಗುಣವಾಗಿ ಪೋಷಿಸುವುದಕ್ಕೆ ಕಾರಣವಾಗುವ ಜನನಪೂರ್ವ ಪ್ರಮುಖ ಜೈವಿಕ ಬೆಳವಣಿಗೆಗಳಿಗೆ ವಿವರಣೆಯನ್ನು ಒದಗಿಸುತ್ತದೆ. ಸಾಮಾಜಿಕ ಕಲಿಕಾ ಸಿದ್ಧಾಂತಿಗಳು ಒತ್ತು ನೀಡುವ ವಿಭೇದಾತ್ಮಕ ಪುನರ್ಬಲನ ಪ್ರಕ್ರಿಯೆಯು ಆರಂಭಿಕ ಹಂತದ ಲಿಂಗತ್ವ ಪ್ರರೂಪಣೆಯನ್ನು ವಿವರಿಸುತ್ತದೆ: ಚಿಕ್ಕ ಮಕ್ಕಳು ಲಿಂಗತ್ವ-ಸಮಂಜಸ ವರ್ತನೆಗಳನ್ನು ತೋರುವುದು ಹೆಚ್ಚಿನದಾಗಿ ಅವರ ಹತ್ತಿರದ ಇತರ ಜನರು ಈ ಚಟುವಟಿಕೆಗಳನ್ನು ಪ್ರೋತ್ಸಾಹಿಸುತ್ತಾರೆ ಮತ್ತು ಅನ್ಯ-ಲಿಂಗೀಯ ಸಮಂಜಸ ವರ್ತನೆಗಳನ್ನು ತೋರಿದರೆ ಖಂಡಿಸುತ್ತಾರೆ ಎಂಬುದಕ್ಕಾಗಿ. ಈ ಆರಂಭಿಕ ಸಾಮಾಜಿಕೀಕರಣ ಮತ್ತು ವರ್ಗೀಕರಣದ ಕೌಶಲ್ಯಗಳ ಬೆಳವಣಿಗೆಯ ಫಲವಾಗಿ ಎರಡೂವರೆಯಿಂದ ಮೂರು ವರ್ಷದ ಮಕ್ಕಳು ಒಂದು ಮೂಲಭುತ ಲಿಂಗತ್ವ ಅನನ್ಯತೆಯನ್ನು ಪಡೆದುಕೊಳ್ಳುತ್ತಾರೆ, ಹಾಗೂ ಲಿಂಗತ್ವ ಮನೋನಕ್ಷೆ ರೂಪಿಸಿಕೊಳ್ಳಲು ಆರಂಭಿಸುತ್ತಾರೆ.  ಈ ಸಂರಚನೆಗಳು, 1) ಹುಡುಗ ಮತ್ತು ಹುಡುಗಿಯರು ಹೇಗಿರುತ್ತಾರೆ ಎಂಬುದನ್ನು, 2) ಒಬ್ಬ ಹುಡುಗ ಮತ್ತು ಹುಡುಗಿಯಾಗಿ ಹೇಗೆ ಯೋಚಿಸಬೇಕು, ವರ್ತಿಸಬೇಕು ಎನ್ನುವುದನ್ನು ತಿಳಿಸಿಕೊಡುತ್ತವೆ. ನಂತರ ಅವರು 6 ಮತ್ತು 7ನೆಯ ವರ್ಷದ ಹೊತ್ತಿಗೆ ಲಿಂಗತ್ವ ಎಂದೂ ಬದಲಾಗದು, ಅವು ತಮ್ಮ ಶಾಶ್ವತ ಲಕ್ಷಣಗಳು ಎಂಬುದನ್ನು ಅರಿತ ಮೇಲೆ ಮಕ್ಕಳು ಲಿಂಗತ್ವ ಮನೋನಕ್ಷೆ ಬಗೆಗೆ ಗಮನ ಕೊಡುವುದನ್ನು ಕಡಿಮೆ ಮಾಡಿ ಯಾವ ಅಭಿವೃತ್ತಿಗಳು, ಚಟುವಟಿಕೆಗಳು, ಆಸಕ್ತಿಗಳು ಮತ್ತು ಶಿಷ್ಟಾಚಾರಗಳು ತಮ್ಮ ಲಿಂಗದ ಸದಸ್ಯರಿಗೆ ಹೆಚ್ಚು ಸೂಕ್ತ ಎಂದು ನಿರ್ಧರಿಸಲು ಸ್ವ-ಲಿಂಗೀಯ ಮಾದರಿಗಳಿಗೆ ಹೆಚ್ಚು-ಹೆಚ್ಚು ಗಮನ ಕೊಡತೊಡಗುತ್ತಾರೆ (ಕ್ಹೊಲ್‌ಬರ್ಗ್‌ರವರ ದೃಷ್ಟಿಕೋನ). ಈ ಬೆಳವಣಿಗೆಗಳನ್ನು ಒಂದು ಏಕೀಕೃತ ಮಾದರಿಯಂತೆ ( ಕೋಷ್ಟಕ 12.4ನೋಡಿರಿ) ತೋರಿಸಿದ ಮಾತ್ರಕ್ಕೆ ಮಗುವಿನ ಜನನಾನಂತರ ಜೈವಿಕ ಪ್ರಭಾವಗಳಿಗೆ ಮುಂದೇನೂ ಪಾತ್ರವಿರುವುದಿಲ್ಲ ಎಂದಾಗಲಿ ಅಥವಾ ಮಗು ಮೂಲಭೂತ ಲಿಂಗತ್ವ-ಅನನ್ಯತೆ ಪಡೆದುಕೊಂಡಾಕ್ಷಣ ವಿಭೇದಾತ್ಮಕ ಪುನರ್ಬಲನ ವಿಕಾಸದ ಮೇಲೆ ತನ್ನ ಪ್ರಭಾವ ನಿಲ್ಲಿಸುತ್ತದೆ ಎಂಬ ಅರ್ಥವಲ್ಲ.  ಆದರೆ ಒಬ್ಬ ಏಕೀಕೃತ ಸಿದ್ಧಾಂತಿಯು, ೩ ವರ್ಷದಿಂದ ಮಕ್ಕಳು ಸಕ್ರಿಯ *ಸ್ವ-ಸಮಾಜೀಕಾರಕರಾಗಿದ್ದು* ತಮ್ಮ ಪುರುಷ ಅಥವಾ ಸ್ತ್ರೀ ಸ್ವ-ಬಿಂಬಕ್ಕೆ ಸುಸಂಗತವಾದ ಪುರುಷತ್ವ ಅಥವಾ ಸ್ತ್ರೀತ್ವ ಲಕ್ಷಣಗಳನ್ನು ಗಳಿಸಿಕೊಳ್ಳಲು ಬಹಳ ಶ್ರಮಪಡುತ್ತಾರೆ ಎಂದು ಒತ್ತಿಹೇಳುತ್ತಾರೆ. ತಮ್ಮ ಮಕ್ಕಳು ಸಾಂಪ್ರದಾಯಿಕ ಲಿಂಗತ್ವ-ಪಾತ್ರ ಸ್ವೀಕರಿಸುವುದನ್ನು ನಿರುತ್ತೇಜನಗೊಳಿಸುವ ಆಶೆಯಿಟ್ಟುಕೊಂಡ ಪಾಲಕರು ಅವರ ಮಗ ಅಥವಾ ಮಗಳು ತಮ್ಮಷ್ಟಿಗೇ ತಾವೇ

ಪುಟ್ಟ "ಸೆಕ್ಸಿಸ್ಟ್ " ( ಲಿಂಗ ಭೇದಭಾವ ತೋರುವವರು) ಅಗುತ್ತಿದ್ದಾರೆ ಎಂದಾಗ ಚಕಿತರಾಗುತ್ತಾರೆ.

ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವಿದೆ: ಮಕ್ಕಳು ಸ್ತ್ರೀ ಅಥವಾ ಪುರುಷರಾಗುವುದರ ಬಗೆಗೆ ವಾಸ್ತವದಲ್ಲಿ ಏನನ್ನು ಕಲಿಯುತ್ತಾರೋ ಅದು ಹೆಚ್ಚಿನ ಮಟ್ಟಿಗೆ "ಲಿಂಗತ್ವ ಪಠ್ಯಕ್ರಮ"ದ ಹೆಸರಿನಲ್ಲಿ ಅವರ ಸಮಾಜವು ಅವರಿಗೆ ಏನನ್ನು ಒದಗಿಸುವುದೋ ಅದನ್ನು ಅವಲಂಬಿಸಿರುತ್ತದೆ ಎಂಬುದನ್ನು ಲಿಂಗತ್ವ-ಪಾತ್ರ ವಿಕಾಸದ ಎಲ್ಲಾ ಸಿದ್ಧಾಂತಗಳೂ ಒಪ್ಪಿಕೊಳ್ಳುತ್ತವೆ. ಅಂದರೆ ಲಿಂಗತ್ವ ಪಾತ್ರಗಳ ಬೆಳವಣಿಗೆಯನ್ನು ನಾವು ಒಂದು *ಪರಿಸರವಾದೀ* ಮಸೂರದಲ್ಲಿ ನೋಡಬೇಕು ಮತ್ತು ಇವತ್ತು ನಾವು ಸಮಾಜದಲ್ಲಿ ಕಾಣುವ ಸ್ತ್ರೀ ಮತ್ತು ಪುರುಷ ಲಕ್ಷಣಗಳ ವಿನ್ಯಾಸಗಳಲ್ಲಿ ಯಾವುವೂ ಅನಿವಾರ್ಯವಲ್ಲ ಎಂಬುದನ್ನೂ ಗುರುತಿಸಬೇಕು. (ಮಾರ್ಗರೆಟ್ ಮೀಡ್‌ರವರು ನ್ಯೂ ಗಿನಿಯ ಚಾಂಬುಲಿಯಲ್ಲಿ ಅವಲೋಕಿಸಿದ ತಿರುವು-ಮುರುವಾದ ಲಿಂಗತ್ವ ಪಾತ್ರಗಳ ವಿನ್ಯಾಸವನ್ನು ನೆನಪಿಸಿಕೊಳ್ಳಿ.) ಮತ್ತೆ ಬೇರಾವುದೋ ಯುಗದಲ್ಲಿ, ಬೇರಾವುದೋ ಸಂಸ್ಕೃತಿಯಲ್ಲಿ ಇದೇ ಲಿಂಗತ್ವ-ಪುರೂಪಣೆಯ ಪ್ರಕ್ರಿಯೆಯು ಬೇರಾವುದೋ ರೀತಿಯ ಬಾಲಕರು ಮತ್ತು ಬಾಲಕಿಯರನ್ನು ಉತ್ಪಾದಿಸಬಹುದು.

**ಕೋಷ್ಟಕ 12.4 ಏಕೀಕೃತ ಸಿದ್ಧಾಂತಿಗಳ ದೃಷ್ಟಿಕೋನದಿಂದ ಲಿಂಗತ್ವ ಪುರೂಪಣಾ ಪ್ರಕ್ರಿಯೆಯ ಒಂದು ಸ್ಥೂಲಸಮೀಕ್ಷೆ.**

.

| ವಿಕಾಸದ ಅವಧಿ | ಘಟನೆಗಳು ಮತ್ತು ಫಲಿತಾಂಶಗಳು | ಪ್ರಸಕ್ತ ಸಿದ್ಧಾಂತ/ಸಿದ್ಧಾಂತಗಳು |
|---|---|---|
| **ಜನನ ಪೂರ್ವ ಅವಧಿ** | ಭ್ರೂಣಕ್ಕೆ ಸ್ತ್ರೀ ಅಥವಾ ಪುರುಷ ಜನನೇಂದ್ರಿಯಗಳು ಬೆಳೆಯುತ್ತವೆ ಮತ್ತು ಇತರರು ಮಗುವಿನ ಜನನದ ನಂತರ ಅದನ್ನು ನೋಡಿ ಪ್ರತಿಕ್ರಿಯಿಸುತ್ತಾರೆ | ಜೀವಸಾಮಾಜಿಕ/ಮನೋಜೀವಸಾಮಾಜಿಕ ಸಿದ್ಧಾಂತ |
| **ಹುಟ್ಟಿನಿಂದ 3 ವರ್ಷಗಳು** | ಪಾಲಕರು ಮತ್ತು ಇತರರು ಮಗುವನ್ನು ಹುಡುಗ ಅಥವಾ ಹುಡುಗಿಯೆಂದು ಗುರುತಿಸುತ್ತಾರೆ, ಪದೇ ಪದೇ ಮಗುವಿಗೆ ಅವನ ಅಥವಾ ಅವಳ ಲಿಂಗತ್ವದ ಬಗೆಗೆ ನೆನಪಿಸುತ್ತಿರುತ್ತಾರೆ, ಲಿಂಗತ್ವ-ಸಮಂಜಸ ವರ್ತನೆಗೆ ಪ್ರೋತ್ಸಾಹ ನೀಡಲು ಮತ್ತು ಅನ್ಯ ಲಿಂಗದ ಚಟುವಟಿಕೆಗಳನ್ನು ಚಿವುಟಲು ಆರಂಭಿಸುತ್ತಾರೆ. ಈ ಸಾಮಾಜಿಕ ಅನುಭವಗಳು, ಅವು ಉತ್ತೇಜಿಸುವ ನರತಂತುಗಳ ಬೆಳವಣಿಗೆಗಳು ಮತ್ತು ತೀರಾ ಮೂಲಭೂತ ಎನಿಸುವ ವರ್ಗೀಕರಣದ ಕೌಶಲಗಳ ಬೆಳವಣಿಗೆಯ ಫಲವಾಗಿ ಚಿಕ್ಕ ಮಗುವು ಕೆಲವು ಲಿಂಗತ್ವ-ಪುರೂಪಿತ ವರ್ತನಾ ಆಯ್ಕೆಗಳನ್ನು ಹಾಗೂ ತಾನು ಒಬ್ಬ ಹುಡುಗ ಅಥವಾ | ಸಾಮಾಜಿಕ ಕಲಿಕಾ ಸಿದ್ಧಾಂತ (ವಿಭೇದಾತ್ಮಕ ಪುನರ್ಬಲನ), ಮನೋಜೀವಸಾಮಾಜಿಕ ಸಿದ್ಧಾಂತ |

| | | |
|---|---|---|
| | ಹುಡುಗಿಯೆಂಬ ತಿಳುವಳಿಕೆಯನ್ನೂ ಪಡೆದುಕೊಳ್ಳುತ್ತದೆ (ಇದು ಲಿಂಗತ್ವಮೂಲಭೂತ ಅನನ್ಯತೆ). | |
| **3 ರಿಂದ 6ವರ್ಷಗಳು** | ಒಮ್ಮೆ ಮಕ್ಕಳು ಲಿಂಗತ್ವ ಮೂಲಭೂತ ಅನನ್ಯತೆಯನ್ನು ಪಡೆದುಕೊಂಡ ನಂತರ ಅವರು ಲಿಂಗ ವ್ಯತ್ಯಾಸಗಳ ಬಗೆಗಿನ ಮಾಹಿತಿಗಳನ್ನು ಹುಡುಕಲು, ಲಿಂಗತ್ವ ಮನೋನಕ್ಷೆ ರಚಿಸಿಕೊಳ್ಳಲು ಶುರುಮಾಡುತ್ತಾರೆ ಮತ್ತು ತಮ್ಮ ಲಿಂಗಕ್ಕೆ "ಯುಕ್ತ" ಎನಿಸುವ ಕ್ರಿಯೆಗಳಲ್ಲಿ (ವರ್ತನೆಗಳಲ್ಲಿ) ಪ್ರವೃತ್ತರಾಗಲು ಸ್ವಾಭಾವಿಕವಾಗಿ ಪ್ರಚೋದಿತರಾಗುತ್ತಾರೆ. ಲಿಂಗತ್ವ ಮನೋನಕ್ಷೆ ಪಡೆದುಕೊಂಡ ನಂತರ ಮಕ್ಕಳು ಸ್ತ್ರೀ ಮತ್ತು ಪುರುಷ ಎರಡೂ ಲಿಂಗತ್ವ ಮಾದರಿ ಗಳನ್ನು ಗಮನಿಸುತ್ತಾರೆ. ಈ ಸಂರಚನೆಗಳು ಅವರಲ್ಲಿ ಚೆನ್ನಾಗಿ ಸ್ಥಾಪಿತವಾದ ನಂತರ ಈ ಚಿಣ್ಣರು ಸ್ವ-ಲಿಂಗೋಚಿತವಾದ ವರ್ತನೆಗಳನ್ನು (ಅವುಗಳನ್ನು ವ್ಯಕ್ತಪಡಿಸುವ ಮಾದರಿಯ ಲಿಂಗತ್ವವು ಯಾವುದೇ ಇರಲಿ ಅದನ್ನು ಹೊರತುಪಡಿಸಿ) ಅನುಕರಿಸುವ ಸಾಧ್ಯತೆ ಇದೆ. | ಲಿಂಗತ್ವ ಮನೋನಕ್ಷೆ |
| 7ರಿಂದ ಪ್ರಾಯದವರೆಗೂ | ಲಿಂಗತ್ವ ಸುಸಂಗತತೆಯ ಒಂದು ಅರಿವು ಮಕ್ಕಳಲ್ಲಿ ಮೂಡುತ್ತದೆ - ತಾನು ಒಬ್ಬ ಹುಡುಗ ಮತ್ತು ಮುಂದೆ ತಾನು ಪುರುಷನಾಗಲೇಬೇಕು ಎನ್ನುವ, ಹಾಗೂ ತಾನು ಒಬ್ಬ ಹುಡುಗಿ ಮತ್ತು ಮುಂದೆ ತಾನು ಸ್ತ್ರೀಯಾಗಲೇಬೇಕು ಎಂಬ ಒಂದು ದೃಢವಾದ, ಭವಿಷ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡ ಸ್ವಂತ ವ್ಯಕ್ತಿತ್ವದ ಬಗೆಗಿನ ಒಂದು ಅರಿವು ಮೂಡುತ್ತದೆ. ಈ ಹಂತದಲ್ಲಿ ಅವರು ಲಿಂಗತ್ವ ಮನೋನಕ್ಷೆ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುತ್ತ ಬರುತ್ತಾರೆ, ಹಾಗೂ ಸ್ತ್ರೀ ಅಥವಾ ಪುರುಷನೆಂಬ ಒಂದು ದೃಢವಾದ ಸ್ವ-ವರ್ಗೀಕರಣದೊಂದಿಗೆ ಸಮಂಜಸವಾಗಿ ಹೊಂದಿಕೊಳ್ಳುವ ವಿಶಿಷ್ಟ ವರ್ತನೆಗಳು ಮತ್ತು ಲಕ್ಷಣಗಳನ್ನು ದಕ್ಕಿಸಿಕೊಳ್ಳಲು ಸ್ವ-ಲಿಂಗೀಯಮಾದರಿ ಗಳ ವರ್ತನೆಗಳನ್ನು ಅವಲಂಬಿಸಲು ಆರಂಭಿಸುತ್ತಾರೆ. | ಸಂಜ್ಞಾನಾತ್ಮಕ ವಿಕಾಸ ಸಿದ್ಧಾಂತ (ಕೋಲ್‌ಬರ್ಗ್) |
| ಪ್ರಾಯ ಮತ್ತು ಅದರಿಂದಾಚೆ | . ಹರೆಯದ ಜೈವಿಕ ಏರು-ಪೇರುಗಳು ಹೊಸ ಸಾಮಾಜಿಕ ನಿರೀಕ್ಷೆಗಳೊಡನೆ ಬೆರೆತು ( ಲಿಂಗತ್ವ ಉತ್ಕಟತೆ) ಹದಿಹರೆಯದವರು ತಮ್ಮ ಸ್ವ-ಸಂಕಲ್ಪನೆಯನ್ನು ಪುನಃಪರೀಕ್ಷಿಸಿಕೊಳ್ಳಲು ಮತ್ತು ಪ್ರೌಢ | ಜೀವಸಾಮಾಜಿಕ/ಮನೋಜೀವಸಾಮಾಜಿಕ/ ಸಾಮಾಜಿಕ ಕಲಿಕಾ/,ಲಿಂಗತ್ವ ಮನೋನಕ್ಷೆ/ /ಸಂಜ್ಞಾನಾತ್ಮಕ ವಿಕಾಸ ಸಿದ್ಧಾಂತಗಳು |

| | | |
|---|---|---|
| | ಲಿಂಗತ್ವ ಅನನ್ಯತೆ ರಚಿಸಿಕೊಳ್ಳಲು ಕಾರಣವಾಗುತ್ತದೆ | |

## ಅನ್ವಯತೆ: ಲಿಂಗತ್ವ-ಪಾತ್ರ ಅಭಿವ್ಯಕ್ತಿಗಳು ಮತ್ತು ವರ್ತನೆಯ ಬದಲಾವಣೆ

ಲಿಂಗ ತಾರತಮ್ಯವನ್ನು ಹೋಗಲಾಡಿಸಿದರೆ ಮತ್ತು ಹುಡುಗರು ಮತ್ತು ಹುಡುಗಿಯರನ್ನು ಅವರನ್ನು ನಿರ್ಬಂಧಿಸುವ ' ಪುರುಷತ್ವ' ಅಥವಾ 'ಸ್ತ್ರೀತ್ವ' ಪಾತ್ರಗಳಿಗೆ ಒಗ್ಗಿಕೊಳ್ಳುವಂತೆ ಮುನ್ನುಗ್ಗಿಸದಿದ್ದರೆ ಈ ಜಗತ್ತು ಬದುಕಲು ಇನ್ನೂ ಉತ್ತಮವಾಗುತ್ತಿತ್ತು ಎಂದು ಇಂದು ಬಹಳ ಜನ ನಂಬುತ್ತಾರೆ. ಒಂದು ಲಿಂಗ ತಾರತಮ್ಯ-ರಹಿತ ಸಂಸ್ಕೃತಿಯಲ್ಲಿ ಸ್ತ್ರೀಯರು ತಮ್ಮ ಕೆಲಸದಲ್ಲಿ ಸ್ವ-ಸಮರ್ಥನೆ ಮತ್ತು ವಿಶ್ವಾಸದ ಕೊರತೆಯಿಂದ ಬಳಲುವುದಿಲ್ಲ ಮತ್ತು 'ಪುರುಷತ್ವ' ದ ತೋರಿಕೆಯ ಆಸಕ್ತಿಯಿಂದ ಅದುಮಿಟ್ಟ ತಮ್ಮ ಸಂವೇದನಾಶೀಲ, ಮಮತಾಮಯಿ ಆಯಾಮಗಳನ್ನು ವ್ಯಕ್ತಪಡಿಸಲು ಪುರುಷರು ಹೆಚ್ಚು ಸ್ವತಂತ್ರರಾಗಿರ ಬಹುದಾಗಿತ್ತು. ಈ ಲಿಂಗತಾರತಮ್ಯವನ್ನು ನಾವು ಹೇಗೆ ಕಡಿಮೆ ಮಾಡಬಹುದು, ಹಾಗೂ ಮಕ್ಕಳು ತಾವು ವ್ಯಕ್ತಪಡಿಸಬಹುದಾದ ಆಸಕ್ತಿಗಳು ಮತ್ತು ಗುಣಲಕ್ಷಣಗಳ ಬಗೆಗೆ ಹೆಚ್ಚು ಮುಕ್ತರಾಗುವಂತೆ ಅವರನ್ನು ಹೇಗೆ ಪ್ರೋತ್ಸಾಹಿಸಬಹುದು?.

ಬೆಮ್ (1983, 1989),ಪಾಲಕರು 1) ತಮ್ಮ ಪುಟ್ಟ ಮಕ್ಕಳಿಗೆ ಸಂತಾನೋತ್ಪತ್ತಿಯ ಕ್ಷೇತ್ರದ ಆಚೆ ಒಂದು ವ್ಯಕ್ತಿಯ ಜೈವಿಕ ಲಿಂಗವು ಅಮುಖ್ಯವಾಗುತ್ತದೆ ಎಂಬ ಒಂದು ವಿಶಾಲ ವ್ಯಾಪ್ತಿಯ ಪಾಠದ ಭಾಗವಾಗಿ ದೇಹದ ಲಿಂಗರಚನೆಯನ್ನು ಕಲಿಸುವುದು, ಮತ್ತು 2) , ಮಕ್ಕಳನ್ನು ಲಿಂಗತ್ವ ರೂಢ ಮಾದರಿಗಳಿಗೆ ಒಡ್ಡುವುದನ್ನು ಮುಂದೂಡಲು ಅನ್ಯ-ಲಿಂಗೀಯ ಮತ್ತು ಸಮಲಿಂಗೀಯ ಆಟಗಳನ್ನು ಪ್ರೋತ್ಸಾಹಿಸುವುದರ, ಮತ್ತು ಮನೆಗೆಲಸವನ್ನು ಹೆಚ್ಚು ನಿಷ್ಪಕ್ಷಪಾತವಾಗಿ ಹಂಚುವುದರ (ತಂದೆಯರು ಕೆಲವೊಮ್ಮೆ ಅಡುಗೆ ಮಾಡುವುದು ಮತ್ತು ಸ್ವಚ್ಛಗೊಳಿಸುವುದು ಮತ್ತು ತಾಯಂದಿರು ಹುಲ್ಲು ಕತ್ತರಿಸುವ ಅಥವಾ ರಿಪೇರಿ ಕೆಲಸಗಳನ್ನು ಮಾಡುವುದು) ಮೂಲಕ ಸಕ್ರಿಯ ಪಾತ್ರ ವಹಿಸಬೇಕು ಎಂದು ನಂಬುತ್ತಾರೆ. ಶಾಲಾಪೂರ್ವ ಹಂತದ ಮಕ್ಕಳು ಲಿಂಗ ಕೇವಲ ಒಂದು ಜೈವಿಕ ಗುಣಲಕ್ಷಣ ಎಂದು ಯೋಚಿಸಲು ಮತ್ತು ಅವರೂ ಹಾಗೂ ಅವರ ಪಾಲಕರು ಅನ್ಯಲಿಂಗೀಯ ಆಸಕ್ತಿ ಮತ್ತು ಚಟುವಟಿಕೆಗಳಲ್ಲಿ ತೊಡಗುವುದನ್ನು ಆಗಾಗ ನೋಡುತ್ತಿದ್ದರೆ, ಬಹಳ ಲಿಂಗ ತಾರತಮ್ಯವುಳ್ಳ ವಾತಾವರಣದಲ್ಲಿದ್ದರೆ ಬೆಳೆಯಬಹುದಾದಂತಹ ಗಡುಸಾದ ಲಿಂಗತ್ವ ರೂಢ ಮಾದರಿಗಳನ್ನು ರಚಿಸಿಕೊಳ್ಳುವುದಿಲ್ಲ. ಉಭಯಲಿಂಗತ್ವ ಹೊಂದಿದ (androgynous) ಪಾಲಕರು ಉಭಯಲಿಂಗತ್ವ ಉಳ್ಳ ಮಕ್ಕಳನ್ನು ಬೆಳೆಸುವ ಸಾಧ್ಯತೆಯನ್ನು ಸೂಚಿಸುವ ಸಂಶೋಧನೆಯು ಬೆಮ್ ಅವರ ಬದಲಾವಣೆಯ ಸೂಚಿಗಳೊಂದಿಗೆ ಸುಸಂಬದ್ಧವಾಗಿದೆ (ಒರ್ಲೋಫ್‌ಸ್ಕಿ, 1979). ಹಾಗೆಯೇ, ಯಾವ ಮಕ್ಕಳ ಪಾಲಕರು ಲಿಂಗತ್ವ-ಪಾತ್ರಗಳನ್ನು ಕುರಿತು ಅಸಾಂಪ್ರದಾಯಿಕ ಮನೋಧರ್ಮವನ್ನು ಹೊಂದಿರುತ್ತಾರೆಯೋ, ಅಥವಾ ಯಾರ ಪಾಲಕರು ನಿತ್ಯವೂ "ಸ್ತ್ರೀ"ಯರಿಗೆ

ಸಂಬಂಧಿಸಿದ ಮನೆಕೆಲಸಗಳನ್ನು ಮಾಡುವುದು ಮತ್ತು ಮಕ್ಕಳನ್ನು ನೋಡಿಕೊಳ್ಳುವುದರಲ್ಲಿ ತೊಡಗಿಕೊಳ್ಳುತ್ತಾರೆಯೋ ಅಂತಹ ಮಕ್ಕಳಿಗೆ ಲಿಂಗತ್ವ ರೂಢಮಾದರಿಗಳ ಬಗ್ಗೆ ಕಡಿಮೆ ಅರಿವು ಇರುತ್ತದೆ. ಲಿಂಗತ್ವ ಪಾತ್ರಗಳನ್ನು ಕುರಿತು ಸಾಂಪ್ರದಾಯಿಕ ಮನೋಧರ್ಮವನ್ನು ಹೊಂದಿದ ಪಾಲಕರ ಮಕ್ಕಳಿಗೆ ಹೋಲಿಸಿದರೆ ಇಂತಹ ಮಕ್ಕಳು ಲಿಂಗತ್ವ-ಪ್ರರೂಪಿತ ಆಸಕ್ತಿಗಳು ಮತ್ತು ಲಿಂಗತ್ವ-ಪ್ರರೂಪಿತ ಸಾಮರ್ಥ್ಯಗಳ ವ್ಯಕ್ತಿಚಿತ್ರಣ ಹೊಂದಿರುವ ಸಾಧ್ಯತೆ ಕಡಿಮೆ (ಮೆಕ್‌ಹೇಲ್, ಕ್ರೌಟರ್, ಮತ್ತು ಟಕರ್, 1999; ಟೆನೆನ್‌ಬಾಮ್ ಮತ್ತು ಲೀಪರ್, 2002; ಟರ್ನರ್ ಮತ್ತು ಜೆರ್ವೇ, 1995).

ಈ ಅಧ್ಯಯನ ಮತ್ತು ಇತರ ಅಧ್ಯಯನಗಳು (ಇದರ ಒಂದು ಮರುಪರಿಶೀಲನೆಗೆ ಕಾಜ್ ಮತ್ತು ವಾಲ್ಶ್, 1991 ನೋಡಿ) ಸೂಚಿಸುವಂತೆ ಲಿಂಗತ್ವ ಪಾತ್ರಗಳನ್ನು ಕುರಿತ ಮನೋಧರ್ಮಗಳನ್ನು ಬದಲಾಯಿಸುವ ಪ್ರಯತ್ನಗಳು ದೊಡ್ಡ ವಯಸ್ಸಿನ ಮಕ್ಕಳಿಗಿಂತ ಚಿಕ್ಕ ವಯಸ್ಸಿನ ಮಕ್ಕಳಲ್ಲಿ, ಅದರಲ್ಲೂ ಹೆಚ್ಚಿನದಾಗಿ ಗಂಡುಮಕ್ಕಳಿಗಿಂತ ಹೆಣ್ಣುಮಕ್ಕಳಲ್ಲಿ ಹೆಚ್ಚು ಪರಿಣಾಮಕಾರಿಯಾಗಿರುತ್ತದೆ. ಮಕ್ಕಳ ಆಲೋಚನಾಕ್ರಮವನ್ನು ಪರಿವರ್ತಿಸುವುದಾದರೆ ಅದು ಚಿಕ್ಕವಯಸ್ಸಿನಲ್ಲಿ, ಅಂದರೆ ಅವರಲ್ಲಿ ಲಿಂಗತ್ವ ರೂಢಮಾದರಿಗಳಿನ್ನೂ ಹರಳುಗಟ್ಟಿರದ ಹಂತದಲ್ಲಿ ಸುಲಭವಾಗುತ್ತದೆ ಎನ್ನುವುದರಲ್ಲಿ ಅರ್ಥವಿದೆ; ಮತ್ತು ಈಗಿನ ಅನೇಕ ಸಂಶೋಧಕರು ರೂಢಮಾದರಿಗಳ ಮೇಲೆ ನೇರ ದಾಳಿ ಮಾಡುವ, ಅಥವಾ ಗಡುಸಾದ ಲಿಂಗತ್ವ ಮನೋನಕ್ಷೆಯನ್ನು ಹುಟ್ಟಿಸುವ ಮಕ್ಕಳ ಆಲೋಚನೆಯ ಮೇಲಿನ ನಿರ್ಬಂಧಗಳನ್ನು ತೆಗೆದು ಹಾಕುವ *ಸಂಜ್ಞಾನಾತ್ಮಕ ಮಧ್ಯಸ್ಥಿಕೆ*ಯ ಪರವಾಗಿದ್ದಾರೆ. ಖಂಡಿತಕ್ಕೂ ಈ ಸಂಜ್ಞಾನಾತ್ಮಕ ಮಧ್ಯಸ್ಥಿಕೆಗಳು ಪರಿಣಾಮಕಾರಿಯಾಗಬಲ್ಲವು.
ಕೊನೆಯಲ್ಲಿ, ಕೆಲವು ಸಾಕ್ಷ್ಯಗಳು ಸೂಚಿಸುವಂತೆ ಮಕ್ಕಳ ಲಿಂಗತ್ವ ರೂಢಮಾದರಿಗಳನ್ನು ಆಧರಿಸಿದ ಅಭಿವೃತ್ತಿಗಳು ಮತ್ತು ವರ್ತನೆಗಳನ್ನು ಬದಲಾಯಿಸಲೆಂದು ರೂಪಿಸಿದ ಕಾರ್ಯಕ್ರಮಗಳ ಮೇಲ್ವಿಚಾರಕರು ವಯಸ್ಕಪುರುಷರೇ ಆಗಿದ್ದರೆ, ಆಗ ಅಂತಹ ಕಾರ್ಯಕ್ರಮಗಳು ಇನ್ನೂ ಹೆಚ್ಚು ಯಶಸ್ವಿಯಾಗಬಹುದು (ಕಾಜ್ ಮತ್ತು ವಾಲ್ಶ್, 1991). ಏಕೆ? ಏಕೆಂದರೆ ಸಾಮಾನ್ಯವಾಗಿ ಪುರುಷರೇ "ಲಿಂಗತ್ವ-ಸೂಕ್ತ" ಮತ್ತು "ಲಿಂಗತ್ವ ಅನುಚಿತ" ಎಂದು ಬಲವಾದ ಭೇದವನ್ನು ಮಹಿಳೆಯರಿಗಿಂತಾ ಹೆಚ್ಚಾಗಿ ಮಾಡುವುದರಿಂದ ಪುರುಷರೇ *ಬದಲಾವಣೆಯ ನಿಯೋಗಿ*ಗಳಾಗುವುದು ನಿರ್ದಿಷ್ಟವಾಗಿ ಗಮನಿಸುವಂತಹ ಸಂಗತಿಯಾಗಿದೆ. ಇದನ್ನು ಬೇರೆ ಪದಗಳಲ್ಲಿ ಹೇಳುವುದಾದರೆ, ಮಕ್ಕಳು ಅನ್ಯಲಿಂಗೀಯ ಚಟುವಟಿಕೆಗಳು ಮತ್ತು ಆಕಾಂಕ್ಷೆಗಳು ಖಂಡಿತವಾಗಿಯೂ ನ್ಯಾಯಸಮ್ಮತವಾಗಿವೆ ಎಂದು ಪುರುಷನೊಬ್ಬ ಅಂತಹವನ್ನು ಉತ್ತೇಜಿಸಿದರೆ (ಅಥವಾ ನಿರುತ್ತೇಜಿಸದೇ ಇದ್ದರೆ) ಭಾವಿಸುತ್ತಾರೆ.

ಆದ್ದರಿಂದ ಹೊಸ ಲಿಂಗತ್ವ-ಪಾತ್ರ ಅಭಿವೃತ್ತಿಗಳನ್ನು ಕಲಿಸಬಹುದು ಎನ್ನುವುದು ನಿಜವಾದರೂ ಇಂತಹ ಅಭಿವೃತ್ತಿಗಳು ಮನೆಯಲ್ಲೂ ಅಥವಾ ವಿಶಾಲವಾದ ಸಂಸ್ಕೃತಿಯಲ್ಲೂ ಪುನರ್ಬಲನ ಹೊಂದದಿದ್ದರೆ, ಅವು ಉಳಿದುಕೊಳ್ಳುತ್ತವೆಯೇ, ಹೊಸ ಸನ್ನಿವೇಶಗಳಲ್ಲಿ ಸಾಮಾನ್ಯೀಕರಣಗೊಳ್ಳುತ್ತವೆಯೇ ಎಂಬುದನ್ನು ಕಾದು

ನೋಡಬೇಕು. ಸ್ವೀಡನ್ ಲಿಂಗತ್ವ ಸಮಾನತೆಗೆ ಬಲವಾದ ಬದ್ಧತೆಯುಳ್ಳ ಒಂದು ಸಂಸ್ಕೃತಿ: ಪುರುಷರು ಮತ್ತು ಮಹಿಳೆಯರಿಗೆ ಸಾಂಪ್ರದಾಯಿಕವಾಗಿ ಪುರುಷರದ್ದು (ಅಥವಾ ಸಾಂಪ್ರದಾಯಿಕವಾಗಿ ಸ್ತ್ರೀಯರದ್ದು) ಎಂದಿರುವ ವೃತ್ತಿಗಳಲ್ಲಿ ತೊಡಗಲು ಸಮಾನ ಅವಕಾಶವಿದೆ, ಮತ್ತು ತಂದೆ ಹಾಗೂ ತಾಯಿ ಇಬ್ಬರೂ ಮನೆಗೆಲಸ ಮತ್ತು ಮಕ್ಕಳ ಪಾಲನೆಗೆ ಸಮಾನವಾಗಿ ಬಾಧ್ಯಸ್ಥರು ಎಂದು ಕಾಣಲಾಗುತ್ತದೆ. ಸ್ವೀಡನ್ನಿನ ಹರೆಯದವರ ದೃಷ್ಟಿಯಲ್ಲಿ  ಇವತ್ತಿಗೂ ಸ್ತ್ರೀತನದ ಲಕ್ಷಣಗಳಿಗಿಂತ ಪುರುಷತನದ ಲಕ್ಷಣಗಳಿಗೆ ಹೆಚ್ಚಿನ ಮೌಲ್ಯವಿದೆ. ಆದರೆ ಅವರು ಅಮೆರಿಕೆಯ ಹರೆಯದವರಿಗಿಂತ ಕಡಿಮೆ ಮೊಂಡರು ಮತ್ತು ಅವರು ಲಿಂಗತ್ವ-ಪಾತ್ರಗಳು  ಜೈವಿಕವಾಗಿ ಆದೇಶಿತ ಕರ್ತವ್ಯಗಳಲ್ಲ ಬದಲಾಗಿ ಅರ್ಜಿಸಿದ ಕೌಶಲ್ಯಗಳು ಎಂದು ಭಾವಿಸುವ ಒಲವು ತೋರುತ್ತಾರೆ (ಇಂಟನ್ಸ್-ಪೀಟರ್ಸನ್, 1988).

## **ಸಂಕಲ್ಪನೆಯ ಪರೀಕ್ಷೆ: 12.2.** ಲಿಂಗತ್ವ-ಪಾತ್ರ ವಿಕಾಸದ ಸಿದ್ಧಾಂತಗಳನ್ನು ಅರ್ಥಮಾಡಿಕೊಳ್ಳುವುದು

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸುವ ಮೂಲಕ ಲಿಂಗತ್ವ ಪಾತ್ರವಿಕಾಸ ಸಿದ್ಧಾಂತಗಳು ನಿಮಗೆಷ್ಟು ಅರ್ಥವಾಗಿದೆ ಎಂಬುದನ್ನು ಪರಿಶೀಲಿಸಿಕೊಳ್ಳಿ. ಅನುಬಂಧದಲ್ಲಿ ಉತ್ತರಗಳಿವೆ.

**ನಿಜ ಅಥವಾ ಸುಳ್ಳು**: ಈ ಕೆಳಗಿನ ಹೇಳಿಕೆಗಳು ಸತ್ಯ ಅಥವಾ ಸುಳ್ಳು ಎಂದು ಗುರುತಿಸಿ.

1. ಸ್ತ್ರೀ-ಪುರುಷರ ಬಗೆಗಿನ ಆಧಾರವಿಲ್ಲದ ನಂಬಿಕೆಗಳು ಏಕೆ ಬಹುಕಾಲ ಉಳಿದುಕೊಳ್ಳುತ್ತವೆ ಎಂಬುದನ್ನು ಹಾಲ್ಪರ್ನ್ ರವರ ಮನೋ-ಜೀವಸಾಮಾಜಿಕ ಮಾದರಿಯು ವಿವರಿಸುತ್ತದೆ. ಸತ್ಯ/ಸುಳ್ಳು
2. ಲಿಂಗಸಂಬಂಧಿ ಮರುನಿಯೋಜನೆ ಏಕೆ 3 ರಿಂದ 5 ವರ್ಷದ ಒಳಗಿನ ಮಕ್ಕಳಲ್ಲಿ ಸಾಮಾನ್ಯವಾಗಿ ವಿಫಲವಾಗುತ್ತದೆ ಎಂಬುದನ್ನು ಕೋಲ್‌ಬರ್ಗ್ ರವರ ಸಂಜ್ಞಾನಾತ್ಮಕ ವಿಕಾಸಸಿದ್ಧಾಂತಕ್ಕೆ ಸುಲಭವಾಗಿ ವಿವರಿಸಲಾಗುವುದಿಲ್ಲ. ಸತ್ಯ/ಸುಳ್ಳು

**ಬಹು ಆಯ್ಕೆಯ ಪ್ರಶ್ನೆಗಳು**: ಪ್ರತೀ ಪ್ರಶ್ನೆಗೂ ಉತ್ತಮವಾದ ಒಂದು ಉತ್ತರವನ್ನು ಆರಿಸಿ.

3. ಲಿಂಗತ್ವ ಪಾತ್ರಗಳ ಬೆಳವಣಿಗೆಗೆ ಸಂಬಂಧಿಸಿದ ಕೋಲ್‌ಬರ್ಗ್ ರವರ ಸಂಜ್ಞಾನಾತ್ಮಕ ವಿಕಾಸಸಿದ್ಧಾಂತದ ಪ್ರಕಾರ ಸ್ವ-ಸಾಮಾಜಿಕೀಕರಣದ ಆರಂಭವು ಇದಾಗಿದೆ,
   ಅ. ಲಿಂಗತ್ವ ಸುಸಂಗತತೆ.
   ಬ. ಲಿಂಗತ್ವ ಮೂಲಭೂತ ಅನನ್ಯತೆ.
   ಕ. ಲಿಂಗತ್ವ ಸ್ಥಿರತೆ.
   ಡ. ಲಿಂಗತ್ವ ಪಾತ್ರ ಸಾಧನೆ.
4. ಮಾರ್ಟಿನ್ ಮತ್ತು ಹಾಲ್ವರ್ಸನ್‌ರವರ ಲಿಂಗತ್ವ ಮನೋನಕ್ಷೆಸಿದ್ಧಾಂತದ ಪ್ರಕಾರ ಸ್ವ-ಸಾಮಾಜಿಕೀಕರಣದ ಆರಂಭವು ಇದಾಗಿದೆ,
   ಅ. ಲಿಂಗತ್ವ ಸುಸಂಗತತೆ.
   ಬ. ಲಿಂಗತ್ವ ಮೂಲಭೂತ ಅನನ್ಯತೆ.
   ಕ. ಲಿಂಗತ್ವ ಸ್ಥಿರತೆ.
   ಡ. ಲಿಂಗತ್ವ ಪಾತ್ರ ಸಾಧನೆ.

**ಬಿಟ್ಟ ಸ್ಥಳ ತುಂಬಿರಿ**: ಕೆಳಗಿನ ಹೇಳಿಕೆಗಳ ಖಾಲಿ ಬಿಟ್ಟ ಜಾಗದಲ್ಲಿ ಸರಿಯಾದ ಸೈದ್ಧಾಂತಿಕ ದೃಷ್ಟಿಕೋನವನ್ನು ತುಂಬಿರಿ.

ನೀವು ಒಬ್ಬ ವಿಕಾಸ ಮನೋವಿಜ್ಞಾನಿಯಾಗಿರುತ್ತೀರಿ, ಮತ್ತು 18 ತಿಂಗಳಿಂದ 3 ವರ್ಷದ ಒಳಗೆ ಮಗುವಿನ ಲಿಂಗ ಅ. ಲಿಂಗತ್ವ ಪ್ರರೂಪಣೆಗೆ ಸಂಬಂಧಿಸಿದಂತೆ ಒಂದು ನಿರ್ಣಾಯಕ ಅವಧಿ ಇದ್ದಿರುತ್ತದೆ ಎಂದು ನಂಬುತ್ತೀರಿ. ಜೊತೆಗೆ ಲಿಂಗತ್ವ ಪಾತ್ರಗಳ ನೇರ ಬೆಳವಣಿಗೆಯಲ್ಲಿ ಜೈವಿಕ

ಹಾಗೂ ಸಾಮಾಜಿಕ ಅಂಶಗಳ ಪಾತ್ರವಿರುತ್ತದೆ ಎಂದೂ ಸಹ ನಂಬುತ್ತೀರಿ. ನಿಮ್ಮ ನಂಬಿಕೆಗಳನ್ನು ಆಧರಿಸಿ ನೀವು ಬಹುತೇಕ ------ ದೃಷ್ಟಿಕೋನವನ್ನು ಹೊಂದಿರುತ್ತೀರಿ.

5. ನೀವು ಒಬ್ಬ ವಿಕಾಸ ಮನೋವಿಜ್ಞಾನಿಯಾಗಿರುತ್ತೀರಿ, ಮತ್ತು ಆರಂಭದ ಲಿಂಗತ್ವ ಪ್ರರೂಪಣೆಯು ಹೆಚ್ಚಿನದಾಗಿ ಪಾಲಕರು ಒದಗಿಸುವ ಲಿಂಗತ್ವ ಪಠ್ಯಕ್ರಮವನ್ನು ಅವಲಂಬಿಸಿರುತ್ತದೆ ಎಂದು ನಂಬುತ್ತೀರಿ. ಜೊತೆಗೆ, ಮಕ್ಕಳ ಲಿಂಗತ್ವ ಪಾತ್ರಗಳನ್ನು ರೂಪಿಸಲು ಅವರ ಒಡಹುಟ್ಟಿದವರು ಮತ್ತು ಜೊತೆಗಾರರ ಪ್ರಭಾವಗಳೂ ಸಹ ಕೆಲಸ ಮಾಡುತ್ತವೆ ಎಂದು ನಂಬುತ್ತೀರಿ. ನಿಮ್ಮ ನಂಬಿಕೆಗಳನ್ನು ಆಧರಿಸಿ ನೀವು ಒಬ್ಬ -------- ಮನೋವಿಜ್ಞಾನಿ.

6. ನೀವು ಒಬ್ಬ ವಿಕಾಸ ಮನೋವಿಜ್ಞಾನಿ, ಮತ್ತು ಮಕ್ಕಳು ಸಮಲಿಂಗೀಯ ಪಾಲಕರೊಂದಿಗೆ ಗುರುತಿಸಿಕೊಳ್ಳುವ ಮೂಲಕ ತಮ್ಮ ಲಿಂಗತ್ವ ಪಾತ್ರಗಳನ್ನು ಅಳವಡಿಸಿಕೊಳ್ಳುತ್ತಾರೆ ಎಂದು ನಂಬುತ್ತೀರಿ. ನಿಮ್ಮ ನಂಬಿಕೆಗಳನ್ನು ಆಧರಿಸಿ ಇತರರು ನಿಮ್ಮನ್ನು ಒಬ್ಬ ------ ಮನೋವಿಜ್ಞಾನಿ ಎಂದು ಗುರುತಿಸಬಹುದು.

**ಸಂಕ್ಷಿಪ್ತ ಉತ್ತರಗಳು**: ಈ ಕೆಳಗಿನ ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿ.

7. ಲಿಂಗತ್ವ ಪಾತ್ರಗಳ ಬೆಳವಣಿಗೆಗೆ ಸಂಬಂಧಿಸಿದಂತೆ ಇರುವ ಕೋಲ್‌ಬರ್ಗ್ ರವರ ಸಂಜ್ಞಾನಾತ್ಮಕ ವಿಕಾಸ ಸಿದ್ಧಾಂತದ ಪ್ರಕಾರ ಮಕ್ಕಳು ತಮ್ಮ ಲಿಂಗತ್ವ ಪಾತ್ರಗಳ ಬೆಳವಣಿಗೆಯಲ್ಲಿ ಯಾವ ಯಾವ ಹಂತಗಳನ್ನು ಕ್ರಮಿಸುತ್ತಾರೆ ಎನ್ನುವುದನ್ನು ಕ್ರಮದಲ್ಲಿ ಜೋಡಿಸಿ.

**ಪ್ರಬಂಧ**: ಈ ಕೆಳಗಿನ ಪ್ರಶ್ನೆಗೆ ವಿಸ್ತೃತವಾಗಿ ಬರೆಯಿರಿ.

8. ಪಾಲಕರು ಮತ್ತು ಸಮವಯಸ್ಕ ಸಂಗಡಿಗರು ಮಕ್ಕಳ ಲಿಂಗತ್ವ ಪಾತ್ರಗಳ ಬೆಳವಣಿಗೆಯನ್ನು ಹೇಗೆ ಪ್ರಭಾವಿಸುತ್ತಾರೆ ಎಂದು ವಿವರಿಸಿ.

## ವಿಕಾಸಾತ್ಮಕ ವಿಷಯವನ್ನು ಲಿಂಗ ವ್ಯತ್ಯಾಸಗಳು ಮತ್ತು ಲಿಂಗತ್ವ-ಪಾತ್ರ ವಿಕಾಸಕ್ಕೆ ಅನ್ವಯಿಸುವುದು

ಸಕ್ರಿಯ-ನಿಷ್ಕ್ರಿಯ/ಜಡ
ಮುಂದುವರಿಕೆ-ನಿಲುಗಡೆ
ಸಮಗ್ರ ಸ್ವರೂಪ
ನಿಸರ್ಗ-ಪೋಷಣೆ

ಈ ಪುಸ್ತಕದಲ್ಲಿ ನಾವು ಶೋಧಿಸುತ್ತಿರುವ ನಾಲ್ಕು ವಿಕಾಸಾತ್ಮಕ ವಿಷಯಗಳು: ಸಕ್ರಿಯ ಮಗು, ನಿಸರ್ಗ ಮತ್ತು ಪೋಷಣೆಯ ಅಂತರಕ್ರಿಯೆಗಳು, ವಿಕಾಸದ ಗುಣಾತ್ಮಕ ಮತ್ತು ಪರಿಮಾಣಾತ್ಮಕ ಬದಲಾವಣೆಗಳು, ಮತ್ತು ವಿಕಾಸದ ಒಂದು ಸಮಗ್ರ ಸ್ವರೂಪ. ಲಿಂಗ ವ್ಯತ್ಯಾಸಗಳು ಮತ್ತು ಲಿಂಗತ್ವ ಪಾತ್ರಗಳ ವಿಕಾಸಕ್ಕೆ ಸಂಬಂಧಿಸಿದ ಈ ಅಧ್ಯಾಯದಲ್ಲಿ ಈ ನಾಲ್ಕು ವಿಷಯಗಳು ಮತ್ತೆ ಪ್ರಾಮುಖ್ಯ ಪಡೆದಿವೆ ಎನ್ನುವುದನ್ನು ನಾವು ನೋಡಿದ್ದೇವೆ.

ಬಹುಶಃ ಮಕ್ಕಳ ಲಿಂಗತ್ವ ಅನನ್ಯತೆಗಳು ಮತ್ತು ಲಿಂಗತ್ವ ಪಾತ್ರಗಳ ಬೆಳವಣಿಗೆಯ ಹಾದಿಯಲ್ಲಿನ ಸ್ವ-ಸಾಮಾಜಿಕೀಕರಣದ ಪ್ರಕ್ರಿಯೆಗಳು ಸಕ್ರಿಯ ಮಗುವಿನ ವಿಷಯವನ್ನು ಉತ್ತಮವಾಗಿ ಚಿತ್ರಿಸುತ್ತವೆ. ಮಕ್ಕಳು ಪರಿಸರದ ಪ್ರಭಾವಗಳನ್ನು ಅಥವಾ ಜೈವಿಕ ಬಲಗಳನ್ನು ನಿಷ್ಕ್ರಿಯವಾಗಿ ಸ್ವೀಕರಿಸುವುದಿಲ್ಲ. ಬದಲಿಗೆ ಅವರು ಸಕ್ರಿಯರಾಗಿ ಸ್ವ-ಲಿಂಗೋಚಿತ ವರ್ತನೆಗಳು ಮತ್ತು ಲಕ್ಷಣಗಳ ಬಗೆಗಿನ ಮಾಹಿತಿಗಳನ್ನು ಹುಡುಕುತ್ತಾರೆ ಮತ್ತು ಈ ಗುಣಲಕ್ಷಣಗಳನ್ನು ತಮ್ಮ ಅನನ್ಯತೆಯಲ್ಲಿ

ಅಳವಡಿಸಿಕೊಳ್ಳಲು ಯತ್ನಿಸುತ್ತಿರುತ್ತಾರೆ. ಈ ಅಂಶವು ಕೋಲ್‌ಬರ್ಗ್ ರವರ ಲಿಂಗತ್ವ ಪಾತ್ರಗಳ ವಿಕಾಸಕ್ಕೆ ಸಂಬಂಧಿಸಿದ
ಸಂಜ್ಞಾನಾತ್ಮಕ ವಿಕಾಸ ಸಿದ್ಧಾಂತದಲ್ಲಿಯೂ ಕಂಡುಬರುತ್ತದೆ ಮತ್ತು ಮಾರ್ಟಿನ್-ಹಾಲ್ವರ್ಸನ್‌ರವರ ಲಿಂಗತ್ವ ಮನೋನಕ್ಷೆ ಸಿದ್ಧಾಂತದಲ್ಲಿಯೂ ಕಂಡುಬರುತ್ತದೆ. ಅಷ್ಟೇ ಅಲ್ಲ, ಲಿಂಗತ್ವ ಪಾತ್ರಗಳ ವಿಕಾಸದ ಜೈವಿಕ ಸಿದ್ಧಾಂತಗಳೂ ಕುಡಾ ಮಕ್ಕಳು ಲಿಂಗತ್ವ ಪಾತ್ರಗಳನ್ನು ಅಳವಡಿಸಿಕೊಳ್ಳುವ ಪ್ರಕ್ರಿಯೆಯಲ್ಲಿ ಸಕ್ರಿಯರಾಗಿರುತ್ತಾರೆ ಎಂಬುದನ್ನು ಒಪ್ಪಿಕೊಳ್ಳುತ್ತವೆ.

ಲಿಂಗತ್ವ ಅನನ್ಯತೆಗಳು ಮತ್ತು ಲಿಂಗತ್ವ ಪಾತ್ರಗಳ ವಿಕಾಸಕ್ಕೆ ಸಂಬಂಧಿಸಿದಂತೆ ಅನೇಕ ಸಿದ್ಧಾಂತಗಳು ಬೆಳವಣಿಗೆಯಲ್ಲಾಗುವ ಬದಲಾವಣೆಗಳ ಗುಣಾತ್ಮಕ ಹಂತಗಳ ಬಗೆಗೆ ಮತ್ತು ಈ ವಿವಿಧ ಹಂತಗಳಲ್ಲಿ (ಬೆಳವಣಿಗೆಯ ಗುಣಾತ್ಮಕ ಬದಲಾವಣೆಯ ಒಂದು ಗುರುತರ ಲಕ್ಷಣ) ಮಕ್ಕಳ ವರ್ತನೆಗಳು ಆಲೋಚನಾಕ್ರಮಗಳು ಹೇಗೆ ಬದಲಾಗುತ್ತವೆ ಎನ್ನುವುದನ್ನು ಪ್ರತಿಪಾದಿಸುತ್ತವೆ. ಉದಾಹರಣೆಗೆ, ಕೋಲ್‌ಬರ್ಗ್ ರವರ ಸಂಜ್ಞಾನಾತ್ಮಕ ವಿಕಾಸ ಸಿದ್ಧಾಂತದಲ್ಲಿ ಮಕ್ಕಳು ಒಂದು ಪಕ್ವವಾದ ಲಿಂಗತ್ವ ಅನನ್ಯತೆಯನ್ನು ಪಡೆಯುವ ಹಾದಿಯಲ್ಲಿ ಮೂರು ಗುಣಾತ್ಮಕವಾಗಿ ಭಿನ್ನವಾದ ಹಂತಗಳ ಮೂಲಕ ಬೆಳೆಯುತ್ತಾರೆ. ಲಿಂಗತ್ವವು ರೂಪುಗೊಳ್ಳಲು ಸಹಾಯ ಮಾಡುವ ಜೈವಿಕ ಬಲಗಳು ಕೂಡಾ (ಆನುವಂಶಿಕ ಮತ್ತು ಹಾರ್ಮೋನುಗಳಿಗೆ ಸಂಬಂಧಿಸಿದ-ಈ ಎರಡೂ) ಬೆಳವಣಿಗೆಯ ಗುಣಾತ್ಮಕ ಬದಲಾವಣೆಯ ಹಂತಗಳನ್ನು ಅನುಸರಿಸುತ್ತವೆ, ಬದಲಾವಣೆಯ ಬೇರೆ ಬೇರೆ ಘಟನೆಗಳು ಮಗುವಿನ ಜೈವಿಕ ಲಿಂಗವನ್ನು ಮತ್ತು ಆ ಜೈವಿಕ ಬದಲಾವಣೆಗಳಿಗೆ ಸಂಬಂಧಿಸಿದ ಮಗುವಿನ ಪ್ರತಿಕ್ರಿಯೆಗಳನ್ನೂ ಸಹ ರೂಪಿಸಲು ಸಹಾಯ ಮಾಡುತ್ತವೆ. ನಿಸರ್ಗ ಮತ್ತು ಪೋಷಣೆಯ ನಡುವಿನ ಅನ್ಯೋನ್ಯಕ್ರಿಯೆಗಳಿಗೆ ಸಂಬಂಧಿಸಿದಂತೆ ಲಿಂಗತ್ವ ಪಾತ್ರಗಳ ಬೆಳವಣಿಗೆಯ ಅಂತರಕ್ರಿಯಾ ಮಾದರಿಯು ಈ ಅಧ್ಯಾಯದಲ್ಲಿ ಸಿಗುವ ಒಂದು ಉತ್ತಮ ಉದಾಹರಣೆಯಾಗಿದೆ. ಆ ಮಾದರಿಯಲ್ಲಿ ಮಕ್ಕಳ ಲಿಂಗತ್ವ ಅನನ್ಯತೆಗಳ ಬೆಳವಣಿಗೆಗೆ ಮಾರ್ಗದರ್ಶನ ಮಾಡಲು ಜೈವಿಕ ಬಲಗಳು ಹೇಗೆ ಸಾಮಾಜಿಕ ಮತ್ತು ಅಂತರ್-ವ್ಯಕ್ತೀಯ ಪ್ರಭಾವಗಳ ಜೊತೆ ಅನ್ಯೋನ್ಯ ಕ್ರಿಯೆ ನಡೆಸುತ್ತವೆ ಎನ್ನುವುದನ್ನು ನಾವು ನೋಡಿದೆವು. ಆದರೆ ಲಿಂಗತ್ವ ಪಾತ್ರಗಳ ವಿಕಾಸಕ್ಕೆ ಸಂಬಂಧಿಸಿದಂತೆ ಇತರ ಸೈದ್ಧಾಂತಿಕ ದೃಷ್ಟಿಕೋನಗಳೂ ಕೂಡಾ ಲಿಂಗತ್ವದ ಬೆಳವಣಿಗೆಯಲ್ಲಿ ಇರುವ ನಿಸರ್ಗ ಮತ್ತು ಪೋಷಣೆಗಳ ಪ್ರಭಾವದ ಬಗೆಗೆ ಹೇಳುತ್ತವೆ ಎನ್ನುವುದನ್ನು ನಾವು ಮರೆಯಬಾರದು.

ಇನ್ನು ಕೊನೆಯ ವಿಷಯವಾದ ಮಗುವಿನ ಬೆಳವಣಿಗೆಯ ಸಮಗ್ರ ಸ್ವರೂಪವನ್ನು ಮಕ್ಕಳ ವಿಕಾಸದಲ್ಲಿನ ಸಂಜ್ಞಾನಾತ್ಮಕ, ಸಾಮಾಜಿಕ, ಮತ್ತು ಜೈವಿಕ ಬದಲಾವಣೆಗಳ ನಡುವಿನ ಅಂತರ್‌ಕ್ರಿಯೆಗಳು ಚೆನ್ನಾಗಿ ನಿದರ್ಶಿಸುತ್ತವೆ, ಇವೆಲ್ಲವೂ ಸೇರಿ ಒಂದು ಮಗುವಿನ ಲಿಂಗತ್ವ ಅನನ್ಯತೆಯನ್ನು ರೂಪಿಸುತ್ತವೆ. ಖಂಡಿತವಾಗಿಯೂ ಮಗುವಿನ ಸಂಜ್ಞಾನಾತ್ಮಕ ಕಾರ್ಯ, ಇತರ ಮಕ್ಕಳು ಮತ್ತು ವಯಸ್ಕರೊಂದಿಗಿನ ಅವನ ಅಥವಾ ಅವಳ ಒಡನಾಟಗಳು, ಮತ್ತು ಲಿಂಗತ್ವದ ಬೆಳವಣಿಗೆಯಲ್ಲಿನ ಆರಂಭದ ಅನೇಕ

ಬದಲಾವಣೆಗಳಲ್ಲಿ ಅಡಕವಾಗಿರುವ ಜೈವಿಕ ಬದಲಾವಣೆಗಳ ಪ್ರಭಾವಗಳಿಲ್ಲದೆ ಲಿಂಗತ್ವ ಅನನ್ಯತೆಯು ಪರಿಪಕ್ವಗೊಳ್ಳುವುದು ಸಾಧ್ಯವಿಲ್ಲ.

## ಸಾರಾಂಶ

**ಲಿಂಗತ್ವ ಪ್ರರೂಪಣೆ**: ಮಕ್ಕಳು ಒಂದು **ಲಿಂಗತ್ವ** ಅನನ್ಯತೆಯನ್ನು ಹಾಗೂ, ತಮ್ಮ ಸಮಾಜದಲ್ಲಿ ತಮ್ಮ ಜೈವಿಕ ಲಿಂಗಕ್ಕೆ ಸೇರಿದ ಸದಸ್ಯರಿಗೆ ಯುಕ್ತವಾದ ಉದ್ದೇಶಗಳು, ಮೌಲ್ಯಗಳು, ಮತ್ತು ವರ್ತನೆಗಳನ್ನು ದಕ್ಕಿಸಿಕೊಳ್ಳುವ ಒಂದು ಪ್ರಕ್ರಿಯೆಯು ಇದಾಗಿದೆ.

**ಸ್ತ್ರೀ ಮತ್ತು ಪುರುಷರ ವರ್ಗೀಕರಣ**: ಲಿಂಗತ್ವ **ಪಾತ್ರಗಳ ಮಾನಕಗಳು**

- ಒಂದು ಲಿಂಗತ್ವ **ಪಾತ್ರದ ಮಾನಕ**ವೆಂದರೆ ಒಂದು ಲಿಂಗದವರಿಗೆ (ಇದು ಮತ್ತೊಂದು ಲಿಂಗದವರಿಗೆ ಯುಕ್ತವಲ್ಲ) ಹೆಚ್ಚು ಯುಕ್ತವಾದದ್ದು ಎಂದು ಪರಿಗಣಿಸಲ್ಪಡುವ ಉದ್ದೇಶಗಳು, ಮೌಲ್ಯಗಳು ಅಥವಾ ವರ್ತನೆಗಳು.
- ಸ್ತ್ರೀಯರು **ಅಭಿವ್ಯಂಜಕ ಪಾತ್ರ**ವನ್ನೂ, ಪುರುಷರು **ಕಾರಣಭೂತ ಪಾತ್ರ**ವನ್ನೂ ಅಳವಡಿಸಿಕೊಳ್ಳುವ ಒಂದು ಲಿಂಗಾಧಾರಿತ-ದುಡಿಮೆಯ ವಿಭಜನೆಯು ಹಲವು ಸಮಾಜಗಳ ಲಕ್ಷಣವಾಗಿದೆ.

**ಲಿಂಗತ್ವ ವ್ಯತ್ಯಾಸಗಳ ಬಗೆಗಿನ ಕೆಲವು ವಾಸ್ತವಗಳು ಮತ್ತು ಕೆಲವು ಕಲ್ಪನೆಗಳು**

- ಶಾಬ್ದಿಕ ಸಾಮರ್ಥ್ಯದ ಮೌಲ್ಯಮಾಪನಗಳಲ್ಲಿ ಒಂದು ಗುಂಪಿನ ಹೆಣ್ಣುಮಕ್ಕಳು ಒಂದು ಗುಂಪಿನ ಗಂಡುಮಕ್ಕಳಿಗಿಂತ ಉತ್ತಮ ಸಾಧನೆಯನ್ನು ತೋರುತ್ತಾರೆ ಮತ್ತು ಗಂಡುಮಕ್ಕಳಿಗಿಂತ ಹೆಚ್ಚು ಭಾವನಾತ್ಮಕವಾಗಿ ಅಭಿವ್ಯಕ್ತಿಶೀಲರೂ, ನಿಯಮಗಳನ್ನು ಪಾಲಿಸುವವರೂ, ಸಂಕೋಚ ಪ್ರವೃತ್ತಿಯವರೂ ಆಗಿರುತ್ತಾರೆ.
- ಗಂಡುಮಕ್ಕಳು ಒಂದು ಗುಂಪಿನ ಹೆಣ್ಣುಮಕ್ಕಳಿಗಿಂತ ಹೆಚ್ಚು ಸಕ್ರಿಯರೂ, ದೈಹಿಕವಾಗಿ ಮತ್ತು ಶಾಬ್ದಿಕವಾಗಿ ಆಕ್ರಮಣಶೀಲ ಪ್ರವೃತ್ತಿಯವರೂ ಆಗಿರುತ್ತಾರೆ, ಹಾಗೂ ಅಂಕಗಣಿತದ ತರ್ಕಸ ಮತ್ತು ದೃಶ್ಯ-ಸ್ಥಳವಿಸ್ತಾರದ ಕೌಶಲ್ಯಗಳಲ್ಲಿ ಹೆಣ್ಣುಮಕ್ಕಳಿಗಿಂತ ಮುಂದಿರುತ್ತಾರೆ.
- ಈ **ಲಿಂಗತ್ವ** ವ್ಯತ್ಯಾಸಗಳು ಸಣ್ಣ ಪ್ರಮಾಣದಲ್ಲಿರುತ್ತವೆ, ಒಂದು ಗುಂಪಿನೊಳಗಿನ ಸ್ಥಾಪಿತ ಮಾನದಂಡಗಳಿಗೆ ಮಾತ್ರ ಸಂಬಂಧಿಸಿರುತ್ತವೆ, ಒಟ್ಟಿನಲ್ಲಿ ಸ್ತ್ರೀ ಮತ್ತು ಪುರುಷರ ನಡುವೆ ಮಾನಸಿಕ ಭಿನ್ನತೆಗಳಿಗಿಂತ ಸಾಮ್ಯಗಳೇ ಜಾಸ್ತಿ.
- ವಾಸ್ತವದಲ್ಲಿ ಸುಳ್ಳಾಗಿರುವ, ಸಾಂಪ್ರದಾಯಿಕ **ಲಿಂಗತ್ವ** ಪಾತ್ರಗಳಿಗೆ ಸಂಬಂಧಿಸಿದ ರೂಢಮಾದರಿಗಳ ಮೇಲಿನ ಸಾಂಸ್ಕೃತಿಕ ಮಿಥ್ಯೆಗಳು -ಸ್ತ್ರೀಯರು ಸಾಮಾಜಿಕವಾಗಿ ಹೆಚ್ಚು ತೊಡಗಿಕೊಳ್ಳುವವರೂ, ಸುಲಭವಾಗಿ ಮನವೊಲಿಸಬಹುದಾದವರೂ, ಅತಾರ್ಕಿಕರೂ, ಯಾವುದನ್ನು ಹೆಚ್ಚು ವಿಶ್ಲೇಷಿಸುವ ಗೊಡವೆಗೆ ಹೋಗದವರೂ, ಸಾಧನೆಯತ್ತ ದೃಷ್ಟಿ ಇಟ್ಟವರೂ ಆಗಿರುತ್ತಾರೆ ಎಂಬಂತಹ ಕಲ್ಪನೆಗಳನ್ನು ಒಳಗೊಳ್ಳುತ್ತವೆ.
- ಬಹುಕಾಲ ಉಳಿದುಕೊಂಡು ಬರುವ ಈ "ಸಾಂಸ್ಕೃತಿಕ ಮಿಥ್ಯೆಗಳು ಸಂಜ್ಞಾನಾತ್ಮಕ ಸಾಧನೆಯಲ್ಲಿ ಲಿಂಗತ್ವವ್ಯತ್ಯಾಸಗಳನ್ನು ಉತ್ತೇಜಿಸುವ, ಹಾಗೂ ಅದರ ಆಧಾರದ ಮೇಲೆ ಸ್ತ್ರೀ-ಪುರುಷರು ಭಿನ್ನ ವೃತ್ತಿಗಳನ್ನು ಆರಿಸಿಕೊಳ್ಳಲು ಪ್ರೇರೇಪಿಸುವ ಸ್ವಯಂ ಸಾಧಕ ಭವಿಷ್ಯಕಥನವನ್ನು ಸೃಷ್ಟಿಸುತ್ತವೆ.

**ಲಿಂಗತ್ವ ಪ್ರರೂಪಣೆಯಲ್ಲಿನ ಬೆಳವಣಿಗೆಯ ಪ್ರವೃತ್ತಿಗಳು**

- ಎರಡೂವರೆಯಿಂದ ಮೂರು ವರ್ಷಗಳಾಗುವ ಹೊತ್ತಿಗೆ ಮಕ್ಕಳು ತಮ್ಮನ್ನು ತಾವು ಹುಡುಗರು ಅಥವಾ ಹುಡುಗಿಯರೆಂದು ಗುರುತಿಸಿಕೊಳ್ಳಲು ಆರಂಭಿಸುತ್ತವೆ, ಇದು **ಲಿಂಗತ್ವ ಅನನ್ಯತೆ**ಯ ಬೆಳವಣಿಗೆಯಲ್ಲಿನ ಮೊದಲ ಹೆಜ್ಜೆ.
- 5 ರಿಂದ 7 ವರ್ಷಗಳಾಗುವ ಹೊತ್ತಿಗೆ ಸಾಮಾಜಿಕ ಲಿಂಗತ್ವವು ಎಂದೂ ಬದಲಾಗದ ಒಂದು ಶಾಶ್ವತ ಲಕ್ಷಣ ಎಂಬುದನ್ನು ಮಕ್ಕಳು ಅರಿಯತೊಡಗುತ್ತಾರೆ.

- ಮಕ್ಕಳು ಒಂದು **ಮೂಲಭೂತ ಲಿಂಗತ್ವ ಅನನ್ಯತೆ**ಯನ್ನು ಪ್ರದರ್ಶಿಸುವ ಅವಧಿಯಲ್ಲಿಯೇ **ಲಿಂಗತ್ವ** ಪಾತ್ರಗಳ ರೂಢಮಾದರಿಗಳನ್ನೂ ಕಲಿಯಲಾರಂಭಿಸುತ್ತಾರೆ.
- ಮಕ್ಕಳಿಗೆ 10 ರಿಂದ 11 ವರ್ಷಗಳಾಗುವ ಹೊತ್ತಿಗೆ ಸ್ತ್ರೀ ಮತ್ತು ಪುರುಷ ವ್ಯಕ್ತಿತ್ವಗಳ ವಿಶಿಷ್ಟ ಲಕ್ಷಣಗಳನ್ನು ಕುರಿತ ರೂಢಮಾದರೀಕರಣವು ಅವರಲ್ಲಿ ಮತ್ತೂ ಬಲವಾಗುತ್ತದೆ, ಮತ್ತು ರೂಢಮಾದರಿಗಳು ಕಡ್ಡಾಯವಾಗಿ ಅನುಸರಿಸಲೇಬೇಕಾದ ಸೂಚಿಗಳು ಎಂಬಂತೆ ಹರೆಯಪೂರ್ವದ ಈ ಮಕ್ಕಳು ಭಾವಿಸತೊಡಗುತ್ತಾರೆ.
- ಬಾಲ್ಯಕಾಲದ ಮಧ್ಯಭಾಗದಲ್ಲಿ ಲಿಂಗತ್ವದ ಬಗೆಗಿನ ಮಕ್ಕಳ ಆಲೋಚನಾಕ್ರಮವು ಹೆಚ್ಚು ಮುಕ್ತವಾಗತೊಡಗುತ್ತದೆ.
- ಹದಿಹರೆಯದ **ಲಿಂಗತ್ವ ಉತ್ಕಟತೆ** ಅವಧಿಯಲ್ಲಿ ಲಿಂಗತ್ವವನ್ನು ಕುರಿತ ಮಕ್ಕಳ ಆಲೋಚನಾಕ್ರಮವು ಮರಳಿ ಪೆಡಸಾಗುತ್ತದೆ.
- **ಲಿಂಗತ್ವ** ಮೂಲಭೂತ ಅನನ್ಯತೆಯನ್ನು ಪಡೆಯುವ ಬಹು ಮೊದಲೇ ಹೆಚ್ಚಿನ ಚಿಣ್ಣರು ಆಟಿಕೆಗಳು ಮತ್ತು ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಲಿಂಗತ್ವ ಪ್ರರೂಪಿತ ಆಯ್ಕೆಗಳನ್ನು ಪ್ರದರ್ಶಿಸಲು ತೊಡಗಿರುತ್ತಾರೆ.
- 3 ವರ್ಷಗಳಾಗುವ ಹೊತ್ತಿಗೆ ಮಕ್ಕಳು ಸಮ ಲಿಂಗದ ಆಟದ ಜೊತೆಗಾರರೊಂದಿಗೆ ಸಮಯ ಕಳೆಯಲು ಬಯಸುವ ಮೂಲಕ, ಮತ್ತು ಬೇರೆ ಲಿಂಗದ ಸದಸ್ಯರ ವಿರುದ್ಧ ಸ್ಪಷ್ಟ ಪೂವಾಗ್ರಹಗಳನ್ನು ಬೆಳೆಸಿಕೊಳ್ಳುವ ಮೂಲಕ **ಲಿಂಗತ್ವ ಪ್ರತ್ಯೇಕಿಸುವಿಕೆ**ಯನ್ನು ವ್ಯಕ್ತಪಡಿಸುತ್ತಿರುತ್ತಾರೆ.
- ಗಂಡುಮಕ್ಕಳು ಹೆಣ್ಣುಮಕ್ಕಳಿಗಿಂತ ಹೆಚ್ಚು ಬಲವಾದ ಲಿಂಗತ್ವ ಪ್ರರೂಪಣೆಯ ಒತ್ತಡಗಳನ್ನು ಎದುರಿಸುತ್ತಾರೆ ಮತ್ತು ಆಟಿಕೆ ಮತ್ತು ಚಟುವಟಿಕೆಗಳ ಲಿಂಗತ್ವ ಪ್ರರೂಪಿತ ಆಯ್ಕೆಗಳನ್ನು ಬಹುಬೇಗನೇ ಬೆಳೆಸಿಕೊಳ್ಳುತ್ತಾರೆ.

**ಲಿಂಗತ್ವ ಪ್ರರೂಪಣೆ ಮತ್ತು ಲಿಂಗತ್ವ ಪಾತ್ರಗಳ ವಿಕಾಸಕ್ಕೆ ಸಂಬಂಧಿಸಿದ ಸಿದ್ಧಾಂತಗಳು**

- **ಜೀವವಿಕಾಸ ಸಿದ್ಧಾಂತ**ದ ಪ್ರಕಾರ ಮಾನವ ವಿಕಾಸದ ಇತಿಹಾಸದಲ್ಲಿ ಸ್ತ್ರೀ ಮತ್ತು ಪುರುಷರು ವಿಕಾಸಕ್ಕೆ ಸಂಬಂಧಿಸಿದ ಬೇರೆ ಬೇರೆ ಬಗೆಯ ಒತ್ತಡಗಳನ್ನು ಎದುರಿಸಿದರು, ಮತ್ತು ನೈಸರ್ಗಿಕ ಆಯ್ಕೆಯ ಪ್ರಕ್ರಿಯೆಯು ಸ್ತ್ರೀ ಮತ್ತು ಪುರುಷರ ನಡುವೆ ಮೂಲಭೂತ ವ್ಯತ್ಯಾಸಗಳನ್ನೇ ಸೃಷ್ಟಿಸಿತು.
- ಮನಿ ಮತ್ತು ಎರ್‌ಹಾರ್ಡ್ ರವರ ಜೀವಸಾಮಾಜಿಕ ಸಿದ್ಧಾಂತವು ಜನನಪೂರ್ವದಲ್ಲಿ ನಡೆಯುವ ಜೈವಿಕ ಬೆಳವಣಿಗೆಗಳು ಮತ್ತು ಅವು ಒಂದು ಮಗುವಿನ ಸಾಮಾಜಿಕೀಕರಣದ ಮೇಲೆ ಬೀರುವ ಪ್ರಭಾವಗಳ ಮೇಲೆ ಒತ್ತನ್ನು ನೀಡುತ್ತದೆ ಜನನಪೂರ್ವದಲ್ಲಿ ಆಗುವ ಹಾರ್ಮೋನುಗಳ ವ್ಯತ್ಯಾಸಗಳು ಆಟದ ಶೈಲಿಗಳು ಮತ್ತು ಆಕ್ರಮಣಶೀಲ ವರ್ತನೆಗಳ ವ್ಯತ್ಯಾಸಗಳಿಗೂ ಕಾರಣವಾಗುತ್ತವೆ.
- ಹಾಗಿದ್ದರೂ ಒಬ್ಬ ವ್ಯಕ್ತಿಯ **ಲಿಂಗತ್ವ** ಅನನ್ಯತೆ ಮತ್ತು ಲಿಂಗತ್ವ ಪಾತ್ರಗಳ ಆಯ್ಕೆಯನ್ನು ನಿರ್ಧರಿಸುವಲ್ಲಿ ಸಾಮಾಜಿಕ ಗುರುತು ನೀಡುವಿಕೆ ಮತ್ತು ಲಿಂಗತ್ವ ಪಾತ್ರ ಸಾಮಾಜಿಕೀಕರಣಗಳ ಪ್ರಕ್ರಿಯೆಗಳು ಬಹು ಮುಖ್ಯವಾದ ಕೊಡುಗೆಯನ್ನು ನೀಡುತ್ತವೆ.
- ಮಕ್ಕಳು ತಮ್ಮ **ಈಡಿಪಸ್** ಮತ್ತು **ಎಲೆಕ್ಟ್ರಾ ಭಾವಗ್ರಂಥಿ**ಗಳನ್ನು ಪರಿಹರಿಸಿಕೊಳ್ಳಲು ಸ್ವ-ಲಿಂಗೀಯ ಪಾಲಕರೊಂದಿಗೆ ಗುರುತಿಸಿಕೊಳ್ಳುತ್ತಾರೆ, ಮತ್ತು ಆ ಪ್ರಕ್ರಿಯೆಯ ಮೂಲಕ ಲಿಂಗತ್ವ ಪ್ರರೂಪಣೆಗೆ ಒಳಗಾಗುತ್ತಾರೆ ಎಂಬ ಫ್ರಾಯ್ಡ್ ನ ಪ್ರತಿಪಾದನೆಗಳಿಗೆ ಸಂಶೋಧನೆಗಳು ಸಾಕ್ಷ್ಯ ಒದಗಿಸುವುದಿಲ್ಲ.
- ಮಕ್ಕಳು ಆಟಿಕೆಗಳು ಮತ್ತು ಚಟುವಟಿಕೆಗಳ ಲಿಂಗತ್ವ ಪ್ರರೂಪಿತ ಆಯ್ಕೆಗಳನ್ನು **ನೇರ ಪಾಠ**ದ ಮೂಲಕ ದಕ್ಕಿಸಿಕೊಳ್ಳುವುದು **ಸಾಮಾಜಿಕ ಕಲಿಕೆಯ ಸಿದ್ಧಾಂತ**ದೊಂದಿಗೆ ಸುಸಂಬದ್ಧವಾಗಿ ಹೊಂದಿಕೊಳ್ಳುತ್ತದೆ. ಶಾಲಾಪೂರ್ವ ಹಂತದ ಮಕ್ಕಳು *ಎರಡೂ ಲಿಂಗ ಮಾದರಿ* ಗಳನ್ನು ಗಮನಿಸುತ್ತ ಹೋದಂತೆ **ಲಿಂಗತ್ವ** ರೂಢಮಾದರಿಗಳನ್ನು ತಿಳಿದುಕೊಳ್ಳುತ್ತ ಹೋಗುವುದರಿಂದ ಲಿಂಗತ್ವ ಪ್ರರೂಪಣೆಗೆ **ಅವಲೋಕನದ ಮೂಲಕ ಕಲಿಕೆ**ಯು ಕೂಡಾ ತನ್ನ ಕೊಡುಗೆ ನೀಡುತ್ತದೆ.

- ಮಕ್ಕಳು **ಸ್ವ-ಸಾಮಾಜಿಕೀಕರಣ**ಗೊಳ್ಳುತ್ತಾರೆ, ಮತ್ತು ಸಲಿಂಗೀಯ ಮಾದರಿಗಳನ್ನು ತಮಗೆ ಬೇಕಾದಂತೆ ಅನುಸರಣೆ ಮಾಡಲು ಆರಂಭಿಸುವ ಮತ್ತು ಲಿಂಗ ಪ್ರರೂಪಿತರಾಗುವ **ಲಿಂಗಸಂಬಂಧಿ ಸುಸಂಗತತೆ**ಯ ಹಂತವನ್ನು ತಲುಪುವ ಮುನ್ನ ಅವರು **ಲಿಂಗತ್ವ ಮೂಲಭೂತ ಅನನ್ಯತೆ** ಮತ್ತು **ಲಿಂಗಸಂಬಂಧಿ ಸ್ಥಿರತೆ**ಯ ಹಂತಗಳನ್ನು ದಾಟಿ ಬರಬೇಕು ಎಂದು ಕೋಲ್‌ಬರ್ಗ್ ರವರ ಸಂಜ್ಞಾನಾತ್ಮಕ ವಿಕಾಸ ಸಿದ್ಧಾಂತವು ಪ್ರತಿಪಾದಿಸುತ್ತದೆ. ಆದರೆ ಲಿಂಗ ಪ್ರರೂಪಣೆಯ ಪ್ರಕ್ರಿಯೆಯು ಕೋಲ್‌ಬರ್ಗ್ ಯೋಚಿಸಿದ್ದಕ್ಕಿಂತಲೂ ಮೊದಲೇ ಶುರುವಾಗುತ್ತದೆ ಎಂದು ಸಂಶೋಧನೆಗಳು ಸೂಚಿಸುತ್ತವೆ ಮತ್ತು **ಲಿಂಗತ್ವ** ಸುಸಂಗತತೆಯ ಪ್ರಕ್ರಿಯೆಗಳು **ಲಿಂಗತ್ವ** ಪ್ರರೂಪಣೆಯ ಬಲದ ಮುನ್ನೋಟವನ್ನು ನೀಡಲಾರವು.
- ಮಾರ್ಟಿನ್ ಮತ್ತು ಹಾಲ್ವರ್ಸನ್ ರವರ **ಲಿಂಗತ್ವ ಮನೋನಕ್ಷೆ ಸಿದ್ಧಾಂತದ** ಪ್ರಕಾರ ಲಿಂಗಸಂಬಂಧಿ ಮೂಲಭೂತ ಅನನ್ಯತೆಯನ್ನು ರಚಿಸಿಕೊಂಡ ಮಕ್ಕಳು "ಒಳಗುಂಪು/ಹೊರಗುಂಪು" ಹಾಗೂ **ಸ್ವ- ಲಿಂಗತ್ವಮನೋನಕ್ಷೆ** ರಚಿಸಿಕೊಳ್ಳುತ್ತಾರೆ. ಈ ಸಂರಚನೆಗಳು **ಲಿಂಗತ್ವ** ಸಂಬಂಧಿ ಮಾಹಿತಿಗಳನ್ನು ಸಂಸ್ಕರಿಸುವ ಹಾಗೂ **ಲಿಂಗತ್ವ** ಪಾತ್ರಗಳನ್ನು ರೂಪಿಸುವ ಕಥಾಲೇಖ (script) ಗಳ ಹಾಗೆ ಕೆಲಸ ಮಾಡುತ್ತವೆ. ಸಂರಚನೆಗಳೊಂದಿಗೆ ಸುಸಂಬದ್ಧವಾಗಿ ಹೊಂದುವ ಮಾಹಿತಿಗಳನ್ನು ಸಂಗ್ರಹಿಸಲಾಗುತ್ತದೆ ಮತ್ತು ಉಳಿಸಿಕೊಳ್ಳಲಾಗುತ್ತದೆ, ಸಂರಚನೆಗಳೊಂದಿಗೆ ಸುಸಂಬದ್ಧವಾಗಿ ಹೊಂದದ ಮಾಹಿತಿಗಳನ್ನು ಕಡೆಗಣಿಸಲಾಗುತ್ತದೆ ಮತ್ತು ತಿರುಚಲಾಗುತ್ತದೆ, ಹೀಗೆ ವಾಸ್ತವದಲ್ಲಿ ಆಧಾರಗಳೇ ಇಲ್ಲದ **ಲಿಂಗತ್ವ** ರೂಢಮಾದರಿಗಳನ್ನು ಮುಂದುವರೆಸಿಕೊಂಡು ಹೋಗಲಾಗುತ್ತದೆ.
- **ಲಿಂಗತ್ವ** ಪ್ರರೂಪಣೆಯ ಒಂದು ಉತ್ತಮ ವಿವರಣೆಯನ್ನು ಪಡೆಯುವುದಾದರೆ ಒಂದು ವ್ಯಾಪಕ ದೃಷ್ಟಿಕೋನದ, ಸಮನ್ವಯಕಾರೀ ಸಿದ್ಧಾಂತದ ಅಗತ್ಯವಿದೆ. ಅದು ಈ ಹಿಂದೆ ಬಂದ ಎಲ್ಲಾ ಸಿದ್ಧಾಂತಗಳಲ್ಲಿನ-ಅಂದರೆ ಜೀವಸಾಮಾಜಿಕ, ಸಾಮಾಜಿಕ ಕಲಿಕೆ, ಸಂಜ್ಞಾನಾತ್ಮಕ ವಿಕಾಸ, ಮತ್ತು **ಲಿಂಗತ್ವ** ಮನೋನಕ್ಷೆ ಎಲ್ಲಾ ಸಿದ್ಧಾಂತಗಳಲ್ಲಿನ ಪ್ರಕ್ರಿಯೆಗಳೂ ಸಹ **ಲಿಂಗತ್ವ** ಪಾತ್ರಗಳ ಬೆಳವಣಿಗೆಗೆ ಸಹಾಯ ಮಾಡುತ್ತವೆ ಎಂಬುದನ್ನು ಗುರುತಿಸುತ್ತದೆ.

## ಅಧ್ಯಾಯ 12 ಅಭ್ಯಾಸದ ಪ್ರಶ್ನೆಗಳು

**ಬಹು ಆಯ್ಕೆಯ ಪ್ರಶ್ನೆಗಳು**: ಲಿಂಗ ವ್ಯತ್ಯಾಸಗಳು ಮತ್ತು **ಲಿಂಗತ್ವ** ಪಾತ್ರಗಳ ಬೆಳವಣಿಗೆಯ ಬಗೆಗಿನ ನಿಮ್ಮ ಗ್ರಹಿಕೆಯನ್ನು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸುವ ಮೂಲಕ ಪರಿಶೀಲಿಸಿಕೊಳ್ಳಿ. ಕೆಳಗಿನ ಆಯ್ಕೆಗಳಲ್ಲಿ ಉತ್ತಮವೆನಿಸದ ಉತ್ತರವನ್ನು ಆರಿಸಿ, ಉತ್ತರಗಳು ಅನುಬಂಧದಲ್ಲಿವೆ.

1. ಒಂದು ವ್ಯಕ್ತಿಯ ಜೈವಿಕ ಅನನ್ಯತೆಯು –ಅವರ ವರ್ಣತಂತುಗಳು, ದೈಹಿಕವಾಗಿ ಪ್ರಕಟವಾಗುವ ಅವರ ಅನನ್ಯತೆಯ ಲಕ್ಷಣಗಳು, ಮತ್ತು ಹಾರ್ಮೋನುಗಳ ಪ್ರಭಾವಗಳು- ಇದಕ್ಕೆ ಸಂಬಂಧಿಸಿದೆ,
   ಅ. ಲಿಂಗತ್ವ
   ಬ. ಪುರುಷತನ ಅಥವಾ ಸ್ತ್ರೀತನ
   ಕ. ಜೈವಿಕ ಲಿಂಗ
   ಡ. ಉಭಯಲಿಂಗತ್ವ

2. ಅಮೇರಿಕದ ಸಾಂಪ್ರದಾಯಿಕ ಸಾಮಾಜಿಕ ಸೂಚಿಯು ಪುರುಷರು ತಮ್ಮ ವರ್ತನೆಗಳು ಮತ್ತು ಗುಣಲಕ್ಷಣಗಳಲ್ಲಿ -----ಪಾತ್ರವನ್ನು ಅಳವಡಿಸಿಕೊಳ್ಳಲು ಮತ್ತು ಸ್ತ್ರೀಯರು ತಮ್ಮ ವರ್ತನೆಗಳು ಮತ್ತು ಗುಣಲಕ್ಷಣಗಳಲ್ಲಿ ------ಪಾತ್ರವನ್ನು ಅಳವಡಿಸಿಕೊಳ್ಳಲು ನಿರ್ದೇಶಿಸುತ್ತದೆ.
   ಅ. ಅಭಿವ್ಯಂಜಕ;ಕಾರಣಭೂತ
   ಬ. ಪ್ರಧಾನ; ಸ್ಪರ್ಧಾತ್ಮಕ
   ಕ. ಕಾರಣಭೂತ; ಅಭಿವ್ಯಂಜಕ;
   ಡ. ಪಾಲನೆಪೋಷಣೆಯ; ಸಹಕಾರಿ ಮನೋಧರ್ಮದ

3. ಆಂಡೀಯು ಹರೆಯವನ್ನು ಪ್ರವೇಶಿಸುತ್ತಿದ್ದಾನೆ. ಅವನು ಮೊದಮೊದಲು ತನ್ನ ತಾಯಿಗೆ ಮನೆಗೆಲಸದಲ್ಲಿ ಸಹಾಯ ಮಾಡುತ್ತಿದ್ದನಾದರೂ ಈಗ ನಿರಾಕರಿಸುತ್ತಾನೆ, ಮನೆಗೆಲಸವು "ಮಹಿಳೆಯರ ಕೆಲಸ" ಎನ್ನುತ್ತಾನೆ. ಅವನಿಗೆ ಈಗ ಸ್ಪರ್ಧಾತ್ಮಕ ಕ್ರೀಡೆಗಳಲ್ಲಿ ಹೊಸತಾಗಿ ಆಸಕ್ತಿ ಮೂಡಿದೆ ಮತ್ತು ತನ್ನ ಸ್ನೇಹಿತರೊಂದಿಗೆ ಒಡನಾಡುವಾಗ ಅವನು ತನ್ನ ಅಭಿಪ್ರಾಯಗಳನ್ನೇ ಸಾಧಿಸುತ್ತಾನೆ. ಆಂಡೀಯು ಹೆಚ್ಚಿನ ಪಕ್ಷ ಇದನ್ನು ಅನುಭವಿಸುತ್ತಿದ್ದಾನೆ,
ಅ. **ಲಿಂಗತ್ವ ಉತ್ಕಟತೆ** ತೀವ್ರಗೊಳಿಸುವಿಕೆ
ಬ. **ಲಿಂಗತ್ವ** ಪ್ರತ್ಯೇಕೀಕರಣ
ಕ **ಲಿಂಗತ್ವ** ಪುರೂಪಣ
ಡ. ಜೈವಿಕ ಪ್ರೌಢಾವಸ್ಥೆಯ ಪರಿಣಾಮ

4. ಮಕ್ಕಳು ಶಿಶ್ನಹಂತವನ್ನು ದಾಟುತ್ತಿರುವಾಗ ಅವರು ತಮ್ಮ ಕಾಮೇಚ್ಛೆಯನ್ನು ತಮ್ಮ ಜನನಾಂಗವನ್ನು ತಡವಿಕೊಳ್ಳುವ ಮೂಲಕ ತೀರಿಸಿಕೊಳ್ಳುತ್ತಾರೆ ಎಂಬ ವಾದವನ್ನು ಫ್ರಾಯ್ಡ್ ಮುಂದಿಡುತ್ತಾನೆ, ಇದು ನಡೆಯುವುದು ಸರಿಸುಮಾರಾಗಿ,
ಅ. 0-3 ವರ್ಷಗಳಲ್ಲಿ.
ಬ. 3-6 ವರ್ಷಗಳಲ್ಲಿ.
ಕ. 6-12 ವರ್ಷಗಳಲ್ಲಿ.
ಡ. 12 ವರ್ಷ ಅಥವಾ ಅದಕ್ಕಿಂತ ಮೇಲ್ಪಟ್ಟು.

5. ಜನನಪೂರ್ವ ಅವಧಿಯಲ್ಲಿ ಭ್ರೂಣವು ಪುರುಷ ಹಾರ್ಮೋನುಗಳಿಗೆ ಒಡ್ಡಿಕೊಳ್ಳುವುದರ ಪರಿಣಾಮವಾಗಿ ಹೆಣ್ಣು ಶಿಶುಗಳಲ್ಲಿ ಗಂಡಿನ ಬಾಹ್ಯ ಜನನಾಂಗಗಳು ಬೆಳೆಯುವ ಸಿಂಡ್ರೋಮ್ ಅನ್ನು ಹೀಗೆ ಕರೆಯುತ್ತಾರೆ,
ಅ. ಆಂಡ್ರೋಜಿನೈಸ್ಡ್ ಫಿಮೇಲ್ ಸಿಂಡ್ರೋಮ್.
ಬ. ಕಂಜೆನಿಟಲ್ ಅಡ್ರಿನಲ್ ಹೈಪರ್‌ಪ್ಲಾಸಿಯ.
ಕ. ಟೆಸ್ಟಿಕ್ಯುಲರ್ ಫೆಮಿನೈಝೇಶನ್ ಸಿಂಡ್ರೋಮ್.
ಡ. ಜೈವಿಕ ಪ್ರೌಢಾವಸ್ಥೆಯ ಅವಧಿಯ ಪರಿಣಾಮ.

6. ಚಟುವಟಿಕೆಯ ಮಟ್ಟಗಳಿಗೆ ಸಂಬಂಧಿಸಿ **ಲಿಂಗತ್ವ** ವ್ಯತ್ಯಾಸವಿರುತ್ತದೆ. ಈ ವಿಷಯದ ಮೇಲಿನ ಸಂಶೋಧನೆಯು ಹೇಳುವುದೇನೆಂದರೆ,
ಅ. ಹೆಣ್ಣುಮಕ್ಕಳ ಚಟುವಟಿಕೆಯ ಮಟ್ಟವು ಗಂಡುಮಕ್ಕಳಿಗಿಂತ ಹೆಚ್ಚಿರುತ್ತದೆ.
ಬ. ಗಂಡುಮಕ್ಕಳ ಚಟುವಟಿಕೆಯ ಮಟ್ಟವು ಹೆಣ್ಣುಮಕ್ಕಳಿಗಿಂತ ಹೆಚ್ಚಿರುತ್ತದೆ.
ಕ. ಚಟುವಟಿಕೆಯ ಮಟ್ಟದಲ್ಲಿನ ವಿಕಾಸದ ವ್ಯತ್ಯಾಸವು ಶಾಲಾಪೂರ್ವ ಹಂತದಲ್ಲಿ ಮೊದಲು ಬೆಳೆಯತೊಡಗುತ್ತದೆ.
ಡ. ಚಟುವಟಿಕೆಯ ಮಟ್ಟದಲ್ಲಿನ **ಲಿಂಗತ್ವ** ವ್ಯತ್ಯಾಸವು ಹರೆಯದಲ್ಲಿ ಮೊದಲು ಬೆಳೆಯತೊಡಗುತ್ತದೆ.

7. ಕಾಯಿಲೆಗಳು ಮತ್ತು ವಿಕಾಸದ ಸಮಸ್ಯೆಗಳನ್ನೂ ಒಳಗೊಂಡ ಬೆಳವಣಿಗೆಯ ದೌರ್ಬಲ್ಯಗಳಲ್ಲಿ ಮಾನಸಿಕವಾಗಿ **ಲಿಂಗತ್ವ** ವ್ಯತ್ಯಾಸವಿರುತ್ತದೆ. ಈ ವಿಷಯದ ಮೇಲಿನ ಸಂಶೋಧನೆಯು ಹೇಳುವುದೇನೆಂದರೆ,
ಅ. ವಿಕಾಸದ ದೌರ್ಬಲ್ಯವು ಹೆಣ್ಣುಮಕ್ಕಳಲ್ಲಿ ಗಂಡುಮಕ್ಕಳಿಗಿಂತ ಹೆಚ್ಚಿನ ಮಟ್ಟದಲ್ಲಿರುತ್ತದೆ.
ಬ. ವಿಕಾಸದ ದೌರ್ಬಲ್ಯವು ಗಂಡುಮಕ್ಕಳಲ್ಲಿ ಹೆಣ್ಣುಮಕ್ಕಳಿಗಿಂತ ಹೆಚ್ಚಿನ ಮಟ್ಟದಲ್ಲಿರುತ್ತದೆ.
ಕ.ವಿಕಾಸದ ದೌರ್ಬಲ್ಯಗಳಲ್ಲಿನ **ಲಿಂಗತ್ವ** ವ್ಯತ್ಯಾಸವು ಮೊದಲು ಶಾಲಾಪೂರ್ವ ಹಂತದಲ್ಲಿ ಬೆಳೆಯತೊಡಗುತ್ತದೆ.
ಡವಿಕಾಸದದೌರ್ಬಲ್ಯಗಳಲ್ಲಿನ **ಲಿಂಗತ್ವ** ವ್ಯತ್ಯಾಸವು ಮೊದಲು ಹರೆಯದಲ್ಲಿ ಬೆಳೆಯತೊಡಗುತ್ತದೆ.

8. ಲಿಂಗಗಳ ನಡುವಿನ ಮಾನಸಿಕ ವ್ಯತ್ಯಾಸಗಳನ್ನು ಕುರಿತು ನಾವು ಏನೆಂದು ತೀರ್ಮಾನಿಸಬೇಕು?

ಅ. ಸ್ತ್ರೀ ಮತ್ತು ಪುರುಷರು ಮಾನಸಿಕವಾಗಿ ಭಿನ್ನವಾಗಿರುವುದಕ್ಕಿಂತ ಹೆಚ್ಚು ಸಾಮ್ಯವನ್ನು ಹೊಂದಿರುತ್ತಾರೆ.

ಬ. ಮಾನಸಿಕ ಲಿಂಗ ವ್ಯತ್ಯಾಸಗಳು ಒಂದು ಗುಂಪಿನ ವ್ಯತ್ಯಾಗಳಿಗಿಂತಲೂ ಒಬ್ಬ ವ್ಯಕ್ತಿಯ ವರ್ತನೆಗಳಿಗೆ ಹೆಚ್ಚು ಅನ್ವಯವಾಗುತ್ತವೆ.

ಕ. ಯಾವ ಲಿಂಗ ವ್ಯತ್ಯಾಸಗಳು ಹೆಚ್ಚು ಅರ್ಥಪೂರ್ಣ ಮತ್ತು ಹೆಚ್ಚು ವಿಶ್ವಾಸಾರ್ಹ ಎನ್ನುವುದರ ಬಗೆಗೆ ಹೆಚ್ಚಿನ ಮನೋವಿಜ್ಞಾನಿಗಳ ಒಮ್ಮತವಿದೆ.

ಡ. ಮಾನಸಿಕ ಲಿಂಗ ವ್ಯತ್ಯಾಸಗಳು ಜೈವಿಕ ವ್ಯತ್ಯಾಸಗಳ ಕಾರಣಕ್ಕೆ ಅಸ್ತಿತ್ವದಲ್ಲಿರುತ್ತವೆಯೇ ಹೊರತು, ಸಾಂಸ್ಕೃತಿಕ ಅಥವಾ ಸಾಮಾಜಿಕ ಕಾರಣಗಳಿಂದ ಅಲ್ಲ.

9. ಒಂದು ಸಾರಭೂತ ಪಕ್ಷಪಾತದ ನಿಲುವಿಗೆ ಅತೀ ಹತ್ತಿರದಲ್ಲಿರುವ, ಅಥವಾ ವ್ಯಕ್ತಿಯ ಜೈವಿಕ ಸ್ಥಿತಿಯು ಆತನ ಅಥವಾ ಆಕೆಯ ವರ್ತನೆಗಳು ಮತ್ತು ಗುಣಲಕ್ಷಣಗಳನ್ನು ನಿರ್ಧರಿಸುತ್ತದೆ ಎನ್ನುವ ದೃಷ್ಟಿಕೋನವನ್ನು ಹೊಂದಿದ ಲಿಂಗತ್ವ ಪ್ರರೂಪಣೆಯ ಸಿದ್ಧಾಂತವನ್ನು ಹೀಗೆನ್ನುತ್ತಾರೆ,

ಅ. ಫ್ರಾಯ್ಡ್‌ನ ಮನೋವಿಶ್ಲೇಷಣಾ ಸಿದ್ಧಾಂತ.

ಬ. **ಲಿಂಗತ್ವ** ಮನೋನಕ್ಷೆಯ ಸಿದ್ಧಾಂತ.

ಕ. ಕೋಲ್‌ಬರ್ಗ್ ರವರ ಸಂಜ್ಞಾನಾತ್ಮಕ ವಿಕಾಸ ಸಿದ್ಧಾಂತ.

ಡ. ಜೀವವಿಕಾಸವಾದಿ ಸಿದ್ಧಾಂತ.